ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 25 ಭಾನುವಾರ 2023

ಸಂಪುಟ: 44 | ಸಂಚಿಕೆ: 70 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರಲ್ಲಿ ಬೆಳೆಯಿತು ಸೇಬು ■ಪುಟ–10

ರಷ್ಯಾದಲ್ಲಿ ಭುಗಿಲೆದ್ದ ಆಂತರಿಕ ದಂಗೆ; ಕೆಲವು ನಗರಗಳಿಗೆ ಖಾಸಗಿ ಸೇನೆ ವ್ಯಾಗ್ನರ್ ಮುತ್ತಿಗೆ ■ಪುಟ–2


ಬಿಎಸ್‌ವೈ–ಸಂತೋಷ್ ಮುಸುಕಿನ ಗುದ್ದಾಟ

ವಿಪಕ್ಷನಾಯಕ, ಬಿಜೆಪಿ ರಾಜ್ಯಾಧ್ಯಕ್ಷರ ನೇಮಕ

ಕಗ್ಗಂಟು









● ಅಶೋಕ್ ವಿಪಕ್ಷ ನಾಯಕರನ್ನಾಗಿ, ಪುತ್ರ ವಿಜಯೇಂದ್ರರ ರಾಜ್ಯಾಧ್ಯಕ್ಷ ಸ್ಥಾನಕ್ಕೆ ತರಲು ಯಡಿಯೂರಪ್ಪ ತೆರೆಮರೆ ಕಸರತ್ತು ● ಆದರೆ ಡಾ.ಅಶ್ವತ್ಥನಾರಾಯಣ, ವಿ.ಸೋಮಣ್ಣ ಈ ಸ್ಥಾನಗಳಿಗೇರಿಸಲು ಸಂತೋಷ್ ಮಾಸ್ಟರ್ ಪ್ಲಾನ್



ಬೆಂಗಳೂರು, ಜೂ.24 (ಕೆಎಂಶಿ)– ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮುಸುಕಿನ ಗುದ್ದಾಟದಿಂದ ವಿಧಾನಸಭೆಯ ಪ್ರತಿಪಕ್ಷದ ನಾಯಕ ಹಾಗೂ ರಾಜ್ಯಾಧ್ಯಕ್ಷರ ನೇಮಕಾತಿ ವರಿಷ್ಠರಿಗೆ ಕಗ್ಗಂಟಾಗಿದೆ.

ಜುಲೈ 3ರಿಂದ ವಿಧಾನಮಂಡಲ ಅಧಿವೇಶನ ಆರಂಭಗೊಳ್ಳುತ್ತಿದ್ದು, ಅದಕ್ಕೂ ಮುನ್ನವೇ ಪ್ರತಿಪಕ್ಷದ ನಾಯಕನ ಆಯ್ಕೆಯಾಗಬೇಕಾಗಿದೆ. ಪ್ರತಿಪಕ್ಷದ ನಾಯಕ ಸ್ಥಾನಕ್ಕೆ ಮಾಜಿ ಸಚಿವ ಆರ್.ಅಶೋಕ್ ಅವರನ್ನು ನೇಮಿಸಿ, ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಮ್ಮ ಪುತ್ರ ವಿಜಯೇಂದ್ರ ಕೂರಿಸಲು ಯಡಿಯೂರಪ್ಪ ತೆರೆಮರೆಯ ಕಸರತ್ತು ನಡೆಸಿದ್ದಾರೆ. ಯಡಿಯೂರಪ್ಪ ಅವರ ಚಿಂತನೆಗೆ ಸಂತೋಷ್ ಸಂಪೂರ್ಣ ವಿರೋಧ ವ್ಯಕ್ತಪಡಿಸಿದ್ದಾರೆ. ಪ್ರತಿಪಕ್ಷದ ಸ್ಥಾನಕ್ಕೆ ಡಾ.ಅಶ್ವತ್ಥನಾರಾಯಣ್, ರಾಜ್ಯಾಧ್ಯಕ್ಷ ಸ್ಥಾನಕ್ಕೆ ವಿ.ಸೋಮಣ್ಣ ಅವರನ್ನು ● 9ನೇ ಪುಟಕ್ಕೆ

ಗೃಹಲಕ್ಷ್ಮಿಗೆ ಅರ್ಜಿ ಸಲ್ಲಿಸಲು ಹೊಸ ಆ್ಯಪ್;

ಆ.17ರ ನಂತರ ಯಜಮಾನಿಗೆ ಮನಿ

● ಮಹಿಳಾ-ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮಾಹಿತಿ ● ಜೂ.27ರ ಸಂಪುಟ ಸಭೆಯಲ್ಲಿ ಸಿಎಂಗೆ ಹೊಸ ಆ್ಯಪ್ ಕುರಿತು ವಿವರಣೆ ● ಫಲಾನುಭವಿಗಳು ಶುಲ್ಕವಿಲ್ಲದೆ ಅರ್ಜಿ ಸಲ್ಲಿಕೆಗೆ ಅವಕಾಶ

ಮೈಸೂರು,ಜೂ.24(ಎಂಟಿವೈ) – ಕರ್ನಾಟಕ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸಲು ಪ್ರತ್ಯೇಕ ಆ್ಯಪ್ ವ್ಯವಸ್ಥೆ ಮಾಡಲಾಗಿದ್ದು, ಜೂ.27 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಪೂರ್ಣ ಮಾಹಿತಿ ನೀಡಿ, ಅಂತಿಮ ನಿರ್ಣಯ ಕೈಗೊಳ್ಳುವುದಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಚಾಮುಂಡಿ ಬೆಟ್ಟದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆ ಜಾರಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಫಲಾನುಭವಿಗಳು ಸುಲಭವಾಗಿ ಅರ್ಜಿ ಸಲ್ಲಿಸಲು ಸಹಕಾರಿಯಾಗಲೆಂದು ಹೊಸ ಆ್ಯಪ್ ರೂಪಿಸಲಾಗಿದೆ. ಈ ಆ್ಯಪ್ ಮೂಲಕವೇ ರಾಜ್ಯದ ಎಲ್ಲಾ ಭಾಗದಲ್ಲಿರುವ ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಸೌಲಭ್ಯ ಪಡೆದುಕೊಳ್ಳಲು ಅರ್ಜಿ ● 9ನೇ ಪುಟಕ್ಕೆ

ನಾಡದೇವಿಯ ದರ್ಶನ ಪಡೆದ ಲಕ್ಷ್ಮಿ



ಮೈಸೂರು: ಆಷಾಢ ಮಾಸದ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕುಟುಂಬದ ಸದಸ್ಯರೊಂದಿಗೆ ಶನಿವಾರ ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ನಾಡದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚುನಾವಣೆಗೂ ಮುನ್ನ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿ ಎಂದು ಪ್ರಾರ್ಥಿಸಿ ಹರಕೆ ಹೊತ್ತಿದ್ದೆ. ಅದರಂತೆ ಕಾಂಗ್ರೆಸ್ ಪ್ರಚಂಡ ಗೆಲುವು ಸಾಧಿಸಿದೆ. ಅದಕ್ಕಾಗಿ ದೇವಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದ್ದೇನೆ. ರಾಜ್ಯದಲ್ಲಿ ಉತ್ತಮ ಮಳೆ–ಬೆಳೆಯಾಗಲೆಂದು ಪ್ರಾರ್ಥಿಸಿದ್ದೇನೆ ಎಂದರು.

ಜೂ.30ಕ್ಕೆ ಮೈಷುಗರ್‌ನಲ್ಲಿ ಕಬ್ಬು ಅರೆಯುವ ಕಾರ್ಯ ಆರಂಭ


● ಕಟಾವು ಮಾಡಿದ 24 ಗಂಟೆಯೊಳಗೆ ಕಬ್ಬು ನುರಿಯುವ ವ್ಯವಸ್ಥೆ ● ರೈತರಿಗೆ 14 ದಿನಕ್ಕೊಮ್ಮೆ ಕಬ್ಬಿನ ಹಣ ಪಾವತಿ ಭರವಸೆ

ಮಂಡ್ಯ, ಜೂ.24 (ಮೋಹನ್‌ರಾಜ್)– ಮಂಡ್ಯ ಜಿಲ್ಲೆಯ ಜೀವನಾಡಿ ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಜೂ.30ರಿಂದ ಕಬ್ಬು ಅರೆಯುವ ಕಾರ್ಯ ಪ್ರಾರಂಭವಾಗಲಿದೆ ಎಂದು ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಅಪ್ಪಾ ಪಾಟೀಲ್ ಸಾಹೇಬ್ ತಿಳಿಸಿದರು.



ಅಪ್ಪಾ ಪಾಟೀಲ್ ಸಾಹೇಬ್

ಶನಿವಾರ ನಗರದ ಮೈಷುಗರ್ ಸಕ್ಕರೆ ಕಾರ್ಖಾನೆ ಆಡಳಿತ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬು ಅರೆಯಲು ಕಾರ್ಖಾನೆ ಸಂಪೂರ್ಣ ಸಜ್ಜಾಗಿದ್ದು, ಅಗತ್ಯ ಕಾರ್ಮಿಕರ ವ್ಯವಸ್ಥೆ ಮಾಡಲಾಗಿದೆ. ರೈತರು ಕಟಾವು ಮಾಡಿದ ಕಬ್ಬನ್ನು 24 ಗಂಟೆಯೊಳಗೆ ನುರಿಸಬಹುದು. ರೈತರಿಗೆ 14 ದಿನಕ್ಕೊಮ್ಮೆ ಕಬ್ಬಿನ ಬಿಲ್ ಪಾವತಿಸಲಾಗುವುದು. ರೈತರು ತಮ್ಮ ಕಬ್ಬನ್ನು ಖಾಸಗಿ ಕಾರ್ಖಾನೆಗೆ ಸರಬರಾಜು ಮಾಡದೇ ಸರ್ಕಾರಿ ಸ್ವಾಮ್ಯದ ಮೈಷುಗರ್‌ಗೆ ಸರಬರಾಜು ಮಾಡುವಂತೆ ಮನವಿ ಮಾಡಿದರು. ಇದುವರೆಗೆ ಮೈಷುಗರ್ ಸಕ್ಕರೆ ಕಾರ್ಖಾನೆ ಬೇರೆ ಕಾರ್ಖಾನೆಗಳಂತೆ ರೈತರ ಕಬ್ಬಿನ ಬಾಕಿ ಹಣ ಉಳಿಸಿಕೊಂಡಿಲ್ಲ. ಮೂರ್‍ನಾಲ್ಕು ವರ್ಷ ಕಾರ್ಖಾನೆ ಸ್ಥಗಿತಗೊಂಡಿದ್ದರಿಂದ ಕಾರ್ಖಾನೆ ಮಿಷನರಿಗಳು ರಿಪೇರಿಗೆ ಬಂದಿದ್ದವು. ಆ ಕಾರಣಕ್ಕಾಗಿ ಕಾರ್ಖಾನೆ ನಿಗದಿತ ಸಮಯಕ್ಕೆ ಕಾರ್ಯಾರಂಭವಾಗಲಿಲ್ಲ. ಕಬ್ಬು ಅರೆಯುವಿಕೆಗೆ ಬೇಕಾದ ಪ್ರಮುಖ ಮಿಷನರಿಗಳನ್ನು ಪುಣೆ, ಕೊಲ್ಲಾಪುರಕ್ಕೆ ಕಳುಹಿಸಿ ಸಮರ್ಪಕ ರೀತಿಯಲ್ಲಿ ರಿಪೇರಿ ಮಾಡಿಸಿಕೊಂಡು ತರಲಾಗಿದೆ. ಶೇ.90ರಷ್ಟು ಕಾರ್ಖಾನೆ ಕಬ್ಬು ಅರೆಯಲು ಶಕ್ತವಾಗಿದೆ ಎಂದು ಸ್ಪಷ್ಟಪಡಿಸಿದರು. ಇನ್ನೆರಡು ದಿನಗಳಲ್ಲಿ ಟ್ರಯಲ್ ಆರಂಭವಾಗಲಿದೆ. ಮೊದಲ ದಿನ ಸಾಂಕೇತಿಕವಾಗಿ 500 ಟನ್ ಕಬ್ಬು ಅರೆಯಲಾಗುತ್ತದೆ. 4–5 ದಿನಗಳ ಬಳಿಕ ನಿತ್ಯ 2000–2500 ಟನ್ ಕಬ್ಬು ಅರೆಯಲು ನಾವು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಈಗಾಗಲೇ ಐದೂವರೆ ಲಕ್ಷ ಟನ್ ಕಬ್ಬು ಅರೆಯಲು ಒಪ್ಪಿಗೆ ಆಗಿದೆ. ಆದರೆ ಕೆಲವು ರೈತರು ಈಗಾಗಲೇ ಖಾಸಗಿ ಕಾರ್ಖಾನೆ ಮತ್ತು ಆಲೆಮನೆಗಳಿಗೆ ಕರಾರು ಮಾಡಿಕೊಂಡ ಕೆಲ ಟನ್ ಕಬ್ಬನ್ನು ಸರಬರಾಜು ಮಾಡಿದ್ದಾರೆ. ಈ ನಿಟ್ಟಿನಲ್ಲಿ ಸುಮಾರು ನಾಲ್ಕು ಲಕ್ಷ ಟನ್ ಕಬ್ಬು ಸದ್ಯಕ್ಕೆ ಕಾರ್ಖಾನೆಗೆ ಬರಲಿದ್ದು, ಅಷ್ಟನ್ನು ಅರೆಯಲು ಕಾರ್ಖಾನೆ ಸಿದ್ಧವಿದೆ ಎಂದರು. ಕಬ್ಬು ನುರಿಯಲು 3500 ● 9ನೇ ಪುಟಕ್ಕೆ



ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ

62.25 ಲಕ್ಷ ನಿವೃತ್ತಿ ವೇತನ ಗುಳುಂ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿವೃತ್ತ ಅಧೀಕ್ಷಕ, ಕಂಪ್ಯೂಟರ್ ಆಪರೇಟರ್ ವಿರುದ್ಧ ಪ್ರಕರಣ ದಾಖಲು

ಚಾಮರಾಜನಗರ, ಜೂ. 24– ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ 62.25 ಲಕ್ಷ ರೂ. ನಿವೃತ್ತಿ ವೇತನ ಗುಳುಂ ಮಾಡಿರುವ ಬಗ್ಗೆ ವರದಿಯಾಗಿದ್ದು, ಈ ಸಂಬಂಧ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿವೃತ್ತ ಅಧೀಕ್ಷಕ ಹಾಗೂ ಕಂಪ್ಯೂಟರ್ ಆಪರೇಟರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿವೃತ್ತ ಅಧೀಕ್ಷಕ ಮೈಸೂರಿನ ಶಕ್ತಿನಗರ ನಿವಾಸಿ ಆರ್. ಗಿರೀಶ(61) ಮತ್ತು ಕೊಳ್ಳೇಗಾಲ ತಾಲೂಕು ಧನಗೆರೆ ಗ್ರಾಮದ ಕಂಪ್ಯೂಟರ್ ಆಪರೇಟರ್ ಕೆ. ಮೋಹನ್ ಆರೋಪಕ್ಕೆ ಗುರಿಯಾದವರಾಗಿದ್ದು, ಗಿರೀಶ ಅವರು ನಿವೃತ್ತಿಯಾದ ನಂತರವೂ ನ್ಯಾಷನಲ್ ಪೆನ್ಷನ್ ಸ್ಕೀಂ (ಎನ್‌ಎಸ್‌ಪಿ)ಗೆ ಸಂಬಂಧಿಸಿದ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ದುರುಪಯೋಗಪಡಿಸಿಕೊಂಡು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ನಿವೃತ್ತಿ ವೇತನವನ್ನು ತಮ್ಮ ಹಾಗೂ ಬೇರೆಯವರ ಖಾತೆಗಳಿಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ವಂಚನೆ ಎಸಗಿದ್ದಾರೆ ಎಂದು ಚಾಮರಾಜನಗರ ಜಿಲ್ಲಾ ● 9ನೇ ಪುಟಕ್ಕೆ

ಹಲಸು ಸವಿಯುವವರಿಗೆ ಸದವಕಾಶ...

ಮೈಸೂರಲ್ಲಿ ಆರಂಭವಾಗಿದೆ

ಹಲಸಿನ ಹಬ್ಬ



● ವಿವಿಧ ತಳಿಯ ಹಣ್ಣು, ಗಿಡಗಳ ಪ್ರದರ್ಶನ ಮತ್ತು ಮಾರಾಟ ● ರುಚಿ ಸವಿಯಲು ಇಂದೇ ಕಡೇ ದಿನ

ಮೈಸೂರು, ಜೂ.24(ಆರ್‌ಕೆ)–ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ 'ಹಲಸಿನ ಹಬ್ಬ' ಶನಿವಾರ ಆರಂಭವಾಯಿತು.

ಸಹಜ ಸಮೃದ್ಧ ಸಂಸ್ಥೆಯು ಜಿಪಿಝಡ್–ಜರ್ಮನಿ, ನಮ್ಮ ಫಾರ್ಮರ್ಸ್ ಮಾರ್ಕೆಟ್ ಸಹಯೋಗದೊಂದಿಗೆ ಆಯೋಜಿಸಿರುವ ಈ ಹಬ್ಬಕ್ಕೆ ಹಲಸಿನ ಹಣ್ಣನ್ನು ಕತ್ತರಿಸುವ ಮೂಲಕ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಚಾಲನೆ ನೀಡಿದರು. ಈ ಸಂದರ್ಭ ಮಾತನಾಡಿದ ಅವರು, ಆಹಾರವೆಂದರೆ ಅದು ಕೇವಲ ಪದಾರ್ಥವಲ್ಲ. ಬೇಸಾಯದೊಂದಿಗಿನ ಸಂಸ್ಕೃತಿಯ ಪ್ರತೀಕವೂ ಹೌದು. ಬಾಯಿಗಿಟ್ಟರೆ ಜೇನು ಸವಿದಂತೆನಿಸುವ ಹಲಸು ಔಷಧೀಯ ಗುಣಗಳನ್ನು ಹೊಂದಿದ್ದು, ಎಳೆಯ ಕಾಯಿಯಿಂದ ತೊಳೆ, ಬಿಡಿಸಿದ ಬೀಜದವರೆಗೂ ತಿನ್ನಲು ಬರುವ ಕಲ್ಪವೃಕ್ಷ. ಹಲವು ರೀತಿಯಲ್ಲಿ ಉಪಯೋಗಕಾರಿ ಎಂದರು. ಮಳೆಯಾಶ್ರಿತ ಪ್ರದೇಶಗಳಲ್ಲಿ ಬೆಳೆಯುವ ಹಲಸನ್ನು ಮತ್ತಷ್ಟು ಪ್ರಸಿದ್ಧಿಗೊಳಿಸಿ ಉತ್ತೇಜನ ನೀಡಲು ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ. ಜಿಲ್ಲಾಡಳಿತವೂ ಪ್ರೋತ್ಸಾಹ ನೀಡಲಿದೆ. ಸಹಜ ಕೃಷಿ ಮತ್ತು ತೋಟಗಾರಿಕೆ ಬೆಳೆಗೂ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಜಿಪಿಝಡ್–ಜರ್ಮನಿ ಸಲಹೆಗಾರ



ಬೆರ್ತ್‌ಹೋಲ್ಡ್ ವಾಲಿಬರ್ ಅವರು 'ಹಲಸಿನ ಅಡುಗೆ ಪುಸ್ತಕ ಹಾಗೂ 'ಸಹಜ ಸೀಡ್ಸ್' ಕ್ಯಾಟಲಾಗ್ ಅನ್ನು ಬಿಡುಗಡೆ ಮಾಡಿದರು. ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ನಿರ್ದೇಶಕ ಪ್ರೊ. ಸಂಜಯ್ ಕುಮಾರ್ ಸಿಂಗ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ರುದ್ರೇಶ್, ತಿಪಟೂರಿನ ಚೌಡ್ಲಾಪುರದ ಶಂಕರ್, ಹಲಸಿನ ತಳಿ ಸಂರಕ್ಷಕ ಶಂಕರಯ್ಯ, ರೋಟರಿ ಕ್ಲಬ್‌ನ ಜಗದೀಶ್‌ಗೌಡ, ಗುಬ್ಬಿ ತಾಲೂಕು ಚೇಳೂರು ಸಿದ್ದು ಹಲಸು ತಳಿ ಸಂರಕ್ಷಕ ಪರಮೇಶ್, ಆಹಾರ ತಜ್ಞರಾದ ಡಾ.ಲಲಿತಾ, ಜೈವಿಕ ಕೃಷಿ ಸೊಸೈಟಿಯ ಡಾ.ಕೆ.ರಾಮಕೃಷ್ಣಪ್ಪ, ಸಹಜ ಸಮೃದ್ಧದ ನಿರ್ದೇಶಕ ಜಿ.ಕೃಷ್ಣಪ್ರಸಾದ್ ಈ ಸಂದರ್ಭ ಉಪಸ್ಥಿತರಿದ್ದರು.

ರಾಜ್ಯದ ಹಲಸಿನ ತಳಿಗಳಾದ ರುದ್ರಾಕ್ಷಿ, ನಾಗಚಂದ್ರ, ಲಾಲ್‌ಬಾಗ್ ಮಧುರ, ರಾಮಚಂದ್ರ, ಚಂದ್ರ ಹಲಸು, ಅಂಬಲಿ, ● 9ನೇ ಪುಟಕ್ಕೆ

ವಿ.ಸೋಮಣ್ಣರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ನೀಡಿ



ಮೈಸೂರು, ಜೂ.24(ಎಸ್‌ಪಿಎನ್)– ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ರಾಜ್ಯದಿಂದ ಭಾರತೀಯ ಜನತಾ ಪಾರ್ಟಿಯ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ರಾಜ್ಯಾಧ್ಯಕ್ಷರ ನ್ನಾಗಿ ಆಯ್ಕೆ ಮಾಡುವಂತೆ ಮೈಸೂರು ಜಿಲ್ಲಾ ಘಟಕ ಒತ್ತಾಯಿಸಿದೆ.

ಈ ಕುರಿತು ಪ್ರಕಟಣೆ ನೀಡಿರುವ ಬಿಜೆಪಿ ಜಿಲ್ಲಾ ಘಟಕದ ಮಾಧ್ಯಮ ಸಹ ವಕ್ತಾರ ಕೆ.ವಸಂತಕುಮಾರ್, ಬಿಜೆಪಿ ರಾಷ್ಟ್ರೀಯ ಪಕ್ಷ ಬೃಹತ್ ಕಾರ್ಯಕರ್ತರ ಪಡೆಯನ್ನು ಹೊಂದಿದೆ. ಪ್ರತಿ ಮೂರು ವರ್ಷಗಳಿಗೊಮ್ಮೆ ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಹೊಸದಾಗಿ ಅಧ್ಯಕ್ಷರು, ಪದಾಧಿಕಾರಿಗಳ ಆಯ್ಕೆ ನಡೆಯುತ್ತದೆ.

ಎಲ್ಲಾ ವರ್ಗದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬಲ್ಲ ಚಾಣಾಕ್ಷತನ ವಿ.ಸೋಮಣ್ಣ ಅವರಲ್ಲಿದೆ. ಹಲವು ಉಪಚುನಾವಣೆಗಳಲ್ಲಿ ಪಕ್ಷದ ಪರ ಪ್ರಚಾರ ಮಾಡಿ, ಪಕ್ಷವನ್ನು ತಳಮಟ್ಟದಿಂದ ಸಂಘಟನೆ ಮಾಡಿರುವ ಮಾಜಿ ಸಚಿವ ಸೋಮಣ್ಣ ಅವರು ರಾಜ್ಯಾಧ್ಯಕ್ಷರಾದರೆ, ಸಂಘಟನೆ ದೃಷ್ಟಿಯಿಂದ ಒಳ್ಳೆಯದು ಎಂದು ಕೆ.ವಸಂತಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಶುಭಂ ಲೈಫ್ ಟೈಮ್ ಉಚಿತ ಸೇವಾ ಯೋಜನೆ



ಮೈಸೂರು,ಜೂ.24(ಎಂಟಿವೈ)– ಮೈಸೂರಿನ ಶುಭಂ ದಿ ಎಲೆಕ್ಟ್ರಾನಿಕ್ ಸಂಸ್ಥೆಯಲ್ಲಿ ಶುಭಂ ಲೈಫ್ ಟೈಮ್ ಉಚಿತ ಸೇವಾ ಯೋಜನೆ ಆರಂಭಿಸಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಂಪತ್ ಕೊಠಾರಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಲೆಕ್ಟ್ರಾನಿಕ್ ಸಾಧನಗಳಾದ ಎಲ್‌ಇಡಿ ಟಿವಿ, ವಾಷಿಂಗ್ ಮೆಷಿನ್, ರೆಫ್ರಿಜರೇಟರ್, ಏರ್‌ಕಂಡಿಷನರ್ ಹಾಗೂ ಇನ್ನಿತರ 10 ವಸ್ತುಗಳ ರಿಪೇರಿ ಮತ್ತು ಸರ್ವಿಸ್ ಅನ್ನು ಕೇವಲ 1,500ಕ್ಕೆ ಜೀವನಪರ್ಯಂತ ಮಾಡಿಕೊಡಲಾಗುತ್ತದೆ. ಸೌಲಭ್ಯ ಪಡೆಯಲು ಶುಭಂ ಆ್ಯಪ್ ಅಥವಾ ಸ್ಟೋರ್‌ಯ ಮಳಿಗೆಗಳಲ್ಲಿ ನೋಂದಣಿ ಮಾಡಬಹುದಾಗಿದೆ. ಆ.10ರೊಳಗೆ ನೋಂದಾಯಿಸಿದವರಿಗೆ ಲಕ್ಕಿ ಡ್ರಾ ಲಭ್ಯವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಉಪವ್ಯವಸ್ಥಾಪಕ ಲೋಹಿತ್‌ಕುಮಾರ್, ಯೋಜನೆ ನಿರ್ವಾಹಕ ಲೋಕೇಶ್, ಖರೀದಿ ವ್ಯವಸ್ಥಾಪಕ ನಕೀಬ್ ಅಹಮದ್ ಇದ್ದರು.

ಅಪಘಾತಕ್ಕೀಡಾಗುವ ವಾಹನ ಸವಾರರ ನೆರವಿಗಾಗಿ ರಕ್ಷಾ ಕ್ಯೂಆರ್ ಆ್ಯಪ್

ಮೈಸೂರು,ಜೂ.24(ಎಂಟಿವೈ)– ರಸ್ತೆ ಅಪಘಾತಕ್ಕೀಡಾಗುವ ವಾಹನ ಸವಾರರ ನೆರವಿಗಾಗಿ ರಕ್ಷಾ ಕ್ಯೂಆರ್ ಆ್ಯಪ್‌ವೊಂದನ್ನು ರಚಿಸಲಾಗಿದೆ ಎಂದು ಹೈವೇ ಡಿಲೈಟ್ ಡಿಜಿಟಲ್ ಸೇವಾ ವೇದಿಕೆ ಗ್ರಾಹಕ ಸಂಪರ್ಕಾಧಿಕಾರಿ ಶೋಭಾ ತಿಳಿಸಿದ್ದಾರೆ.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ರಸ್ತೆ ಅಪಘಾತದಲ್ಲಿ ಮೃತಪಡುವವರ ಸಂಖ್ಯೆ ಹೆಚ್ಚಾಗಿದೆ. ರಸ್ತೆ ಅಪಘಾತ ಸಂಭವಿಸಿದರೆ, ಗಾಯಾಳುಗಳ ನೆರವಿಗೆ ಧಾವಿಸಲು ಯಾರೂ ಬರುವುದಿಲ್ಲ. ಪೊಲೀಸರ ಭಯ ಹಾಗೂ ನ್ಯಾಯಾಲಯಕ್ಕೆ ಹೋಗಿ ಸಾಕ್ಷಿ ಹೇಳಬೇಕಾಗುತ್ತದೆ ಎಂದು ಬಹುತೇಕರು ನೆರವಿಗೆ ಬರಲು ಹಿಂದೇಟು ಹಾಕುತ್ತಾರೆ. ಇದರಿಂದ ಗಾಯಾಳುಗಳು ಸಾವನ್ನಪ್ಪುತ್ತಿರುವುದು ಹೆಚ್ಚಾಗುತ್ತಿದೆ. ದೇಶದಲ್ಲಿ ಪ್ರತಿ ವರ್ಷ 1.5 ಲಕ್ಷ ಮಂದಿ ರಸ್ತೆ ಅಪಘಾತದಲ್ಲಿ ಸಾವನ್ನಪ್ಪುತ್ತಿದ್ದಾರೆ. ಗಾಯಾಳುಗಳಿಗೆ ತುರ್ತಾಗಿ ನೆರವು ಸಿಕ್ಕರೆ ಶೇ.50ರಷ್ಟು ಜನರನ್ನು ಬದುಕಿಸಬಹುದಾಗಿದೆ. ಈ ನಿಟ್ಟಿನಲ್ಲಿ ರಕ್ಷಾ ಕ್ಯೂಆರ್ ಆ್ಯಪ್ ರಚಿಸಿರುವುದಾಗಿ ತಿಳಿಸಿದರು.

ಈ ಆ್ಯಪ್ ಕ್ಯೂಆರ್ ಕೋಡ್ ಆಗಿದ್ದು ವಾಹನಕ್ಕೆ ಅಂಟಿಸಬಹುದಾಗಿದೆ. ಇದರಲ್ಲಿ ವಾಹನದ ಮಾಲೀಕರ ಸಂಪೂರ್ಣ ಮಾಹಿತಿ ಇರುತ್ತದೆ. ತುರ್ತುಕರೆಗೆ ಅವಕಾಶವಿರುತ್ತದೆ. ವಾಹನ ಅಪಘಾತಕ್ಕೀಡಾದರೆ ಸಾರ್ವಜನಿಕರು ತಮ್ಮ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಪಘಾತಕ್ಕೊಳಗಾದ ವ್ಯಕ್ತಿಯ ಮನೆಗೆ ಕರೆ ಮಾಡುವ ಅವಕಾಶವಿರುತ್ತದೆ. ನಮ್ಮ ಸಂಸ್ಥೆಯ ಸದಸ್ಯರು ಅಪಘಾತದ ಸ್ಥಳ ಸಮೀಪದ ಆಸ್ಪತ್ರೆ, ಪೊಲೀಸ್ ಠಾಣೆ ಮಾಹಿತಿ ನೀಡಲಿದ್ದಾರೆ. ಈ ಆ್ಯಪ್ ಮೂಲಕ ಕರೆ ಮಾಡಿದ ವ್ಯಕ್ತಿಯ ಮಾಹಿತಿ ಗೌಪ್ಯವಾಗಿರುತ್ತದೆ. ಗಾಯಾಳುಗಳ ಕುಟುಂಬದ ಸದಸ್ಯರಿಗೂ ಮೊಬೈಲ್ ಸಂಖ್ಯೆ ಗೋಚರಿಸುವುದಿಲ್ಲ. ಆಸಕ್ತರು, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಹೈವೇ ಡಿಲೈಟ್ ಎಂಬ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಕ್ಯೂಆರ್ ಕೋಡ್ ಪಡೆಯಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಮಲ್ಲಣ್ಣ, ರಕ್ಷಿತ್, ಇಬ್ರಾಹಿಂ, ಮುರಳಿ ಇದ್ದರು.

ಮುಂದುವರೆದ ಆನ್‌ಲೈನ್ ದೋಖಾ

ಉಡುಗೊರೆ ಆಸೆ ತೋರಿಸಿ ಮಹಿಳೆಗೆ 15 ಲಕ್ಷ ವಂಚನೆ

ಮೈಸೂರು, ಜೂ.24– ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ವ್ಯಕ್ತಿ ವಿದೇಶದಿಂದ ಉಡುಗೊರೆ ಕಳುಹಿಸಿರುವುದಾಗಿ ನಂಬಿಸಿ ಆನ್‌ಲೈನ್ ಮೂಲಕ ಮಹಿಳೆಯೊಬ್ಬರಿಂದ 15 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಅಶೋಕಪುರಂ ನಿವಾಸಿ ಎಸ್.ಭುವನೇಶ್ವರಿ(32) ವಂಚನೆಗೊಳಗಾದವರಾಗಿದ್ದು, ಕಳೆದ 20 ದಿನದ ಹಿಂದೆ ಇನ್‌ಸ್ಟಾಗ್ರಾಂನಲ್ಲಿ ಇವರಿಗೆ ಪರಿಚಯವಾದ ವ್ಯಕ್ತಿ, ತಾನು ಯುಕೆಯಲ್ಲಿ ಅಕೌಂಟ್ಸ್ ಮ್ಯಾನೇಜರ್ ಆಗಿರುವುದಾಗಿ ತಿಳಿಸಿ, ಸ್ನೇಹ ಬೆಳೆಸಿಕೊಂಡಿದ್ದರು. ನಂತರ ಯುಕೆಯಿಂದ ಉಡುಗೊರೆ ಕಳುಹಿಸಿರುವುದಾಗಿ ವಾಟ್ಸಾಪ್ ಮೆಸೇಜ್ ರವಾನಿಸಿದ್ದಾರೆ. ನಂತರ 9089596195 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಯುಕೆಯಿಂದ ಪಾರ್ಸಲ್ ಬಂದಿರುವುದಾಗಿಯೂ ಅದಕ್ಕೆ ಕಸ್ಟಮ್ಸ್ ಚಾರ್ಜ್ ಕಟ್ಟಬೇಕೆಂದು ತಿಳಿಸಿ 15 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನ್ಯಾವಸ್ಥೆಯಲ್ಲಿ ವಾಟ್ಸಾಪ್ ಕಾಲ್ ಮಾಡಿ ವರ್ತಕನಿಗೆ ಬ್ಲ್ಯಾಕ್‌ಮೇಲ್; 3.06 ಲಕ್ಷ ಸುಲಿಗೆ

ಗೋಣಿಕೊಪ್ಪ, ಜೂ.24–ವಾಟ್ಸಾಪ್ ಮೂಲಕ ನಗ್ನಾವಸ್ಥೆಯಲ್ಲಿ ವಿಡಿಯೋ ಕಾಲ್ ಮಾಡಿ, ವರ್ತಕನನ್ನು ಹೆದರಿಸಿ 3.06 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಕೊಂಡ ಬಗ್ಗೆ ವರದಿಯಾಗಿದೆ. ಗೋಣಿಕೊಪ್ಪ ನಿವಾಸಿ ಹೆಚ್.ಕೆ.ಹರ್ಷವರ್ಧನ್(31) ಬ್ಲ್ಯಾಕ್‌ಮೇಲ್‌ಗೆ ಒಳಗಾಗಿ ಹಣ ಕಳೆದುಕೊಂಡವರಾಗಿದ್ದು, ಜೂ.19ರಂದು ಮಧ್ಯಾಹ್ನ 1 ಗಂಟೆ ಸುಮಾರಿನಲ್ಲಿ 7626862066 ಸಂಖ್ಯೆಯಿಂದ ಇವರ ಮೊಬೈಲ್‌ಗೆ 'ಹಾಯ್' ಎಂದು ಸಂದೇಶ ಬಂದಿದೆ. ನಂತರ ಅಂದು ರಾತ್ರಿ ಯುವತಿಯೋರ್ವಳು ನಗ್ನಳಾಗಿ ವೀಡಿಯೋ ಕಾಲ್ ಮಾಡಿದ್ದು, ಅದನ್ನು ಕಂಡು ಹರ್ಷವರ್ಧನ್ ಕಾಲ್ ಕಟ್ ಮಾಡಿದರಾದರೂ, ನಂತರ ಅವರೊಂದಿಗೆ ಮಾತನಾಡಿದ ಶ್ರುತಿ ಪವಾರ್ ಮತ್ತು ವಿಕ್ರಮ್ ಸಿಂಗ್ ಎಂಬುವರು ಹರ್ಷವರ್ಧನ್ ಅವರ ವಿಡಿಯೋವನ್ನು ಕುಟುಂಬದವರಿಗೆ ರವಾನಿಸುವುದಾಗಿ ಹೆದರಿಸಿ, ಜೂ.20ರಂದು ಮುಂಜಾನೆ 3.30ರಿಂದ ಸಂಜೆ 7.30ವರೆಗೆ ಹಂತ ಹಂತವಾಗಿ 3,05,999 ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಈ ಸಂಬಂಧ ಗೋಣಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವರ್ಕ್ ಫ್ರಂ ಹೋಂ ಆಮಿಷ: ವ್ಯಕ್ತಿಗೆ 1.03 ಲಕ್ಷ ರೂ. ವಂಚನೆ

ಮಡಿಕೇರಿ, ಜೂ.24–ವರ್ಕ್ ಫ್ರಂ ಹೋಂ ಜಾಹೀರಾತು ನೀಡಿ ವ್ಯಕ್ತಿಯೋರ್ವನಿಂದ ಆನ್‌ಲೈನ್ ಮೂಲಕ 1.03 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ. ಮಡಿಕೇರಿ ತಾಲೂಕು ಕೆ.ಬಾಡಗ ಗ್ರಾಮದ ಬಿ.ಪಿ.ಪವನ್‌ಕುಮಾರ್(38) ವಂಚನೆಗೊಳಗಾದವರಾಗಿದ್ದು, ಇವರು ಇನ್‌ಸ್ಟಾಗ್ರಾಂನಲ್ಲಿ ವರ್ಕ್ ಫ್ರಂ ಹೋಂ ಜಾಹೀರಾತನ್ನು ನೋಡಿ, ಅದರ ಲಿಂಕ್ ಅನ್ನು ಪ್ರೆಸ್ ಮಾಡಿದಾಗ ಇವರ ವಾಟ್ಸಾಪ್‌ಗೆ ಟೆಲಿಗ್ರಾಂ ಆ್ಯಪ್‌ನ ಐಡಿಯನ್ನು ರವಾನಿಸಿ ಟೆಲಿಗ್ರಾಂ ಗ್ರೂಪ್‌ಗೆ ಜಾಯಿನ್ ಆಗುವಂತೆ ತಿಳಿಸಲಾಗಿದೆ. ನಂತರ ಯು ಕಾಯಿನ್ ಡಾಟ್ ಟಿವಿ ಎಂಬ ವೆಬ್‌ಸೈಟ್ ಅನ್ನು ನೀಡಿ ಅದಕ್ಕೆ ಮೊದಲಿಗೆ 12 ಸಾವಿರ ರೂ. ಪಾವತಿಸಿ, ಟಾಸ್ಕ್ ನೀಡಲಾಗಿದೆ. ಅವರು ಟಾಸ್ಕ್ ಪೂರ್ಣಗೊಳಿಸಿದ ನಂತರ, ಟಾಸ್ಕ್ ಕಂಪ್ಲೀಟ್ ಆಗಿಲ್ಲ ಎಂದು ತಿಳಿಸಿ ಮತ್ತೆ 37 ಸಾವಿರ ರೂ. ವರ್ಗಾವಣೆ ಮಾಡಿಸಿಕೊಂಡಿದ್ದಲ್ಲದೆ, ಟಾಸ್ಕ್‌ನ ಕೊನೆ ಹಂತದಲ್ಲಿದ್ದೀರಿ. 54 ಸಾವಿರ ರೂ. ಪಾವತಿಸಿದರೆ ಟಾಸ್ಕ್ ಕಂಪ್ಲೀಟ್ ಆಗುತ್ತದೆ ಎಂದು ಹೇಳಿ ಹಣವನ್ನು ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ಅನಂತರ ಇವರು ಇನ್ನೊಮ್ಮೆ ಮಾಡಿರುವ ಹಣವನ್ನು ವಿತ್‌ಡ್ರಾ ಮಾಡಲು 50 ಸಾವಿರ ರೂ. ವರ್ಗಾವಣೆ ಮಾಡುವಂತೆ ತಿಳಿಸಲಾಗಿದೆ. ಒಟ್ಟಾರೆ ಪವನ್ ಕುಮಾರ್ ಅವರಿಂದ ಹಂತ ಹಂತವಾಗಿ 1.03 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಷ್ಯಾದಲ್ಲಿ ಭುಗಿಲೆದ್ದ ಆಂತರಿಕ ದಂಗೆ; ಕೆಲವು ನಗರಗಳಿಗೆ ಖಾಸಗಿ ಸೇನೆ ವ್ಯಾಗ್ನರ್ ಮುತ್ತಿಗೆ





ಯೆವ್ಗೆನಿ ಪ್ರಿಗೋಜಿನ್ ವ್ಲಾಡಿಮಿರ್ ಪುಟಿನ್

ಮಾಸ್ಕೋ, ಜೂ.24– ರಷ್ಯಾದಲ್ಲಿ ಆಂತರಿಕ ದಂಗೆ ಭುಗಿ ಲೆದ್ದಿದ್ದು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಪರಮಾಪ್ತ ವ್ಯಾಗ್ನರ್ ಖಾಸಗಿ ಸೇನೆ ರಷ್ಯಾದ ಕೆಲವು ನಗರಗಳಿಗೆ ಮುತ್ತಿಗೆ ಹಾಕಿದ್ದು, ರಷ್ಯಾವನ್ನು ರಕ್ಷಿಸಿಯೇ ತೀರುತ್ತೇವೆ ಎಂದು ಪುಟಿನ್ ಪ್ರತಿಜ್ಞೆ ಮಾಡಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶನಿವಾರ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದ್ದು, ಖಾಸಗಿ ಸೇನೆ ವ್ಯಾಗ್ನರ್ ಮುಖ್ಯಸ್ಥ ಯೆವ್ಗೆನಿ ಪ್ರಿಗೋಜಿನ್ ಘೋಷಿಸಿದ ಸಶಸ್ತ್ರ ದಂಗೆಯಿಂದ ದೇಶ ಮತ್ತು ಜನರನ್ನು ರಕ್ಷಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಈ ದಂಗೆಯು ನಮ್ಮ ರಾಜ್ಯತ್ವಕ್ಕೆ ಮಾರಕ. ದಂಗೆ ನಡೆಸುವವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಪ್ರತಿಜ್ಞೆ ಮಾಡಿದರು.

ಈ ದಂಗೆಯನ್ನು ನಡೆಸುತ್ತಿರುವವರೆಲ್ಲರೂ ಅನಿವಾರ್ಯವಾಗಿ ಶಿಕ್ಷೆ ಅನುಭವಿಸುತ್ತಾರೆ ಎಂದರಲ್ಲದೆ, ವ್ಯಾಗ್ನರ್ ಖಾಸಗಿ ಮಿಲಿಟರಿ ಕಂಪನಿಯ ಮಾಲೀಕರನ್ನು 'ದ್ರೋಹಿ' ಮತ್ತು 'ದೇಶ ದ್ರೋಹಿ' ಎಂದು ಕರೆದ ಪುಟಿನ್, ಪ್ರಿಗೋಜಿನ್ ಅವರ ಹೆಸರು ಹೇಳದೇ ಅವರ ವಿರುದ್ಧ ಕ್ರಮಗಳನ್ನು ಜರುಗಿಸುವುದಾಗಿ ಹೇಳಿದರು. ಈ ಅಪರಾಧ ನಡೆಸುತ್ತಿರುವವರು ಶೀಘ್ರ ಸರಿಯಾದ ನಿರ್ಧಾ ರಕ್ಕೆ ಬನ್ನಿ. ಇಲ್ಲವಾದಲ್ಲಿ ನಿಮಗೆ ನಿರ್ಧಾರ ಮಾಡಲೂ ಕೂಡ ಸಮಯ ಇರುವುದಿಲ್ಲ. ಅಪರಾಧ ಕೃತ್ಯಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಿ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೇರ ಎಚ್ಚರಿಕೆ ನೀಡಿದರು.

ಪಶ್ಚಿಮ ದೇಶಗಳ ಸಂಪೂರ್ಣ ಮಿಲಿಟರಿ, ಆರ್ಥಿಕ ಮತ್ತು ಮಾಹಿತಿ ಯಂತ್ರವನ್ನು ನಮ್ಮ ವಿರುದ್ಧ ನಡೆಸಲಾಗಿದೆ. ಈ ಯುದ್ಧ, ನಮ್ಮ ಜನರ ಭವಿಷ್ಯ ನಿರ್ಧರಿಸುವಾಗ, ಎಲ್ಲಾ ಶಕ್ತಿಗಳ ಏಕೀಕರಣ, ಏಕತೆ, ಬಲವರ್ಧನೆ ಮತ್ತು ಜವಾಬ್ದಾರಿಯ ಅಗತ್ಯವಿರುತ್ತದೆ. ಅಂತಹ ಸಮಯದಲ್ಲಿ ಸಶಸ್ತ್ರ ದಂಗೆಯು ರಷ್ಯಾಕ್ಕೆ, ಅದರ ಜನರಿಗೆ ಒಂದು ದೊಡ್ಡ ಹೊಡೆತವಾಗಿದೆ. ಸಶಸ್ತ್ರ ದಂಗೆಯ ಸಂಚು ರೂಪಿಸಿದ ಮತ್ತು ಸಂಘಟಿಸಿದವರು, ತಮ್ಮ ಒಡನಾಡಿಗಳ ವಿರುದ್ಧ ಶಸ್ತ್ರಾಸ್ತ್ರಗಳನ್ನು ಎತ್ತಿದವರು ರಷ್ಯಾಕ್ಕೆ ದ್ರೋಹ ಮಾಡಿದರು. ಉಕ್ರೇನ್‌ನಲ್ಲಿ ರಷ್ಯಾ ತನ್ನ ಭವಿಷ್ಯಕ್ಕಾಗಿ ಕಠಿಣ ಯುದ್ಧ ನಡೆಸುತ್ತಿರುವ ಸಮಯದಲ್ಲಿ ಈ ದಂಗೆ ಸಹಿಸಲು ಅಸಾಧ್ಯ ಎಂದು ಪುಟಿನ್ ಕೆಂಡಕಾರಿದರು.

ಮುತ್ತಿಗೆ ಹಾಕಿದ್ದೇವೆ: ತಿಂಗಳುಗಳ ಕಾಲ ರಕ್ಷಣಾ ಸಚಿವಾಲಯದೊಂದಿಗಿನ ಭಿನ್ನಾಭಿಪ್ರಾಯ ಹೊಂದಿರುವ ವ್ಯಾಗ್ನರ್ ಮುಖ್ಯಸ್ಥ ಯೆವ್ಗೆನಿ ಪ್ರಿಗೊ ಜಿನ್, ಇಂದು ಮಾಸ್ಕೋ ತನ್ನ ಪಡೆಗಳ ಮೇಲೆ ಮಾರಣಾಂತಿಕ ಕ್ಷಿಪಣಿ ದಾಳಿ ಮಾಡಲಾಗಿದೆ ಎಂದು ಆರೋಪಿಸಿದರು.

ಇದಕ್ಕೆ ಪ್ರತೀಕಾರ ತೀರಿಸಿ ಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದ ಅವರು, ದೇಶದ ಮಿಲಿಟರಿ ನಾಯಕತ್ವವನ್ನು ಉರುಳಿಸಲು ಅಗತ್ಯವಿರುವ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದರು. ಈಗಾಗಲೇ ತಾವು ರೋಸ್ಟೊವ್–ಆನ್–ಡಾನ್ ನಗರವನ್ನು ತಲುಪಿದ್ದೇವೆ. ಇದಕ್ಕೆಲ್ಲ ಶೀಘ್ರ ಅಂತ್ಯ ಹಾಡುತ್ತೇವೆ ಎಂದರು.

ಈ ರೋಸ್ಟೊವ್–ಆನ್–ಡಾನ್ ನಗರ ಉಕ್ರೇನ್‌ನಲ್ಲಿನ ಹೋರಾಟವನ್ನು ನೋಡಿಕೊಳ್ಳುವ ರಷ್ಯಾದ ಸೇನಾ ಪ್ರಧಾನ ಕಛೇರಿಯ ನೆಲೆಯಾಗಿದೆ. ಯೆವ್ಗೆನಿ ಪ್ರಿಗೋಜಿನ್ ತನ್ನ ಪಡೆಗಳು ಉಕ್ರೇನ್‌ನಿಂದ ರಷ್ಯಾಕ್ಕೆ ದಾಟಿವೆ. ಎಂದು ಹೇಳಿಕೊಂಡಿದ್ದಾರೆ. ಅಲ್ಲಿ ಅವರು ಯುದ್ಧದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ವೀಡಿಯೊದಲ್ಲಿ ಪ್ರಿಗೋಜಿನ್, ತಾವು ರೋಸ್ಟೋವ್ ನಗರವನ್ನು ವಶಕ್ಕೆ ಪಡೆದಿದ್ದಾಗಿ ಹೇಳಿಕೊಂಡಿದ್ದಾರೆ.

ಅಂತರ ರಾಷ್ಟ್ರೀಯ ಡ್ರಗ್ ಡೇ ನಾಳೆ

ಮೈಸೂರು,ಜೂ.24– ಡ್ರಗ್ ದುರುಪಯೋಗ ಮತ್ತು ಅಕ್ರಮ ಕಳ್ಳಸಾಗಣೆ ವಿರುದ್ಧದ ಅಂತರರಾಷ್ಟ್ರೀಯ ದಿನ 'ವಿಶ್ವ ಡ್ರಗ್ ಡೇ' ಅನ್ನು ಜೂ.26ರಂದು ಆಚರಿಸಲಾಗುತ್ತದೆ. ಪ್ರತಿ ವರ್ಷ ಪ್ರಪಂಚದಾದ್ಯಂತ ವಿವಿಧ ಸಂಸ್ಥೆಗಳು ವಿಶ್ವ ಮಾದಕ ವಸ್ತು ದಿನವನ್ನು ಆಚರಿಸುತ್ತೇವೆ. ಜೊತೆಗೆ ಸಮಾಜಕ್ಕೆ ನಿಷೇಧಿತ ಮಾದಕವಸ್ತುಗಳು ಉಂಟುಮಾಡುವ ಪ್ರಮುಖ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸುತ್ತವೆ.

ವಿಶ್ವದಾದ್ಯಂತ ಈ ದುಶ್ಚಟಗಳಿಗೆ ಮಕ್ಕಳು ಮತ್ತು ಯುವಕರು ಹೆಚ್ಚು ಬಲಿಯಾಗುತ್ತಿದ್ದಾರೆ. ಮಾದಕ ವಸ್ತುಗಳ ಮಾರಾಟ ಹಾಗೂ ಸಾಗಾಣೆ ಕಾನೂನು ಬಾಹಿರ ಎಂದು ಗೊತ್ತಿದ್ದರೂ ಇದರ ದಂಧೆ ಎಗ್ಗಿಲ್ಲದೆ ನಡೆಯುತ್ತಿದೆ. ಡ್ರಗ್ ಮಾಫಿಯಾ ಹತೋಟಿಗೆ ತರಲು ವಿಶ್ವದೆಲ್ಲೆಡೆ ಕಾನೂನು ಪ್ರಯತ್ನಗಳು ನಡೆಯುತ್ತಿವೆ. ಆದರೆ ಇದನ್ನು ಬುಡ ಸಮೇತ ಕಿತ್ತು ಹಾಕಲು ಸಾಧ್ಯವಾಗಿಲ್ಲ. ಪ್ರತಿಯೊಬ್ಬ ನಾಗರಿಕನೂ ಈ ಬಗ್ಗೆ ಜಾಗೃತಿ ಹೊಂದಿ ವಿಶ್ವವನ್ನು ಮಾದಕವಸ್ತುಗಳಿಂದ ಮುಕ್ತವಾಗಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕಿದೆ. ಮಾದಕ ವ್ಯಸನ ಮುಕ್ತ ಪ್ರಪಂಚದ ಗುರಿಯನ್ನು ಸಾಧಿಸುವಲ್ಲಿ ಕ್ರಿಯೆ ಮತ್ತು ಸಹಕಾರವನ್ನು ಬಲಪಡಿಸುವ ಉದ್ದೇಶದಿಂದ ಡ್ರಗ್ ಡೇ ದಿನವನ್ನು ಆಚರಿಸಲಾಗುತ್ತದೆ. ದುಶ್ಚಟಗಳಿಂದ ಅನಾರೋಗ್ಯ ಹೆಚ್ಚಾಗುತ್ತದೆ. ಆದ್ದರಿಂದ ದುಶ್ಚಟಗಳಿಂದ ದೂರವಿರಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಯಪುರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ




ಜಯಪುರ,ಜೂ.24–ಅಖಿಲ ಕರ್ನಾಟಕ ಶ್ರೀಕಾಂತ್ ಅಭಿಮಾನಿಗಳ ಸಂಘದ ವತಿಯಿಂದ, ಸ್ಪರ್ಶ ಹೆಲ್ತ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಶನಿವಾರ ಜಯಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣೆ ಮತ್ತು ಸಾಮಾನ್ಯ ಆರೋಗ್ಯ ತಪಾಸಣೆ ಶಿಬಿರಕ್ಕೆ ಸಮಾಜ ಸೇವಕ ಹಾಗೂ ಉದ್ಯಮಿ ಎಸ್.ಶ್ರೀಕಾಂತ್ ಚಾಲನೆ ನೀಡಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 175 ಜನರು ಪಾಲ್ಗೊಂಡು ಕಣ್ಣಿನ ತಪಾಸಣೆ, ಸಾಮಾನ್ಯ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಶಿಬಿರದಲ್ಲಿ ವೈದ್ಯರಾದ ಡಾ.ವಿಕ್ರಮ್ ಪಾಷಾ, ಶುಶ್ರೂಷಕಿ ಸುಕನ್ಯ, ಅಂಜಲಿ, ಐಶ್ವರ್ಯ, ಶ್ರೀಕಾಂತ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಂತೋಷ್‌ಕುಮಾರ್, ಮುಖಂಡರಾದ ಶಿವರಾಜು, ಶಿವಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜೂ.27ರಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.24–ಜೂ.27ರ ಮಂಗಳವಾರ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಕಾಮಗಾರಿ ನಿಮಿತ್ತ ರಾಮಾನುಜ ರಸ್ತೆ 1ರಿಂದ 9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆ.ಎಸ್.ಎಸ್. ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡೂರಾವ್ ನಗರ, ದತ್ತನಗರ, ಮುನೇಶ್ವರನಗರ,ಗೌರಿಶಂಕರನಗರ, ನಂಜನಗೂಡು ಟೋಲ್‌ಗೇಟ್, ತಾವರೆಕೆರೆ, ಜಾಕಿ ಕ್ವಾಟ್ರಸ್, ರೇಸ್‌ಕೋರ್ಸ್ ಹಿಂಭಾಗ, ಸಬರ್ಬನ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತಮುತ್ತ, ಸರ್ಕಾರಿ ಅತಿಥಿ ಗೃಹ ಮತ್ತು ಸುತ್ತಮುತ್ತ, ತಾಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ, ಬಿ.ಎನ್.ರಸ್ತೆ, ಚಾಮುಂಡಿಬೆಟ್ಟ, ಸಿದ್ದಾರ್ಥನಗರ, ಆಲನಹಳ್ಳಿ ಸುತ್ತಮುತ್ತ, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತ–ಮುತ್ತಲಿನ ಪ್ರದೇಶಗಳು, ಶ್ರೀಹರ್ಷ ರಸ್ತೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತಮುತ್ತ, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದು ಎಂದು ಸೆಸ್ಕ್ ಪ್ರಕಟಣೆಯಲ್ಲಿ ತಿಳಿಸಿದೆ.

ಅಂತರ ಕಾಲೇಜು ಮಟ್ಟದ ಫೆಸ್ಟ್: ಎಸ್‌ಡಿಎಂ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರು,ಜೂ.24(ಎಸ್‌ಪಿಎನ್)– ವಿಶ್ವವಿದ್ಯಾಲಯ ಅಂತರ ಕಾಲೇಜು ಮಟ್ಟದ ಕಾಮರ್ಸ್ ಫೆಸ್ಟ್–2023 ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಎಂ.ಕಾಂ ವಿಭಾಗದ ವಿದ್ಯಾರ್ಥಿನಿಯರ ತಂಡ ಎಲ್ಲಾ ಸ್ಪರ್ಧೆಯಲ್ಲಿ ಭಾಗವಹಿಸಿ 'ಸಮಗ್ರ ಪ್ರಶಸ್ತಿ'ಯನ್ನು ತಮ್ಮದಾಗಿಸಿಕೊಂಡರೆ ವಿದ್ಯಾವರ್ಧಕ ಕಾಲೇಜಿನ ಕಾಮರ್ಸ್ ವಿಭಾಗದ ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನ ಪಡೆದುಕೊಂಡರು.


ಮೈಸೂರು ವಿವಿ ಮಾನಸಗಂಗೋತ್ರಿ ಆವರಣದಲ್ಲಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಡಿಪಾರ್ಟ್‌ಮೆಂಟ್ ಆಫ್ ಸ್ಟಡೀಸ್ ಇನ್ ಕಾಮರ್ಸ್ ಆಯೋಜಿಸಿದ್ದ 2 ದಿನಗಳ ವಿಶ್ವವಿದ್ಯಾನಿಲಯ ಅಂತರ ಕಾಲೇಜು ಕಾಮರ್ಸ್ ಫೆಸ್ಟ್–2023 'ಮಾನವ ವೃದ್ಧಿ ಶೀರ್ಷಿಕೆ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಂಡಿತು.

ಎಂಎಂಕೆ ಮತ್ತು ಎಸ್‌ಡಿಎಂ ಎಂ.ಕಾಂ ವಿಭಾಗದ ವಿದ್ಯಾರ್ಥಿನಿಯರ ತಂಡ ಸಮಗ್ರ ಪ್ರಶಸ್ತಿ ಪಡೆಯಿತು. ಮೈಸೂರು ವಿವಿ ಕಾಮರ್ಸ್ ವಿಭಾಗದ ಮುಖ್ಯಸ್ಥ ಡಾ.ಎಂ.ಎಲ್.ಅಶೋಕ್ ಪ್ರಶಸ್ತಿ ವಿತರಿಸಿದರು. ಈ ಫೆಸ್ಟ್‌ನಲ್ಲಿ ಆರು ವಿಷಯಗಳಲ್ಲಿ ಸ್ಪರ್ಧೆ ನಡೆಯಿತು. 20 ಕಾಲೇಜಿನ ವಿದ್ಯಾರ್ಥಿಗಳ ತಂಡ ಭಾಗವಹಿಸಿತ್ತು. 'ಹಣಕಾಸು ಮತ್ತು ಲೆಕ್ಕಪತ್ರ' ವಿಷಯದಲ್ಲಿ ಎಂಎಂಕೆ ಮತ್ತು ಎಸ್‌ಡಿಎಂ ಕಾಲೇಜು ಪ್ರಥಮ, ವಿದ್ಯಾವರ್ಧಕ ಕಾಲೇಜು ತಂಡ ದ್ವಿತೀಯ ಸ್ಥಾನ ಪಡೆದಿದೆ. 'ಮಾರುಕಟ್ಟೆ' ವಿಷಯದಲ್ಲಿ ಬೇಲೂರಿನ ವೈಡಿಡಿ ಪ್ರಥಮ ದರ್ಜೆ ಕಾಲೇಜು ಪ್ರಥಮ, ಮಂಡ್ಯ ಪಿಜಿ ಸೆಂಟರ್ ವಿದ್ಯಾರ್ಥಿಗಳು ದ್ವಿತೀಯ, 'ಬೆಸ್ಟ್ ಮ್ಯಾನೇಜರ್' ವಿಷಯದಲ್ಲಿ ವಿದ್ಯಾವರ್ಧಕ ಕಾಲೇಜು ಪ್ರಥಮ, ಹೆಚ್.ಆರ್.ವಿದ್ಯಾಸಂಸ್ಥೆ ದ್ವಿತೀಯ ಸ್ಥಾನ ಪಡೆದಿದೆ.

ಬೆಸ್ಟ್ ಎಂಟರ್‌ಪ್ರೈಸಸ್ ವಿಭಾಗದಲ್ಲಿ ಮಹಾರಾಣಿ ಕಾಲೇಜು ಪ್ರಥಮ, ತಿ.ನರಸೀಪುರ ಕಾಲೇಜು ದ್ವಿತೀಯ ಸ್ಥಾನ, ಮಾನವ ಸಂಪನ್ಮೂಲ ವಿಷಯದಲ್ಲಿ ಮಹಾರಾಣಿ ಕಾಲೇಜು ಪ್ರಥಮ, ಮಂಡ್ಯ ಪಿಜಿ ಸೆಂಟರ್ ದ್ವಿತೀಯ, ಬಿ–ಕ್ಯೂಜ್ ವಿಷಯದಲ್ಲಿ ಬೇಲೂರು ಕಾಲೇಜಿನ ವೈಡಿಡಿ ಕಾಲೇಜು ಪ್ರಥಮ, ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜು ದ್ವಿತೀಯ ಸ್ಥಾನ ಪಡೆದಿದೆ.

ಪ್ರಶಸ್ತಿ ವಿತರಿಸಿ ಮಾತನಾಡಿದ ಕಾಮರ್ಸ್ ವಿಭಾಗದ ಮುಖ್ಯಸ್ಥ ಡಾ.ಎಂ.ಎಲ್.ಅಶೋಕ್, ಕಾಮರ್ಸ್ ವಿಭಾಗದ ವಿದ್ಯಾರ್ಥಿಗಳು, ಪ್ರತಿನಿತ್ಯ ಮಾರುಕಟ್ಟೆಯಲ್ಲಿ ಯಾವ ಯಾವ ಬದಲಾವಣೆಯಾಗುತ್ತಿದೆ, ದೇಶದ ಆರ್ಥಿಕ ಪರಿಸ್ಥಿತಿ ಹೇಗಿದೆ ಎಂಬ ಬಗ್ಗೆ ಇಂತಹ ಫೆಸ್ಟ್‌ಗಳಲ್ಲಿ ಭಾಗವಹಿಸಿ ಅರ್ಥೈಸಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು. ಕಾಮರ್ಸ್ ವಿಭಾಗದ ಪ್ರಾಧ್ಯಾಪಕ ಡಾ.ಕೆ.ನಾಗೇಂದ್ರಬಾಬು, ಡಾ.ಬಿ.ನಾಗರಾಜು, ಡಾ.ಬಿ.ಎಚ್.ಸುರೇಶ್ ಇತರರು ಉಪಸ್ಥಿತರಿದ್ದರು.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.6.2023 ಭಾನುವಾರ, ಮಳೆ ನಕ್ಷತ್ರ: ಆರಿದ್ರಾ 22.06.2023ರಿಂದ 5.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ,
ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ– ಎ.ಪಿ. ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಬಿ.ವಿ. ವಸಂತ ಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗ ಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ವಿಶ್ವ ಸ್ಕ್ಲೀರೋಡೆರ್ಮಾ ಜಾಗೃತಿ ದಿನಾಚರಣೆ ಸಂದರ್ಭದಲ್ಲಿ ಸ್ಕ್ಲೀರೋಡೆರ್ಮಾ–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಮಹಾಬಲೇಶ್ವರ ಮಮದಾಪುರ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ನೆಲೆ ಹಿನ್ನೆಲೆ ತಂಡ ಏರ್ಪಡಿಸಿದ್ದ ಬೇಸಿಗೆ ಶಿಬಿರದ ಮಕ್ಕಳಿಂದ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಪುಷ್ಪಾ ವಿ.ಶಂಕರ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಡಾ.ರೋಹಿಣಿ ಮೋಹನ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಗುರುದಕ್ಷಿಣೆ, ಪ್ರಸ್ತುತಿ–ಕದ್ರಿ ಹವ್ಯಾಸಿ ಬಳಗದ ಸದಸ್ಯರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ– ಮೈಸೂರು ಜಿಲ್ಲಾ ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ. ಕಾಲುಬಾಯಿ ಜ್ವಾ ರೋಗದ ನಿರ್ವಹಣೆ ಕುರಿತು ಪಿರಿಯಾಪಟ್ಟಣ ತಾಲ್ಲೂಕ್ ಚಿಕ್ಕ ನೇರಳೆ ಪಶು ಆಸ್ಪತ್ರೆ ವೈದ್ಯಾಧಿಕಾರಿ ಡಾ.ಚಾಮರಾಜು ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ–ಗಂಜೀಫಾ ರಘುಪತಿ ಭಟ್ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಉಸ್ತಾದ್ ಅಬ್ದುಲ್ ಮಜೀದ್ ಖಾನ್–ಸಾರಂಗಿ ವಾದನ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9 ಗಂಟೆಗೆ ಏಕಾದಶವಾರ ರುದ್ರ ಪಾರಾಯಣ, ಸಂಜೆ 6ರಿಂದ ಸಂಸ್ಕೃತ ವ್ಯಾಕರಣಕಾರ ಡಾ.ಹೆಚ್.ವಿ.ನಾಗರಾಜರಾವ್ ಅವರಿಂದ ಪ್ರವಚನ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಪುಣ್ಯಾಹ, ನಾಂದಿ, ಗಣಪತಿ ಪೂಜಾ, ಮಹಾಸಂಕಲ್ಪ, ಕಲಶ ಸ್ಥಾಪನಾ, ಸಪ್ತಶತಿ ಪಾರಾಯಣ, ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶ್ರೀ ಮೃತ್ಯುಂಜಯ ಅಮೃತೇಶ್ವರಿ ಹೋಮ, ಶ್ರೀ ಅಸಿತಾಂಗ ಬ್ರಾಹ್ಮ್ಯಾದಿ ಅಷ್ಟಮಿಥುನ ಭೈರವಾದಿ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮಿಪುರಂ.

■ **ಮೈಸೂರು ಜಿಲ್ಲಾ ಕಿವುಡರ ಸಂಘ:** 9ನೇ ವಾರ್ಷಿಕ ಮಹಾಸಭೆ, ಮುಖ್ಯ ಅತಿಥಿಗಳು: ಕೆ.ಎಸ್. ರಾಘವೇಂದ್ರ, ಜೆಎಸ್‌ಎಸ್ ಪಿಡಿಎ ಪ್ರಿನ್ಸಿಪಾಲ್ ಇಳಂಗೋವನ್, ನಿವೃತ್ತ ಪ್ರಿನ್ಸಿಪಾಲ್ ಸುಬ್ಬಣ್ಣ, ನಂಜುಂಡಸ್ವಾಮಿ, ನಾಗೇಶ್, ಗಣೇಶ್‌ರಾವ್, ಸುನೀಲ್ ಕಂದೂರ್, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ಬೆಳಗ್ಗೆ 10ಕ್ಕೆ.

■ **ಸಹಜ ಸಮೃದ್ಧಿ :** ಮೈಸೂರು ಹಲಸಿನ ಹಬ್ಬ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ಕರ್ನಾಟಕ ಆರ್ಯವೈಶ್ಯ ಮಹಾಸಭೆ :** ವಾಸವಿ ಭವನ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ವಾಸವೀ ಮಠದ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ವಾಸವಿ ಭವನ ಉದ್ಘಾಟನೆ : ಮಾಜಿ ಸಭಾಪತಿ ಡಿ.ಹೆಚ್. ಶಂಕರಮೂರ್ತಿ, ಸಮಾರಂಭ ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ವಿದ್ಯಾರ್ಥಿ ನಿಲಯ ಉದ್ಘಾಟನೆ : ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ಮುಖ್ಯ ಅತಿಥಿಗಳು : ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಡಿ.ಎಸ್. ಅರುಣ್, ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷ ಆರ್.ಪಿ. ರವಿಶಂಕರ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10ಕ್ಕೆ

■ **ಕರ್ನಾಟಕ ಶಿಟೋ ರಿಂಯೋ ಕರಾಟೆ ಚಾಂಪಿಯನ್‌ಶಿಪ್:** ಉದ್ಘಾಟನೆ: ಶಾಸಕ ದರ್ಶನ್ ಧ್ರುವನಾರಾಯಣ್, ಅಧ್ಯಕ್ಷತೆ: ವಿಧಾನಪರಿಷತ್ ಮಾಜಿ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ, ಮುಖ್ಯ ಅತಿಥಿಗಳು : ಡಿವೈಎಸ್ಪಿ ವಿ. ಗೋವಿಂದರಾಜು, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಸಿ. ವೆಂಕಟೇಶ್, ಸ್ಥಳ: ಜಿಮ್ನಾಷಿಯಂ ಹಾಲ್, ಮೈಸೂರು ವಿವಿ ಪೆವಿಲಿಯನ್, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ, ಅನುಭೂತಿ ಆರ್ಟ್ ಅಂಡ್ ಕಲ್ಚರಲ್ ಟ್ರಸ್ಟ್, ಮಂಡ್ಯ :** ಕಲಾವಿದ ಎಂ.ಎಲ್. ಸೋಮವರದ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ: ರಂಗಭೂಮಿ ನಿರ್ದೇಶಕ ಪ್ರಸಾದ್ ಕುಂದೂರು, ಅಧ್ಯಕ್ಷತೆ: ಎಲ್.ಶಿವಲಿಂಗಪ್ಪ, ಮುಖ್ಯ ಅತಿಥಿಗಳು: ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಕೆ.ರಮೇಶ್, ಲೇಖಕ ಸಾ.ವೆ.ರ. ಸ್ವಾಮಿ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಶ್ರೀ ಬಸವೇಶ್ವರ ಬಳಗ:** ಬಸವ ಜಯಂತಿ, ಡಾ.ಮಹೇಂದ್ರಮೂರ್ತಿ ಅವರಿಂದ ಉಪನ್ಯಾಸ, ನಿವೃತ್ತ ರಾಜ್ಯ ಲೆಕ್ಕಪತ್ರ ಇಲಾಖೆ ಅಧಿಕಾರಿ ಚಿಕ್ಕಮಹದೇವಪ್ಪ ಅವರಿಗೆ ಸನ್ಮಾನ, ಅಧ್ಯಕ್ಷತೆ: ಬಸವೇಶ್ವರ ಬಳಗದ ಅಧ್ಯಕ್ಷ ಡಾ.ಸಿ. ಶರತ್‌ಕುಮಾರ್, ಗುರುಮಲ್ಲೇಶ್ವರ ಭಜನಾ ಮಂಡಳಿ ಅವರಿಂದ ವಚನ ಗಾಯನ, ಸ್ಥಳ: ಮೆಡಿವೇವ್ ಫರ್ಟಿಲಿಟಿ ರಿಸರ್ಚ್ ಆಸ್ಪತ್ರೆ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಕೋಟೆ ತ್ರಿಣೇಶ್ವರ ದೇವಸ್ಥಾನ :** ಗಿರಿಜಾ ಕಲ್ಯಾಣ ಮಹೋತ್ಸವ, ಬೆಳಗ್ಗೆ 9ಕ್ಕೆ ಹೊರೆಯಲ್ಲಿ ಅನುಜ್ಞಾಪೂರ್ವಕ ಕಳಶ ಕನ್ನಡಿ ತರುವುದು, ರಾತ್ರಿ 6ಕ್ಕೆ ಕಾಶಿಯಾತ್ರಾ ಮಹೋತ್ಸವ, ಸಂಜೆ 6.35ರಿಂದ ಗಿರಿಜಾ ಕಲ್ಯಾಣ ಮಹೋತ್ಸವ, ಸ್ಥಳ: ದೇವಸ್ಥಾನ, ಕೋಟೆ ಆವರಣ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಶ್ರೀ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಗುರುರಾಘವೇಂದ್ರ ಸೇವಾ ಟ್ರಸ್ಟ್ :** ಗಂಗಾವತಿ ಪ್ರಾಣೇಶ್ ಮತ್ತು ತಂಡದವರಿಂದ ಹಾಸ್ಯೋತ್ಸವ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.


■ **ಭಾರತೀಯ ನೃತ್ಯ ಕಲಾ ಪರಿಷತ್:** ಅವಿನಯ, ಭರತನಾಟ್ಯ ಸ್ಪರ್ಧೆ, ಬಹುಮಾನ ವಿತರಣೆ, ಅಧ್ಯಕ್ಷತೆ: ಪರಿಷತ್ ಅಧ್ಯಕ್ಷ ವಿದ್ವಾನ್ ಎ.ವಿಜಯಮೂರ್ತಿ, ಉದ್ಘಾಟನೆ: ಶಾಸಕ ಜಿ.ಡಿ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ನಿವೃತ್ತ ನಿರ್ದೇಶಕ ಸಿ.ಬಸವಲಿಂಗಯ್ಯ, ವಿದುಷಿ ಕುಮುದಿನಿ ಅಚ್ಚಿ, ವಿದುಷಿ ವಿ.ಭಾವನಾ, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ಕ್ಕೆ

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಪಂಡಿತ್ ಶ್ರೀ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

■ **ಅಷ್ಟಾಂಗಯೋಗವಿಜ್ಞಾನಮಂದಿರಂ:** ವಿದ್ವಾನ್ ಕೆ.ಸುದರ್ಶನ ಅವರಿಂದ ಪುರುಷಾರ್ಥಗಳು ಕುರಿತು ಪ್ರವಚನ, ಸ್ಥಳ: ಅಷ್ಟಾಂಗಯೋಗವಿಜ್ಞಾನಮಂದಿರಂ, ಲಕ್ಷ್ಮೀಪುರಂ, ಸಂಜೆ 7ಕ್ಕೆ

ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಮಟ್ಟದ ಕ್ರೀಡೋತ್ಸವಕ್ಕೆ ತೆರೆ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಂದ ಬಹುಮಾನ ವಿತರಣೆ





ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಮಟ್ಟದ ಕ್ರೀಡೋತ್ಸವದ ಸಮಾರೋಪ ಸಮಾರಂಭದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಅಭಿನಂದಿಸಲಾಯಿತು. ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್ ಮತ್ತಿತರರಿದ್ದರು.

ಮೈಸೂರು,ಜೂ.24(ಎಂಕೆ)– ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ರಾಜ್ಯ ಮಟ್ಟದ ಕ್ರೀಡೋತ್ಸವ ಯಶಸ್ವಿಯಾಯಿತು.

ಕ್ರೀಡೋತ್ಸವದ ಸಮಾರೋಪ ಸಮಾರಂಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ, ಪ್ರೋತ್ಸಾಹಿಸಿದರು. ಬಳಿಕ ಮಾತನಾಡಿದ ಅವರು, ಬಡವರಿಗೆ, ರೈತರಿಗೆ ವಿದ್ಯುತ್ ನೀಡುವಲ್ಲಿ ಅವರ ಜೀವನವನ್ನು ಬೆಳಕಾಗಿಸುವಲ್ಲಿ ಗುತ್ತಿಗೆದಾರರ ಪಾತ್ರ ಬಹಳ ದೊಡ್ಡದು. ಈಗ ದೊಡ್ಡ ಕಂಪನಿಗಳಿಗೆಲ್ಲಾ ಗುತ್ತಿಗೆಗಳಿದಿದ್ದು, ಸಣ್ಣ–ಪುಟ್ಟ ಗುತ್ತಿಗೆದಾರರಿಗೆ ತೀವ್ರ ಸಮಸ್ಯೆ ಆಗುತ್ತಿರುವುದಾಗಿ ಸಂಘದ ಅಧ್ಯಕ್ಷ ರಮೇಶ್ ತಿಳಿಸಿದ್ದಾರೆ. ಇದರ ಬಗ್ಗೆ ಶೀಘ್ರವೇ ಇಂಧನ ಸಚಿವರ ಬಳಿ ಮಾತಾಡುತ್ತೇನೆ ಎಂದು ಭರವಸೆ ನೀಡಿದರು. ಬೆಳಗ್ಗೆ ನಡೆದ ಅಥ್ಲೆಟಿಕ್ಸ್ ಪಂದ್ಯಗಳನ್ನು ಶಾಸಕ ಟಿ.ಎಸ್.ಶ್ರೀವತ್ಸ ಮೇಯರ್ ಶಿವಕುಮಾರ್ ಉದ್ಘಾಟಿಸಿದ್ದರು.


ಪುರುಷರ ವಿಭಾಗದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಉಡುಪಿ ತಂಡ ಪ್ರಥಮ, ಬೆಂಗಳೂರು ದ್ವಿತೀಯ ಹಾಗೂ ಬೆಂಗಳೂರು ಕೇಂದ್ರ ತೃತೀಯ ಸ್ಥಾನ ಪಡೆದುಕೊಂಡಿತು. ಹಗ್ಗಜಗ್ಗಾಟದಲ್ಲಿ ದಕ್ಷಿಣ ಕನ್ನಡ ಪ್ರಥಮ, ಉಡುಪಿ ದ್ವಿತೀಯ ಹಾಗೂ ಬೆಂಗಳೂರು ಕೇಂದ್ರ ತಂಡ ತೃತೀಯ ಸ್ಥಾನ ಪಡೆಯಿತು. ಮ್ಯೂಸಿಕಲ್ ಚೇರ್, 100 ಮೀ ಓಟ, ಮಹಿಳೆಯ ವಿಭಾಗದಲ್ಲಿ ರಂಗೋಲಿ ಸ್ಪರ್ಧೆ, ಮ್ಯೂಸಿಕಲ್ ಚೇರ್, ಬಾಲ್ ಪಾಸಿಂಗ್, 100 ಮೀ ಓಟ, ಲೆಮನ್ ಸ್ಪೂನ್ ಓಟ, ಹಿಟ್ಟಿಂಗ್ ವಿಕೆಟ್, ಬುಕ್ ಬ್ಯಾಲೆನ್ಸಿಂಗ್, ಶಟಲ್ ಬ್ಯಾಡ್ಮಿಂಟನ್‌ನಲ್ಲಿ ಹಲವರು ಗೆದ್ದು ಬಹುಮಾನ ಪಡೆದುಕೊಂಡರು. ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಸಿ.ರಮೇಶ್, ಪ್ರಧಾನ ಕಾರ್ಯದರ್ಶಿ ಚಂದ್ರಬಾಬು, ರಾಜ್ಯ ಯುವಜನ ಸಬಲೀಕರಣ, ಕ್ರೀಡೆ ಮತ್ತು ಮಾಹಿತಿ ತಂತ್ರಜ್ಞಾನ ಸಮಿತಿ ಅಧ್ಯಕ್ಷ ಸಿ.ವಿ.ಮಲ್ಲಿಕಾರ್ಜುನ, ಜಿಲ್ಲಾಧ್ಯಕ್ಷ ರಾಘವೇಂದ್ರ ಮತ್ತಿತರರಿದ್ದರು.

ಬ್ಯಾಟ್ ಬೀಸಿದ ಶಿವರಾಜ್‌ಕುಮಾರ್....

ಕ್ರೀಡೋತ್ಸವಕ್ಕೆ ಆಗಮಿಸಿದ ಖ್ಯಾತ ನಟ ಡಾ.ಶಿವರಾಜ್‌ಕುಮಾರ್, ಶ್ರೀಮತಿ ಗೀತಾ ಶಿವರಾಜ್‌ಕುಮಾರ್ ಕ್ರೀಡೋತ್ಸವ ಆಯೋಜಕರಿಗೆ ಅಭಿನಂದನೆ ಸಲ್ಲಿಸಿದರಲ್ಲದೆ ಕ್ರೀಡಾಪಟುಗಳನ್ನು ಹುರಿದುಂಬಿಸಿದರು. ಕ್ರೀಡೋತ್ಸವ ಆಯೋಜನೆ ಮಾಡಿರುವುದು ಒಳ್ಳೆಯದು. ಕ್ರೀಡೆಯಿಂದ ದೈಹಿಕ, ಮಾನಸಿಕ ಆರೋಗ್ಯ ಉತ್ತಮವಾಗಿರುತ್ತದೆ ಎಂದರು. ಇದೇ ವೇಳೆ ಕ್ರೀಡಾಂಗಣದಲ್ಲಿ ಬ್ಯಾಟ್ ಹಿಡಿದ ಶಿವರಾಜ್‌ಕುಮಾರ್, ನೆರೆದಿದ್ದವರ ತಲೆಯ ಮೇಲೆ ಚೆಂಡನ್ನು ಬಾರಿಸುವ ಮೂಲಕ ಬೌಂಡರಿ ದಾಟಿಸಿದರು.

ಬಿಜೆಪಿ 'ವಾಸ್ತು' ಭೇದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಹಿಂದಿನ ಸರ್ಕಾರ ಮುಚ್ಚಿದ್ದ ಬಾಗಿಲಿಗೆ 'ಮುಕ್ತಿ'



ಬೆಂಗಳೂರು, ಜೂ.24–ವಾಸ್ತು ಸರಿ ಇಲ್ಲ ಎಂದು ಬಿಜೆಪಿ ಸರ್ಕಾರದಲ್ಲಿ ಮುಚ್ಚಿದ್ದ ವಿಧಾನಸೌಧದ ಸಿಎಂ ಕಚೇರಿಯ ದಕ್ಷಿಣ ದ್ವಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ತೆರೆಸಿದರು.

ಅನ್ನಭಾಗ್ಯ ಸಂಬಂಧ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಲು ವಿಧಾನ ಸೌಧಕ್ಕೆ ಆಗಮಿಸಿದ ಅವರು ವಾಸ್ತು ಸಮಸ್ಯೆ ಕಾರಣ ಮುಚ್ಚಿದ್ದ ದ್ವಾರವನ್ನು ತೆರೆಸಿ, ಅದೇ ದ್ವಾರದಿಂದ ಒಳ ಪ್ರವೇಶಿಸಿ ವಾಸ್ತು ಬಗೆಗಿನ ತಮ್ಮ ನಿಲುವನ್ನು ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಸಭೆ ಹಿನ್ನೆಲೆಯಲ್ಲಿ ಕಚೇರಿಗೆ ಆಗಮಿಸಿದಾಗ ದಕ್ಷಿಣ ದ್ವಾರ ಮುಚ್ಚಿರುವುದನ್ನು ಗಮನಿಸಿದ ಸಿದ್ದರಾಮಯ್ಯ ಅವರು, ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ. ಈ ವೇಳೆ, ವಾಸ್ತು ಕಾರಣದಿಂದ ಬಂದ್ ಮಾಡಲಾಗಿದೆ ಎಂದು ಅಧಿಕಾರಿಗಳು ಮುಖ್ಯಮಂತ್ರಿ ಅವರಿಗೆ ತಿಳಿಸಿದ್ದಾರೆ. ಅಧಿಕಾರಿಗಳ ಮಾತು ಕೇಳಿ ಅಲ್ಲೇ ನಿಂತ ಸಿದ್ದರಾಮಯ್ಯ, ಬಾಗಿಲು ತೆರೆಯುವಂತೆ ಸೂಚಿಸಿದರು. ಅದರಂತೆ ಪಶ್ಚಿಮ ದ್ವಾರದಿಂದ ಒಳಗೆ ಹೋದ ಸಿಬ್ಬಂದಿ ದಕ್ಷಿಣ ದ್ವಾರವನ್ನು ತೆರೆದಿದ್ದಾರೆ. ದಕ್ಷಿಣ ದ್ವಾರ ತೆರೆಯುತ್ತಿದ್ದಂತೆ ಅದೇ ದ್ವಾರದ ಮೂಲಕವೇ ಸಿದ್ದರಾಮಯ್ಯ, ತಮ್ಮ ಕಚೇರಿ ಪ್ರವೇಶಿಸಿದರು. ಈ ವೇಳೆ ಆರೋಗ್ಯಕರ ಮನಸ್ಸು, ಸ್ವಚ್ಛ ಹೃದಯ, ಜನಪರ ಕಾಳಜಿ, ಒಳ್ಳೆ ಗಾಳಿ–ಬೆಳಕು ಬರುವಂತಿದ್ದರೆ ಅದೇ ಉತ್ತಮ ವಾಸ್ತು ಎಂದು ಅಧಿಕಾರಿಗಳಿಗೆ ತಮ್ಮ ನಿಲುವನ್ನು ಹಂಚಿಕೊಂಡರು.

ಬೇರೆ ದೇಶಗಳಿಗೆ ಅಕ್ಕಿ ಕೊಡುತ್ತೆ, ಇಲ್ಲಿನವರೇ ಕೇಳಿದ್ರೆ ಕೊಡೋದಿಲ್ಲ



ಬೆಂಗಳೂರು, ಜೂ.24–ನಮ್ಮ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆ ತಡೆಯಲು ಕೇಂದ್ರ ಸರ್ಕಾರ ಅಕ್ಕಿ ಕೊಡುತ್ತಿಲ್ಲ. ಬಡವರಿಗೆ ಅಕ್ಕಿ ಕೊಡಬಾರದು. ಅವರು ಉಪವಾಸ ಸಾಯಲಿ ಎಂದು ಹೇಳುತ್ತಿದ್ದಾರೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದರು.

ನಮ್ಮ ಸರ್ಕಾರದ ಅನ್ನಭಾಗ್ಯ ಯೋಜನೆಗೆ ಅಕ್ಕಿ ಕೊಡುವಂತೆ ಕೇಳುತ್ತಿದ್ದೇವೆ. ಆದರೆ ಅಕ್ಕಿ ಇದ್ದರೂ ಕೇಂದ್ರ ಸರ್ಕಾರ ಕೊಡುತ್ತಿಲ್ಲ. ನಾವೇನು ಸುಮ್ನೆ ಕೇಳ್ತಾ ಇಲ್ಲ,ಹಣ ಕೊಡ್ತೀವಿ ಅಕ್ಕಿ ಕೊಡಿ ಅಂತಾ ಕೇಳ್ತಿದ್ದೇವೆ. ಜನರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರವೇ ಮುಂದೆ ಬಂದು ಕೊಡಬೇಕು. ಅದನ್ನು ಬಿಟ್ಟು ಅಕ್ಕಿ ಕೊಡದೇ ರಾಜಕೀಯ ಮಾಡ್ತಾ ಇದೆ ಎಂದರು. ವಿದೇಶಗಳಿಗೆ ಅಕ್ಕಿ ಕೊಡ್ತೇವೆ, ಇಲ್ಲಿನವರಿಗೆ ಕೊಡೋದಿಲ್ಲ ಅಂದ್ರೆ ಹೇಗೆ? ಎಂದು ಪ್ರಶ್ನಿಸಿದರು.

ಅಕ್ಕಿ ನೀಡದ ಕೇಂದ್ರದ ವಿರುದ್ಧ ವಾಗ್ದಾಳಿ



ಹುಬ್ಬಳ್ಳಿ, ಜೂ.24– ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಮೂಲಕ ಕರ್ನಾಟಕಕ್ಕೆ ಅಕ್ಕಿ ನೀಡಲು ನಿರಾಕರಿಸಿರುವ ಕೇಂದ್ರದ ಕ್ರಮ ಅಕ್ಷಮ್ಯ ಅಪರಾಧ ಎಂದು ಮಾಜಿ ಮುಖ್ಯಮಂತ್ರಿಗಳೂ ಆದ ಹಾಲಿ ಕಾಂಗ್ರೆಸ್‌ನ ವಿಧಾನಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ವಾಗ್ದಾಳಿ ನಡೆಸಿದರು.

ಬಿಪಿಎಲ್ ಕುಟುಂಬದ ಎಲ್ಲ ಸದಸ್ಯರಿಗೆ 10 ಕೆ.ಜಿ. ಅಕ್ಕಿ ನೀಡುವ ಉದ್ದೇಶದಿಂದ ಅನ್ನ ಭಾಗ್ಯ ಯೋಜನೆ ಜಾರಿಗೊಳಿಸಲು ರಾಜ್ಯಕ್ಕೆ ಅಕ್ಕಿ ಪೂರೈಕೆ ಮಾಡಲು ಕೇಂದ್ರ ನಿರಾಕರಿಸಿರುವ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಶೆಟ್ಟರ್, ಕರ್ನಾಟಕಕ್ಕೆ ಎಫ್‌ಸಿಐನಿಂದ ಅಕ್ಕಿ ಮಾರಾಟಕ್ಕೆ ನಿರಾಕರಿಸಿರುವುದು ಕೇಂದ್ರ ಸರ್ಕಾರದ ಉತ್ತಮ ನಡತೆ ಅಲ್ಲ ಎಂದರು. ಮೊದಲಿಗೆ ಅಕ್ಕಿ ನೀಡುವುದಾಗಿ ಭರವಸೆ ನೀಡಿ ಈಗ ರಾಜಕೀಯ ಕಾರಣಕ್ಕೆ ಅದನ್ನು ನಿರಾಕರಿಸುತ್ತಿದ್ದಾರೆ. ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿಯನ್ನು ರಾಜ್ಯಕ್ಕೆ ನೀಡಬೇಕು ಎಂದು ಒತ್ತಾಯಿಸಿದರು.

ಸಿವೇಜ್ ಫಾರಂ ಕಸ 6 ತಿಂಗಳಲ್ಲಿ ತೆರವು: ಶ್ರೀವತ್ಸ

ಮೈಸೂರು, ಜೂ.24(ಜಿಎ)– ಸಿವೇಜ್ ಫಾರಂನ ಕಸ ತೆರವಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, ಆರು ತಿಂಗಳಿನಲ್ಲಿ ಆ ಪ್ರದೇಶ ಕಸ ಮತ್ತು ವಾಸನೆ ಮುಕ್ತವಾಗಲಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಭರವಸೆ ನೀಡಿದರು.

ಮೈಸೂರಿನಲ್ಲಿ ಮಾತನಾಡಿದ ಅವರು, ಸಿವೇಜ್ ಫಾರಂ ಕಸ ತೆರವಿಗೆ ಈಗಾಗಲೇ 58 ಕೋಟಿ ರೂ. ಟೆಂಡರ್ ಆಗಿದ್ದು, 48 ಕೋಟಿ ರೂ. ಕೇಂದ್ರ ಮತ್ತು 10 ಕೋಟಿ ರೂ. ರಾಜ್ಯ ಸರ್ಕಾರ ನೀಡಿದೆ. 6 ತಿಂಗಳಲ್ಲಿ 6 ಲಕ್ಷ ಟನ್ ಕಸ ತೆರವುಗೊಳಿಸಿ, ಆರು ತಿಂಗಳಿನಲ್ಲಿ ಈ ಪ್ರದೇಶವನ್ನು ಕಸ ಮತ್ತು ವಾಸನೆ ಮುಕ್ತ ಮಾಡಲಾಗುವುದು ಎಂದರು. ಸನ್ಮಾನ ಕಾರ್ಯಕ್ರಮಗಳಿಂದ ಸಾರ್ವಜನಿಕರ ಸಂಪರ್ಕವೂ ಆಗುತ್ತಿದ್ದು, ಇದರಿಂದ ಜನತೆಗೆ ಪರಿಚಯವೂ ಆಗುತ್ತಿದ್ದೇನೆ. ಈಗಾಗಲೇ ಕಳೆದೊಂದು ತಿಂಗಳಿಂದ ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ 37 ಮುಖ್ಯ ರಸ್ತೆಗಳ ಡಾಂಬರೀಕರಣ ನಡೆಯುತ್ತಿವೆ. ಕ್ಷೇತ್ರದ ಯುಜಿಡಿ, ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ದೂರು ಬಂದ 24 ಗಂಟೆಯೊಳಗೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಮಸ್ಯೆಗೆ ಸಂಬಂಧಿಸಿದಂತೆ ಫೋಟೋ ಕ್ಲಿಕ್ಕಿಸಿ ವಾಟ್ಸಾಪ್ ಮಾಡಿದರೆ ಸಾಕು 5 ಗಂಟೆಯೊಳಗೆ ಕೆಲಸ ಆಗುತ್ತದೆ. ಆ ರೀತಿಯ ವ್ಯವಸ್ಥೆ ಮಾಡುತ್ತಿದ್ದು, ಅದಕ್ಕೆ ಒಂದು ತಂಡ ರಚಿಸಲಾಗಿದೆ ಎಂದರು.

ಮುಖ್ಯ ರಸ್ತೆಗಳ ಜೊತೆ ಅಡ್ಡರಸ್ತೆಗೂ ಡಾಂಬರೀಕರಣ ಮಾಡಬೇಕೆಂದು ಜನತೆಗೆ ಆಸೆ ಇದ್ದು, ಮುಂದಿನ ದಿನಗಳಲ್ಲಿ ಅದನ್ನು ಮಾಡಲಾಗುತ್ತದೆ. ಈಗಾಗಲೇ ಕೋರ್ಟ್‌ನಿಂದ ಅಗ್ರಹಾರದವರೆಗಿನ ರಸ್ತೆಗೆ ಟೆಂಡರ್ ನೀಡಲಾಗಿದೆ. ಆರ್‌ಟಿಓ ರಸ್ತೆಯನ್ನು ಪ್ಯಾಚ್ ವರ್ಕ್ ಮಾಡಬೇಕೆಂದು ತಿಳಿಸಲಾಗಿದೆ. ರಾಜಕಾಲುವೆ ಹೂಳು ಎತ್ತುವ ಕೆಲಸ ಮಾಡಲಾಗುತ್ತಿದ್ದು, ಸದ್ಯ ತಕ್ಷಣದ ಸಮಸ್ಯೆಗಳಿಗೆ ಪರಿಹಾರ ಹುಡುಕಲಾಗುತ್ತಿದೆ ಎಂದು ವಿವರಿಸಿದರು.



ಶಾಸಕರ ಕಚೇರಿಗೆ ಸ್ಥಳ ಕೇಳಲಾಗಿದ್ದು, ಇನ್ನು ಯಾವ ಸ್ಥಳವನ್ನು ನಿಗದಿ ಮಾಡಿಲ್ಲ. ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಮಾಡುವ ನಿರೀಕ್ಷೆ ಇತ್ತು. ಆದರೆ ಅಲ್ಲಿ ಮುಖ್ಯಮಂತ್ರಿಗಳ ಕಚೇರಿ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಡಿಸಿ ಗಮನಕ್ಕೆ ತರಲಾಗಿದ್ದು, ಒಂದು ವಾರದಲ್ಲಿ ಕಚೇರಿಗೆ ಸ್ಥಳ ನಿಗದಿ ಮಾಡಲಿದ್ದಾರೆ. –ಶ್ರೀವತ್ಸ, ಶಾಸಕ

ಭಾರತೀಯ ಸೇನಾ ಅಧಿಕಾರಿಯಾಗಿ ಕೆ.ಜಗದೀಶ್ ಅಧಿಕಾರ ಸ್ವೀಕಾರ



ಮೈಸೂರು: ಮೈಸೂರು ವಿಜಯನಗರ 4ನೇ ಹಂತದ ನಿವಾಸಿ, ಕೆ.ಧನರಾಜ್ ಹಾಗೂ ಕೆ.ಲಾವಣ್ಯ ದಂಪತಿ ಪುತ್ರ ಲೆಫ್ಟಿನೆಂಟ್ ಕೆ.ಜಗದೀಶ್ ಅವರು ಜೂ.10ರಂದು ಉತ್ತರ ಖಂಡದ ಡೆಹರಾಡೂನ್‌ನ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ನಡೆದ ನಿರ್ಗಮನ ಪಥ ಸಂಚಲನದಲ್ಲಿ ಭಾರತೀಯ ಸೇನಾ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಮನೆ ಮುಂದೆ ನಿಲ್ಲಿಸಿದ್ದ ಕಾರಿನ ನಾಲ್ಕೂ ಚಕ್ರ ಕಳವು

ಮೈಸೂರು ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರದಲ್ಲಿ ಖದೀಮರ ಕೈಚಳಕ; ಐಷಾರಾಮಿ ಕಾರುಗಳೇ ಟಾರ್ಗೆಟ್

ಮೈಸೂರು, ಜೂ. 24(ಆರ್‌ಕೆ)– ಮನೆ ಮುಂದೆ ಕಾರು ಇನ್ನಿತರೆ ವಾಹನ ನಿಲ್ಲಿಸುವುದು ಈಗ ದುಸ್ತರವಾಗಿದೆ. ಇಡೀ ವಾಹನವನ್ನೇ ಕದಿಯುವುದು ಒಂದೆಡೆಯಾದರೆ, ಈಗ ನಿಲ್ಲಿಸಿದ್ದ ವಾಹನದ ಬಿಡಿ ಭಾಗಗಳ ಕದಿಯುವ ಹೊಸ ಚಾಳಿ ಶುರುವಾಗಿದೆ. ಇದಕ್ಕೆ ಮೈಸೂರಲ್ಲಿ ಮತ್ತೊಂದು ಸೇರ್ಪಡೆಯಾಗಿದೆ. ಮೈಸೂರಿನ ಸರ್ದಾರ್ ವಲ್ಲಭಭಾಯಿ ಪಟೇಲ್‌ನಗರದಲ್ಲಿ ಮನೆ ಮುಂದೆ ನಿಲ್ಲಿಸಲಾಗಿದ್ದ ಕಿಯಾ ಕಾರಿನ ನಾಲ್ಕೂ ಚಕ್ರಗಳನ್ನು ಕಳವು ಮಾಡಲಾಗಿದೆ.

ತಿ.ನರಸೀಪುರ ರಸ್ತೆಯಲ್ಲಿ ಬರುವ ಈ ಬಡಾವಣೆಯ ತಿರುಮಲ ಪಬ್ಲಿಕ್ ಶಾಲೆ ರಸ್ತೆ ನಿವಾಸಿ ಕುಬೇರಸ್ವಾಮಿ ನಿನ್ನೆ (ಶುಕ್ರವಾರ) ರಾತ್ರಿ ತಮ್ಮ ಮನೆ ಮುಂದೆ ಕಿಯಾ (ಕೆಎ 09–ಎಂಜೆ 6209) ಕಾರನ್ನು ನಿಲ್ಲಿಸಿದ್ದರು. ಇಂದು ಬೆಳಗ್ಗೆ ಎದ್ದು ನೋಡಿದಾಗ ಟೈಯರ್ ಸಮೇತ ಕಾರಿನ ನಾಲ್ಕೂ ಚಕ್ರಗಳು ನಾಪತ್ತೆಯಾಗಿದ್ದುದು ಕಂಡುಬಂತು.

ಕಲ್ಲುಗಳ ಮೇಲೆ ಕಾರು ಇರಿಸಿ, ನಾಲ್ಕೂ ಚಕ್ರಗಳನ್ನು ಕಳಚಿ ಹೊತ್ತೊಯ್ದಿದ್ದಾರೆ. ಮಧ್ಯರಾತ್ರಿ 12.30 ಗಂಟೆಯಲ್ಲಿ ನೋಡಿದಾಗ ಕಾರಲ್ಲಿ ಚಕ್ರಗಳಿದ್ದವು. ನಂತರ ಮುಂಜಾನೆ 2.30ರಿಂದ 4.30 ಗಂಟೆ ನಡುವೆ ಈ ಕೃತ್ಯ ನಡೆದಿರಬಹುದೆಂದು ಕುಬೇರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕಳೆದ 20 ದಿನಗಳ ಹಿಂದಷ್ಟೇ ನಾವು 80 ಅಡಿ ರಸ್ತೆಯ ಈ ದೊಡ್ಡ ಮನೆಗೆ ಬಂದಿದ್ದೇವೆ. ನನ್ನ ಬಳಿ ಮತ್ತೊಂದು ಟಾಟಾ ಇಂಡಿಕಾ ಕಾರೂ ಇದೆ. ಆದರೆ ಕಳ್ಳರು ಅದನ್ನು ಮುಟ್ಟಿಲ್ಲ. ಅದೇ ರೀತಿ ಈ ರಸ್ತೆಯಲ್ಲಿ 10ರಿಂದ 12 ಕಾರುಗಳು ನಿಂತಿದ್ದವಾದರೂ ಯಾವುದಕ್ಕೂ ಕೈ ಹಾಕಿಲ್ಲ. ಆದರೆ, ನನ್ನ ಹೈ–ಎಂಡ್ ಕಾರನ್ನು ಟಾರ್ಗೆಟ್ ಮಾಡಿದ್ದಾರೆ ಎಂದರು.

ಇತ್ತೀಚೆಗಷ್ಟೇ ನಾವು ಈ ಮನೆಗೆ ಬಂದಿರುವುದರಿಂದ ಇನ್ನೂ ಸಿಸಿಟಿವಿ ಕ್ಯಾಮರಾ ಅಳವಡಿಸಿಕೊಂಡಿಲ್ಲ. ಕಳೆದ ವಾರವೂ ಈ ಬಡಾವಣೆಯಲ್ಲಿ 7 ಮನೆಗಳ ವಾಟರ್ ಮೀಟರ್‌ಗಳು ಕಳವಾಗಿವೆ. 3 ಕಾರುಗಳ ವ್ಹೀಲ್‌ಗಳನ್ನು ಕಳ್ಳತನ ಮಾಡಲಾಗಿದೆ ಎಂದು ತಿಳಿಸಿದರು.

ಹೈ–ಎಂಡ್ ಕಾರುಗಳ ಚಕ್ರಗಳ ಬೆಲೆ ಜಾಸ್ತಿ ಇದ್ದು, ಅವುಗಳನ್ನು ಕಳಚಿ ಸಾಗಿಸುವುದು ಸುಲಭವಾಗಿರುವುದರಿಂದ ಖದೀಮರು ಇಂತಹ ಕಾರುಗಳನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ. ಈ ಸಂಬಂಧ ನಾನು ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಸ್ಥಳಕ್ಕೆ ಬಂದು ಮಹಜರು ಮಾಡಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂದು ಕುಬೇರಪ್ಪ ತಿಳಿಸಿದ್ದಾರೆ.

ಭಾವ ಮಿಲನ ಕವನ ಸಂಕಲನ ಬಿಡುಗಡೆ

ಮನುಷ್ಯನ ಬದುಕು ಬೆಳಕಾಗಬೇಕು, ಬಯಲಾಗಬೇಕು: ಶಂಕರ್ ದೇವನೂರು ಆಶಯ



ಮೈಸೂರು, ಜೂ.24(ಎಂಕೆ)– ಹುಟ್ಟುತ್ತಾ ಮಗುವಾಗಿ ಬೆಳೆಯುತ್ತಾ ಸಾಧಕನಾಗಿ ಕೊನೆಯಲ್ಲಿ ಬೆಳಕಾಗಿ ನಿಲ್ಲುವುದೇ ಭಗವಂತ ಮನುಷ್ಯನಿಗೆ ಕೊಟ್ಟಿರುವ ಮೌಲ್ವಿಕ ಸಂದೇಶವಾಗಿದೆ. ಬದುಕು ಬೆಳಕಾಗಬೇಕು, ಬದುಕು ಬಯಲಾಗಬೇಕು. ಬದುಕು ಭಾವೈಕ್ಯತೆಯ ಬೆಳಕಾಗಲಿ, ಬದುಕು ಭಾವನೆಗಳ ಮಿಲನವಾಗಲಿ ಎಂದು ಆಧ್ಯಾತ್ಮ ಚಿಂತಕ ಶಂಕರ್ ದೇವನೂರು ಆಶಿಸಿದರು.


ಮೈಸೂರಿನ ಕುವೆಂಪುನಗರದಲ್ಲಿರುವ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಆವರಣದಲ್ಲಿರುವ ಯೋಗ ಸಂಸ್ಕೃತ ಭವನದಲ್ಲಿ ಆಯೋಜಿಸಿದ್ದ 'ಭಾವ ಮಿಲನ' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾದಮಯ ಜಗತ್ತಿನಲ್ಲಿ ನಾವುಗಳು ಕೊಳಲ ದನಿಗಳಾಬಾರದು, ಕರುಳ ದನಿಗಳಾಗಬೇಕು ಎಂದರು.

ಜ್ಯೋತಿ(ದೀಪ) ಎಂಬುದು ನಮ್ಮ ಸಂಸ್ಕೃತಿ, ಪರಂಪರೆಯ ಅರಿವಿನ ಹಾಗೂ ಜ್ಞಾನದ ಪ್ರತೀಕವಾಗಿದೆ. ಮನೆಯ ಮುಂದೆ ಒಂದು ಮಲ್ಲಿಗೆ ಅಥವಾ ಒಂದು ಸಂಪಿಗೆ ಗಿಡವನ್ನು ನೆಟ್ಟು ಬೆಳೆಸುತ್ತೇವೆ. ಅದು ಎತ್ತರವಾಗಿ ಬೆಳೆದು ತನ್ನ ವರ್ಷದ ಸಾಧನೆಯನ್ನು ಮೊಗ್ಗಿನಲ್ಲಿ ಕೂಡಿಡುತ್ತದೆ. ಆ ಮಗ್ಗು ಕಾಲಾನಂತರ ಅರಳಿ ಸುತ್ತಲಿನ ಪರಿಸರವನ್ನು ಸುಗಂಧಗೊಳಿಸುತ್ತದೆ. ಅದರಂತೆ ನಮ್ಮ ಬದುಕು ಕೂಡ ಹೂವಿನಂತಾಗಬೇಕು. ಜನಸಮುದಾಯದ ಮನಸ್ಸುಗಳನ್ನು ಪೋಣಿಸುವ ದಾರವೇ ಸಂಸ್ಕೃತಿ. ದಾರದ ಪ್ರತೀ ಎಳೆಯೂ ಕಾರುಣ್ಯ, ಅಂತಃಕರಣದಿಂದ ಕೂಡಿರುತ್ತದೆ. ಆದರೆ ಇವತ್ತು ನಮ್ಮ ಮಕ್ಕಳ ಹೃದಯಗಳ ಭಾವಕ್ಕೆ ಬರ ಬಂದಿರುವುದಕ್ಕಾಗಿ ಇಷ್ಟೊಂದು ತಲ್ಲಣಗಳಾಗುತ್ತಿವೆ ಎಂದು ವಿಷಾಧಿಸಿದರು.

15ನೇ ಶತಮಾನದ ಶಿಕಾರಿಪುರ ಶಾಂತನಾಥ ಕವಿಗಳು ಅಭಿಮಾನದ ಕುರಿತು, ಗಗನದ ವ್ಯಾಪ್ತಿಗಿಂತ ಅಭಿಮಾನ ದೊಡ್ಡದು. ನನ್ನ ನೆಲ, ಸಂಗೀತ, ಸಾಹಿತ್ಯ, ಪರಂಪರೆ ಎಂಬುದರ ಮೇಲೆ ಅಭಿ ಮಾನವಿರಬೇಕು. ಹಾಗೆಯೇ ನಮ್ಮ ಮಕ್ಕಳಲ್ಲಿಯೂ ಅಭಿಮಾನವನ್ನು ಕಾಪಾಡಿ ಕೊಳ್ಳಬೇಕಾಗಿದೆ ಅಭಿಮಾನವೆಂದರೆ ಅಹಂಕಾರವಲ್ಲ, ಬದುಕಿನೊಂದಿಗಿನ ಅನಮೃತೆ ಮತ್ತು ಆಧ್ಯಾತ್ಮ ಎಂದರು.

ಕಾರ್ಯಕ್ರಮದ ಆರಂಭಕ್ಕೂ ಮುನ್ನವೇ ಆಗಮಿಸಿದ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಕಾರ್ಯಕ್ರಮಕ್ಕೆ ಶುಭಕೋರಿದರಲ್ಲದೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ದಿನಗಳನ್ನು ಸ್ಮರಿಸಿದರು. ಒಳ್ಳೆತನದಿಂದಲೇ ವೈದ್ಯಕೀಯ ಕ್ಷೇತ್ರದಿಂದ ರಾಜಕೀಯ ಕ್ಷೇತ್ರಕ್ಕೆ ಬಂದಿದ್ದೇನೆ. ಕಾಯಕವೇ ಕೈಲಾಸ ಎಂಬಂತೇ ಕೆಲಸ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಕವನ ಸಂಕಲ ಬಿಡುಗಡೆ: ಬಳಿಕ ಲೇಖಕ ಡಾ.ನಾರಾಯಣ ಹೆಗಡೆ ರಚಿತ 'ಭಾವ ಮಿಲನ' ಕವನ ಸಂಕಲನವನ್ನು ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಬಿಡುಗಡೆಗೊಳಿಸಿದರು. ನಂತರ ಡಾ.ಶಿಲ್ಪಾ ಹೆಗಡೆ ಮತ್ತು ತಂಡದವರಿಂದ ಸಂಗೀತ ಸಂಜೆ ನಡೆಯಿತು. ಪ್ರಾಧ್ಯಾಪಕ ರಾಮಚಂದ್ರ ಭಟ್, ಪ್ರಕಾಶಕ ಮಹೇಶ್ ಆರ್.ನಾಯಕ್, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ತೇಜಸ್ವಿ ನಾಯಕ್, ಎನ್.ನಾಗೇಂದ್ರ ಭಟ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ಅಧ್ಯಕ್ಷರಾದ ಬಿ.ಸಂದೀಪ್ ಅವರನ್ನು ಅವರ ಹಿತೈಷಿಗಳು ಶಾಸಕ ಕೆ.ಹರೀಶ್‌ಗೌಡರೊಂದಿಗೆ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಗ್ಯಾರಂಟಿ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ದಾರಿದೀಪ ಚಾರಿಟಬಲ್ ಟ್ರಸ್ಟ್ ನೆರವು



ಪ್ರದೀಪ್‌ಕುಮಾರ್

ಮೈಸೂರು, ಜೂ.24– ಮೈಸೂರಿನ ದಾರಿದೀಪ ಚಾರಿಟಬಲ್ ಟ್ರಸ್ಟ್, ಗ್ಯಾರಂಟಿ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಸಾರ್ವಜನಿಕರಿಗೆ ನೆರವಾಗಿದೆ.

ಗೃಹಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಸಲು ಜನ ಪರದಾಡುವುದನ್ನು ಗಮನಿಸಿದ ಟ್ರಸ್ಟ್‌ನ ಅಧ್ಯಕ್ಷರೂ ಆದ ಕೃಷ್ಣರಾಜ ಕ್ಷೇತ್ರದ ಮುಖಂಡ ಎಂ.ಪ್ರದೀಪ್‌ಕುಮಾರ್, ದಾರಿದೀಪ ಜನ ಸೇವಾ ಕೇಂದ್ರದಲ್ಲಿ ಉಚಿತವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ.

ಆದಿಚುಂಚನಗಿರಿ ರಸ್ತೆ, ಅರವಿಂದ ನಗರದ ಅರವಿಂದ ಆಸ್ಪತ್ರೆ ಮುಂಭಾಗದಲ್ಲಿರುವ ದಾರಿದೀಪ ಜನಸೇವಾ ಕೇಂದ್ರದಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಸಲ್ಲಿಸಬಹುದು. ಕೃಷ್ಣರಾಜ ಕ್ಷೇತ್ರದ ಜನ ಈ ಸೇವೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ಪ್ರದೀಪ್‌ಕುಮಾರ್ ಮನವಿ ಮಾಡಿದ್ದಾರೆ. ಗೃಹ ಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭವಾದ ಬಳಿಕ ಆ ಯೋಜನೆಗೂ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಸದ್ಯ ಗೃಹ ಜ್ಯೋತಿ ಅರ್ಜಿ ಸಲ್ಲಿಕೆಗೆ ಆಧಾರ್ ಕಾರ್ಡ್, ವಿದ್ಯುತ್ ಬಿಲ್, ಆಧಾರ್ ಲಿಂಕ್ ಆಗಿರುವ ಮೊಬೈಲ್ ನಂಬರ್ ತರಬೇಕು. ಗೃಹ ಲಕ್ಷ್ಮಿ ಯೋಜನೆಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಫೋಟೋ, ಬ್ಯಾಂಕ್ ಪಾಸ್‌ಬುಕ್ ಹಾಗೂ ಆಧಾರ್ ಲಿಂಕ್ ಆಧಾರ್ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ ಅಗತ್ಯವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 9880150668 ಅಥವಾ 9742853850 ಸಂಪರ್ಕಿಸಬಹುದು.

ಶಕ್ತಿ ಯೋಜನೆ ಪರಿಣಾಮ ದಿನಕ್ಕೆ ಕೋಟಿ ಮಂದಿ ಪ್ರಯಾಣ



ಬೆಂಗಳೂರು,ಜೂ.24–ಶಕ್ತಿ ಯೋಜನೆ ಪರಿಣಾಮ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ನಿತ್ಯ ಕೋಟಿಗೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗರೆಡ್ಡಿ ತಿಳಿಸಿದ್ದಾರೆ.

ಶಾಂತಿನಗರದ ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಸಾರಿಗೆ ನಿಗಮಗಳ ಎಂಡಿಗಳ ಜೊತೆ ಸಭೆ ನಡೆಸಿದ ಅವರು, ಶಕ್ತಿ ಯೋಜನೆ ಜಾರಿಗೆ ಮುನ್ನ ರಾಜ್ಯದಲ್ಲಿ 84.15 ಲಕ್ಷ ಜನ ಪ್ರಯಾಣಿಸುತ್ತಿದ್ದರು. ಆದರೆ ಯೋಜನೆ ಜಾರಿ ಬಳಿಕ ಒಂದೇ ದಿನ 1.05 ಕೋಟಿ ಜನ ಪ್ರಯಾಣ ಮಾಡಿದ್ದಾರೆ. ಈ ಮೂಲಕ ಶಕ್ತಿ ಯೋಜನೆ ಯಶಸ್ವಿಯಾಗಿದೆ ಎಂದರು. ಸಾರಿಗೆ ಇಲಾಖೆ ಬಲವರ್ಧನೆಗೆ ಕ್ರಮ ಕೈಗೊಳ್ಳಬೇಕು. ಹೊಸ ಬಸ್‌ಗಳ ಸೇರ್ಪಡೆ ಮತ್ತು ಬಸ್‌ಗಳ ಪುನಶ್ಚೇತನ ಕಾರ್ಯವಾಗಬೇಕು. ಪರಿಣಾಮಕಾರಿಯಾಗಿ ಮಾಹಿತಿ ತಂತ್ರಜ್ಞಾನ ಬಳಕೆ, ಕಾರ್ಮಿಕ ಸ್ನೇಹಿಯಾದ ಕ್ರಮ ಕೈಗೊಳ್ಳಬೇಕು. ಅದ್ಯತೆ ಮೇರೆಗೆ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು. ಸರ್ಕಾರಿ ಬಸ್‌ಗಳು ಮತ್ತು ನಿಲ್ದಾಣಗಳಲ್ಲಿ ಸ್ವಚ್ಛತೆ ಕಾಪಾಡಬೇಕು ಇದೇ ವೇಳೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಒಗ್ಗಟ್ಟಾಗಿ ಕೆಲಸ ಮಾಡಿ ಇಲಾಖೆಗೆ ಒಳ್ಳೆ ಹೆಸರು ತನ್ನಿ

ಪಿಡಿಓಗಳಿಗೆ ಜಿಪಂ ಸಿಇಓ ಗಾಯತ್ರಿ ಕಿವಿಮಾತು



ಮೈಸೂರು, ಜೂ.24(ಎಂಕೆ)– ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಉತ್ತಮವಾಗಿ ಕೆಲಸ ನಿರ್ವಹಿಸಿ ಮೇಲಾಧಿಕಾರಿಗಳೊಂದಿಗೆ ಒಡನಾಟ ಬೆಳೆಸಿಕೊಂಡಲ್ಲಿ ಅವರಿಂದಲೂ ಬೆಂಬಲ ಸಿಗಲಿದೆ. ಎಲ್ಲರೂ ಸೇರಿ ಇಲಾಖೆಗೆ ಒಳ್ಳೆಯ ಹೆಸರು ತರುವ ನಿಟ್ಟಿನಲ್ಲಿ ಕೆಲಸ ಮಾಡೋಣ ಎಂದು ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಎಂ.ಗಾಯತ್ರಿ ಹೇಳಿದರು.

ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಶನಿವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ನಿವೃತ್ತ ಅಧಿಕಾರಿಗಳು, ನಿವೃತ್ತ ಪಿಡಿಓಗಳಿಗೆ ಬೀಳ್ಕೊಡುಗೆ ಮತ್ತು ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಸಂಘ ಅಥವಾ ಸಂಘಟನೆಗಳು ಹಲವು ಗುಂಪುಗಳನ್ನು ಹೊಂದಿರುತ್ತವೆ. ಆದರೆ, ಪಿಡಿಓಗಳ ಈ ಸಂಘದಲ್ಲಿ ಅಂತಹ ಗುಂಪುಗಾರಿಕೆ ಇಲ್ಲ. ಒಂದು ಸಂಘ ಬೆಳೆಯಬೇಕೆಂದರೆ ವಿಭಿನ್ನ ಅಭಿಪ್ರಾಯ, ಚರ್ಚೆ, ಸಂವಾದ, ತಿಕ್ಕಾಟಗಳು ಇರಬೇಕು. ಅವುಗಳು ಗುಂಪುಗಳಾಗಬಾರದು ಅಷ್ಟೇ. ಅಧಿಕಾರಿಗಳು ಸೇವಾವಧಿಯಿಂದ ನಿವೃತ್ತರಾದಾಗ ಅವರನ್ನು ಗೌರವಯುತವಾಗಿ ಬೀಳ್ಕೊಡುವಂತಹದ್ದು ಉಳಿದ ಸಹೋದ್ಯೋಗಿಗಳ ಜವಾಬ್ದಾರಿ. ಅಲ್ಲದೇ, ಅಧಿಕಾರಿಗಳ ಮಕ್ಕಳು ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದರೆ ಅವರನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಇನ್ನಷ್ಟು ಸಾಧನೆಗೆ ಅನುವು ಮಾಡಿಕೊಟ್ಟಂತಾಗುತ್ತದೆ ಎಂದರು.

ಸಂಘಕ್ಕೆ ಕಟ್ಟಡ ಒದಗಿಸುವಂತೆ ಮನವಿ: ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ರುಕ್ಮಾಂಗದ ಕಂಚಿನಕೆರೆ ಮಾತನಾಡಿ, ನಮ್ಮ ಸಂಘದ ಕಚೇರಿ ಆರಂಭಿಸಲು ಮೈಸೂರು ನಗರದಲ್ಲಿ ಸೂಕ್ತ ಕಟ್ಟಡ ಒದಗಿಸಿಕೊಡುವುದು, ಜಿಪಂ ಅಧಿಕಾರಿಗಳ ಕ್ರೀಡಾಕೂಟದಲ್ಲಿ ಪಿಡಿಓಗಳು ಮತ್ತು ಕುಟುಂಬಸ್ಥರು ಭಾಗವಹಿಸಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು.

ಸನ್ಮಾನ: ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ನಿವೃತ್ತ ಉಪಕಾರ್ಯದರ್ಶಿ ಡಾ.ಎಸ್.ಪ್ರೇಮಕುಮಾರ್, ನಿವೃತ್ತ ಪಿಡಿಓಗಳಾದ ನಾಗರಾಜು, ಶ್ರೀನಿವಾಸ್, ನಾರಾಯಣ, ಸಿದ್ದಪ್ಪಾಜಿ, ನಾಗೇಂದ್ರ, ಆರ್. ಮಹದೇವ ಅವರಿಗೆ ಬೀಳ್ಕೊಟ್ಟು, ಉತ್ತಮ ಅಂಕ ಗಳಿಸಿದ ವರುಣ, ಪೂರ್ಣಿಮಾ, ಪವನ್‌ಗೌಡ, ವೇದ ಆರ್ಯನ್, ಕೆ.ಸಿ.ಆಕಾಶ್, ಸಿರಿ, ಲಿಖಿತ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಜಿಪಂ ಉಪ ಕಾರ್ಯದರ್ಶಿ (ಅಭಿವೃದ್ಧಿ) ಡಾ.ಎಂ.ಕೃಷ್ಣರಾಜು, ಮುಖ್ಯ ಯೋಜನಾಧಿಕಾರಿ ಧನುಷ್, ಮುಖ್ಯ ಲೆಕ್ಕಾಧಿಕಾರಿ ಶ್ರೀನಂದ, ಸಹಾಯಕ ಕಾರ್ಯದರ್ಶಿ ಕುಲದೀಪ್, ತಾಪಂ ಇಓಗಳಾದ ಸಿ.ಕೃಷ್ಣ, ಹೆಚ್.ಡಿ.ಗಿರೀಶ್, ಸತೀಶ್, ಸುಷ್ಮಾ, ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್, ಜಿಲ್ಲಾ ಘಟಕದ ಪದಾಧಿಕಾರಿಗಳಾದ ಸಿ.ಪ್ರಕಾಶ್, ಟಿ.ಎನ್.ಶ್ರೀನಿವಾಸ್, ಮೊಹಮ್ಮದ್ ಇಸ್ಹಾಕ್, ಎಸ್.ವಿ.ಸೌಮ್ಯ, ವೃಷಬೇಂದ್ರಪ್ಪ, ವಿ.ಎಸ್.ಪೂರ್ಣಿಮಾ, ರಾಘವೇಂದ್ರ ಪ್ರಸನ್ನ, ಟಿ.ಸೌಮ್ಯಲತಾ, ರೂಪೇಶ್, ಸೌಮ್ಯಲತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ಪೆಟ್ರೋಲ್ ಖಾಲಿ ಆಗಿದೆ ಕಣೆ ಮುಂದೆ ಹೋಗೋಕೆ ಆಗಲ್ಲ...

ಹೆಂಡ್ತಿ : ಸರಿ ಹಾಗಾದ್ರೆ ವಾಪಸ್ ಮನೆಗೆ ಹೋಗೋಣ ನಡೀರಿ!

ಮೈಸೂರು ಮಿತ್ರ

ಭಾನುವಾರ, 25 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮಗೇನು ಗೊತ್ತಿದೆ ಮತ್ತು ಏನು ಗೊತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ. –ಕನ್‌ಫ್ಯೂಶಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿಷ್ಠೆಯಿದ್ದವನಿಗೆ ನಷ್ಟವಿಲ್ಲ

ನಿಮ್ಮ ಪತ್ರಗಳು

ಈ ಅನೈರ್ಮಲ್ಯದಿಂದ ಮುಕ್ತಿ ಎಂದು?

ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಒಳಚರಂಡಿ ಪೈಪ್ ಒಡೆದು ಹೋಗಿ ಸುಮಾರು 6 ತಿಂಗಳುಗಳೇ ಕಳೆದಿವೆ. ಈ ಬಗ್ಗೆ 'ಮೈಸೂರು ಮಿತ್ರ'ದಲ್ಲಿ ಸಹ ವರದಿ ಪ್ರಕಟವಾಗಿತ್ತು. ಕೊಳಚೆ ನೀರು ರಸ್ತೆಗೆ ಹರಿಯುವುದರಿಂದ ಬಸ್ಸುಗಳು ಸಂಚರಿಸಿ ಪಾದಚಾರಿಗಳ ಮೇಲೆ ಎರಚುತ್ತದೆ. ಅತ್ಯಧಿಕ ತೆರಿಗೆ ಪಾವತಿಸುವ ಕಟ್ಟಡ ಇದಾಗಿದ್ದು, ಚುನಾವಣೆ ನೆಪ ಹೇಳಿಕೊಂಡು ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಲಿಲ್ಲ. ಚುನಾವಣೆ ಮುಗಿದು ಒಂದು ತಿಂಗಳೇ ಕಳೆದಿದೆ. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಮೈಸೂರು ನಗರ ಬಸ್ ನಿಲ್ದಾಣದ ಹಾಪ್‌ಕಾಮ್ಸ್ ಪಕ್ಕದ ಈ ಸಮಸ್ಯೆ ಬಗೆಹರಿಸುವರೆ?

–ಜಿ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.

ಸರ್ವರ್ ಸಮಸ್ಯೆ ತುರ್ತಾಗಿ ಪರಿಹರಿಸಿ

ಮಾನ್ಯರೆ,

ಸರ್ಕಾರ ಗೃಹ ಜ್ಯೋತಿ ಯೋಜನೆ ನೋಂದಣಿ ದಿನಾಂಕ ನಿಗದಿತ ದಿನಾಂಕಕ್ಕಿಂತ ಮೂರು ದಿನ ತಡವಾಗಿ ಪ್ರಾರಂಭಿಸಿದೆ. ನೋಂದಣಿಗಾಗಿ ಅಸಂಖ್ಯಾತ ನಾಗರಿಕರು ಹೆಚ್ಚಾಗಿ ವಯೋವೃದ್ಧರು ಆರೋಗ್ಯ ಸರಿಯಿಲ್ಲದಿದ್ದರೂ ಸರತಿ ಸಾಲಿನಲ್ಲಿ ನಿಂತು ನೋಂದಣಿಗಾಗಿ ಕಾದಿದ್ದರೂ ಸರ್ವರ್ ಸಮಸ್ಯೆ ಎದುರಾಗಿ ನಿರಾಶರಾಗಿ ಹಿಂದಿರುಗುತ್ತಿದ್ದಾರೆ. ಯೋಜನೆ ನೋಂದಣಿ ಕಾರ್ಯ ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಸರ್ವರ್ ಸಮಸ್ಯೆಯನ್ನು ಸರ್ಕಾರ ಬಗೆಹರಿಸಬೇಕಿತ್ತು. ಆ ರೀತಿ ಮಾಡದಿರುವುದು ಖಂಡನೀಯ. ಸಂಬಂಧಪಟ್ಟವರು ತುರ್ತಾಗಿ ಸರ್ವರ್ ಸಮಸ್ಯೆ ಬಗೆಹರಿಸಿ ನಾಗರಿಕರಿಗೆ ನೋಂದಣಿ ಮಾಡಲು ಅವಕಾಶ ಮಾಡಿಕೊಡಲು ಮನವಿ.

–ನೊಂದ ನಾಗರಿಕರು, ಮೈಸೂರು.

ಶೌಚಾಲಯಕ್ಕೆ ಜಾಗ ಇದೆ, ಪಾಲಿಕೆ ನೋಡುತ್ತಿಲ್ಲ!

ಮಾನ್ಯರೆ,

ರಾಮಸ್ವಾಮಿ ವೃತ್ತದ ಬಳಿ ಶೌಚಾಲಯವಿಲ್ಲದ ಬಗ್ಗೆ ವರದಿ ನೋಡಿದೆ. ಹಿಂದೆ ಶೌಚಾಲಯದ ನಿರ್ಮಾಣದ ಪ್ರಯತ್ನಗಳು ನಡೆದರೂ ಸಾರ್ವಜನಿಕರ ಆಕ್ಷೇಪದಿಂದ ಶೌಚಾಲಯ ನಿರ್ಮಾಣ ನನೆಗುದಿಗೆ ಬಿದ್ದಿತ್ತು. ರಾಮಸ್ವಾಮಿ ವೃತ್ತದ ಬಳಿಯಿರುವ ಹಳೆಯ ಪೆಟ್ರೋಲ್ ಬಂಕ್ ಜಾಗ ಪಾಲಿಕೆಯ ಕಣ್ಣಿಗೇಕೆ ಬೀಳುತ್ತಿಲ್ಲ? ಅದು ಪಾಲಿಕೆಯ ಸ್ವತ್ತೇ ಆಗಿದೆ. ಎರಡು ರಸ್ತೆಗಳ ಮಧ್ಯೆಯಿರುವ ಈ ಜಾಗ ಪಾಲಿಕೆಯ ಉಗ್ರಾಣವಾಗಿದೆ. ಇದು ಖಾಸಗಿ ವಾಹನದ ಅಕ್ರಮ ತಂಗುದಾಣವಾಗಿದ್ದು, ಸಾರ್ವಜನಿಕರ ಕಿರಿಕಿರಿಗೆ ಕಾರಣವಾಗುತ್ತಿದೆ. ಈ ಜಾಗವನ್ನು ಹಾಪ್‌ಕಾಮ್ಸ್ ಇಲ್ಲವೇ ಕೆ.ಎಂ.ಎಫ್‌ಗೆ ನೀಡಬೇಕೆಂಬ ಕೋರಿಕೆಯನ್ನೂ ಪಾಲಿಕೆ ಕೇಳಲಿಲ್ಲ. ಈ ಜಾಗವನ್ನು ಸದುಪಯೋಗಮಾಡಿಕೊಳ್ಳದ ಪಾಲಿಕೆ ಅಧಿಕಾರಿಗಳು ವೃಥಾ ಕಾಲಹರಣ ಮಾಡುತ್ತಿದ್ದಾರೆ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಶುದ್ಧ ನೀರಿನ ಘಟಕವನ್ನು ಸರಿಪಡಿಸಿ



ಮಾನ್ಯರೇ,

ಮೈಸೂರಿನ ನಜರ್‌ಬಾದ್‌ಗೆ ಒಳಪಟ್ಟಿರುವ ಪೀಪಲ್ಸ್ ಪಾರ್ಕ್‌ನ ನಗರ ಕೇಂದ್ರ ಗ್ರಂಥಾಲಯಕ್ಕೆ ಪ್ರತಿ ದಿನ ನೂರಾರು ಯುವಕ ಯುವತಿಯರು ಓದುವ ಸಲುವಾಗಿ ಬರುತ್ತಾರೆ. ಆದರೆ ಇಲ್ಲಿರುವ ಕುಡಿಯುವ ನೀರಿನ ಘಟಕ 50 ಲೀಟರ್ ಸಾಮರ್ಥ್ಯ ಹೊಂದಿದ್ದು, ಹೆಚ್ಚಿನ ಸಾರ್ವಜನಿಕರು ಬರುವುದರಿಂದ 50 ಲೀಟರ್ ಸಾಮರ್ಥ್ಯ ಹೊಂದಿರುವ ನೀರಿನ ಘಟಕ ಸಾಕಾಗುವುದಿಲ್ಲ. ತುಂಬಾ ದಿನಗಳಿಂದ ಶುಚಿ ಮಾಡದೆ ಕೆಟ್ಟು ನಿಂತಿದ್ದು, ಇದರಿಂದ ಆರೋಗ್ಯ ಹದಗೆಡುವ ಸಂಭವವಿದೆ. ಇದರ ಬಗ್ಗೆ ಗ್ರಂಥಾಲಯದ ಸಿಬ್ಬಂದಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ವಿಷಯಕ್ಕೆ ಸಂಬಂಧಿಸಿದ ಗ್ರಂಥಪಾಲಕರು ಮತ್ತು ಅಧಿಕಾರಿಗಳು ಹೆಚ್ಚಿನ ನೀರಿನ ಸಂಗ್ರಹದ ಘಟಕದ ಜೊತೆಗೆ ನೀರಿನ ಶುದ್ಧೀಕರಣ ಯಂತ್ರವನ್ನು ಅಳವಡಿಸಿ ಓದುಗರಿಗೆ ಅನುಕೂಲ ಮಾಡಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಶೀಘ್ರ ಡಾಂಬರೀಕರಣಗೊಳಿಸಿ



ಮಾನ್ಯರೇ,

ಇತ್ತೀಚೆಗಷ್ಟೇ ಕೆ.ಸಿ. ಬಡಾವಣೆಯಲ್ಲಿ ರಸ್ತೆ ಡಾಂಬರೀಕರಣ ಮಾಡಿರುವುದು ಸರಿಯಷ್ಟೆ, ಆದರೆ ಎಲ್ಲಾ ರಸ್ತೆಗಳಿಗೆ ಡಾಂಬರೀಕರಣ ಮಾಡಿ, ನಾವು ವಾಸ ಮಾಡುತ್ತಿರುವ ಮಿಸ್ಟಿ ವುಡ್ಸ್ ಅಪಾರ್ಟ್‌ಮೆಂಟ್‌ನ 7ನೇ ಕ್ರಾಸ್‌ನಲ್ಲಿ ಡಾಂಬರೀಕರಣ ಮಾಡದೆ ಬಿಟ್ಟಿರುವುದು ವಿಷಾದನೀಯ. ಆದ್ದರಿಂದ ಸಂಬಂಧಪಟ್ಟ ಮಹಾನಗರ ಪಾಲಿಕೆ ಸದಸ್ಯರು ಈ ಕಡೆಯೂ ಗಮನ ಹರಿಸಬೇಕಾಗಿದೆ. ಏಕೆಂದರೆ ಅಲ್ಲಿ ಬರೀ ಜಲ್ಲಿ ಹಾಕಿರುವುದರಿಂದ ವಾಹನಗಳು ದಿನಕ್ಕೊಂದು ಪಂಕ್ಚರ್ ಆಗುತ್ತಿರುತ್ತದೆ. ಆದ್ದರಿಂದ ದಯವಿಟ್ಟು ಆದಷ್ಟು ಬೇಗ ಡಾಂಬರೀಕರಣ ಮಾಡಬೇಕೆಂದು ಅಪಾರ್ಟ್‌ಮೆಂಟ್ ನಿವಾಸಿಗಳ ಮನವಿ.

–ನೊಂದ ಅಪಾರ್ಟ್‌ಮೆಂಟ್ ನಿವಾಸಿಗಳು



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಬ್ರಿಟಿಷರು ಬಿತ್ತಿದ ವಿಷಬೀಜದ ಫಲ; ಮಣಿಪುರದಲ್ಲಿ ಉಂಟಾಗಿದೆ ಕೋಲಾಹಲ



ಬ್ರಿಟಿಷರು ಬರ್ಮಾ ಜಯಿಸಿದ ನಂತರ ಕಾಬ್ವಾ ಕಣಿವೆ ಪ್ರದೇಶ ಮಣಿಪುರಕ್ಕೆ ವಾಪಸು ನೀಡಬೇಕೆಂಬ ಮಣಿಪುರ ರಾಜನ ಕೋರಿಕೆಯನ್ನು ಬ್ರಿಟಿಷ್ ಸರಕಾರ ನಿರ್ಲಕ್ಷಿಸಿತು. ಸ್ವಾತಂತ್ರ್ಯಾನಂತರ ಮಣಿಪುರದ ರಾಜ ಮುಖ್ಯಮಂತ್ರಿ ಎಂ.ಕೆ.ಪ್ರಿಯ ಬ್ರಾತ ಸಿಂಗ್ ಈ ಬಗ್ಗೆ ಬ್ರಿಟಿಷ್ ಸರಕಾರದೊಡನೆ ಪತ್ರ ವ್ಯವಹಾರ ನಡೆಸಿದರು. ಆದರೆ ಸರ್ದಾರ್ ಪಟೇಲರು ಮಣಿಪುರ ರಾಜನಿಗೆ ಈ ಪ್ರಸ್ತಾಪ ಮುಂದುವರಿಸದಂತೆ ನೀಡಿದ ಸಲಹೆ ಮೇರೆಗೆ ರಾಜ ಪತ್ರ ವಾಪಸು ಪಡೆದರು. ಬ್ರಿಟಿಷರ ಕುತಂತ್ರದಿಂದಾಗಿ ಕಾಬ್ವಾ ಕಣಿವೆ ಇಂದಿಗೂ ಭಾರತ–ಮ್ಯಾನ್ಮಾರ್ ಮಧ್ಯೆ ಕುಖ್ಯಾತ ಹಾಗೂ ಸಂಕೀರ್ಣ ಭೂಭಾಗವಾಗಿದ್ದು, ಗಲಭೆಯ ಇನ್ನೊಂದು ಅದೃಶ್ಯ ಕಾರಣವಾಗಿದೆ.

ಪೂರ್ವೋತ್ತರದ ಶಾಂತಿಪ್ರಿಯ ರಾಜ್ಯ ಮಣಿಪುರದಲ್ಲಿ ಮೇ 3 ರಂದು ವ್ಯಾಪಕ ಹಿಂಸಾಚಾರ ಸಂಭವಿಸಿತು. ರಾಜ್ಯದಲ್ಲಿ ಅಶಾಂತಿ ಮತ್ತು ಹಿಂಸಾಚಾರ ಇನ್ನೂ ನಿಂತಿಲ್ಲ. ಕೇವಲ ಮೂವತ್ತು ಲಕ್ಷ ಜನಸಂಖ್ಯೆ ಹೊಂದಿರುವ ಈ ರಾಜ್ಯದಲ್ಲಿ ಈವರೆಗಿನ ಹಿಂಸಾಚಾರಕ್ಕೆ ನೂರಾರು ಜನ ಬಲಿಯಾಗಿದ್ದಾರೆ. ರಾಜ್ಯದಲ್ಲಿರುವ ಕೆಲವು ದೇಶ ವಿರೋಧಿ ಶಕ್ತಿಗಳು ಬಹುಸಂಖ್ಯಾತ ಮೈಥೆಯಿ ಮತ್ತು ಇತರ ಬುಡಕಟ್ಟು ಸಮುದಾಯಗಳಾದ ಕುಕಿಗಳು, ನಾಗಾಗಳ ಮಧ್ಯೆ ಅಪನಂಬಿಕೆ ಸೃಷ್ಟಿಸುವಲ್ಲಿ ವ್ಯಸ್ತರಾಗಿದ್ದಾರೆ. ಈ ಶಕ್ತಿಗಳು ಸಮುದಾಯಗಳ ಮಧ್ಯೆ ಹಾಕಿದ ದ್ವೇಷದ ಬಲೆಗೆ ಮೈಥೆಯಿಗಳು ಬಲಿಯಾದರು. ಮರುದಿನ ಮೈಥೆಯಿಗಳು ಬಹುಸಂಖ್ಯಾತ ಪ್ರದೇಶಗಳಲ್ಲಿ ಕುಕಿಗಳ ಮೇಲೆ ಹಿಂಸಾಚಾರ ನಡೆದವು. ಪರಿಣಾಮವಾಗಿ 48000ಕ್ಕೂ ಹೆಚ್ಚು ಜನ ನಿರ್ವಸಿತರಾಗಿದ್ದಾರೆ. ಬುಡಕಟ್ಟು ಸಮುದಾಯಗಳು ಪರಸ್ಪರ ವಿಶ್ವಾಸ ಕಳೆದುಕೊಂಡಿದ್ದಾರೆ. ಬಹುಸಂಖ್ಯಾತ ಮೈಥೆಯಿಗಳು ಹಿಂಸಾಚಾರದಿಂದ ಭಾವನಾತ್ಮಕವಾಗಿ ಆಘಾತಗೊಂಡಿದ್ದಾರೆ. ಮಣಿಪುರದಲ್ಲಿ ಮಾನವೀಯ ಬಿಕ್ಕಟ್ಟು ತಲೆದೋರಿದೆ. ಜನರು ಸುರಕ್ಷೆ ಬಗ್ಗೆ ಚಿಂತಿತರಾಗಿದ್ದಾರೆ. ಪ್ರಸ್ತುತ ಮಣಿಪುರದ ಪರಿಸ್ಥಿತಿ ಬೂದಿಮುಚ್ಚಿದ ಕೆಂಡದಂತಿದೆ.

ಮಣಿಪುರದಲ್ಲಿ ವಿಷಬೀಜ ಬಿತ್ತಿದ ಬ್ರಿಟಿಷರು

1949 ರಲ್ಲಿ ಮಣಿಪುರ ರಾಜಸಂಸ್ಥಾನವು ಭಾರತದೊಂದಿಗೆ ವಿಲೀನವಾಗುವವರೆಗೆ ಸಾಂಸ್ಕೃತಿಕ ವೈಭವ ಮತ್ತು ಪರಂಪರೆಯಿಂದ ಕೂಡಿದ ಸಾಮ್ರಾಜ್ಯವಾಗಿತ್ತು. ಆದರೆ 19 ಮತ್ತು 20ನೇ ಶತಮಾನದಲ್ಲಿ ಬ್ರಿಟಿಷರು ಮಾಡಿದ ಕುತಂತ್ರಗಳು, ಕಾಯ್ದೆಗಳು ಇಂದು ಮಣಿಪುರದ ಸಮಗ್ರತೆಗೆ ಅಪಾಯ ತಂದಿದೆ. ಅಂದು ಈ ಕಾಯ್ದೆಗಳು ಬಿತ್ತಿದ ವಿಷ ಬೀಜ ಇಂದು ಹೆಮ್ಮರವಾಗಿ ಮಣಿಪುರಿಗಳ ಬದುಕು ಹಾಳುಗೆಡವಿದೆ.

ಬ್ರಿಟಿಷರ ಆಗಮನದವರೆಗೆ ಬರ್ಮಾ, ಮಣಿಪುರ, ಅಸ್ಸಾಂ ಸಾಮ್ರಾಜ್ಯಗಳು ವೈಭವದಿಂದ ಮೆರೆದಿದ್ದವು. ಆದರೆ 19ನೇ ಶತಮಾನದಲ್ಲಿ ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಪೂರ್ವೋತ್ತರ–ಪಶ್ಚಿಮ ಭಾರತದಲ್ಲಿ ವಿಸ್ತರಿಸಬೇಕೆಂಬ ಉತ್ಸಾಹದಲ್ಲಿ ಮಾಡಿದ ಕಾಯ್ದೆ, ನಿಯಮಗಳು ವಿಶೇಷವಾಗಿ ಮಣಿಪುರವನ್ನು ಪೀಡಿಸಿತು. ಪೂರ್ವೋತ್ತರದಲ್ಲಿ ಬರ್ಮಾದ ತಗ್ಗು ಪ್ರದೇಶ (ಈಗಿನ ಮ್ಯಾನ್ಮಾರ್), ಅಸ್ಸಾಂ, ಕಚಾರ್, ಮಣಿಪುರ ಮತ್ತು ಚೈಂತಿಯಾ ಗುಡ್ಡಗಾಡು ಪ್ರದೇಶಗಳನ್ನು ಬ್ರಿಟಿಷರು ತಮ್ಮ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದರು. ಆದರೆ ಪೂರ್ವದಲ್ಲಿ ಬ್ರಿಟಿಷ್ ಇಂಡಿಯಾ ಮತ್ತು ಬರ್ಮಾ ನಡುವಿನ ಕೆಲ ಪ್ರದೇಶಗಳ ಮೇಲೆ ಪ್ರಭುತ್ವಕ್ಕಾಗಿ ನಡೆದ ಸಣ್ಣ ಮಟ್ಟದ ತಿಕ್ಕಾಟ ನಿಧಾನವಾಗಿ ಭಾರೀ ಸಂಘರ್ಷದ ಸ್ವರೂಪ ಪಡೆದು 1824–26ರಲ್ಲಿ ಪ್ರಥಮ ಆಂಗ್ಲೋ ಬರ್ಮಿಸ್ ಯುದ್ಧ ನಡೆಯಿತು.

ಬ್ರಿಟಿಷ್ ಇಂಡಿಯಾ–ಬರ್ಮಾ ನಡುವಿನ ಯುದ್ಧದಲ್ಲಿ ಮಣಿಪುರ ಅನಿವಾರ್ಯವಾಗಿ ಸಿಲುಕಿಕೊಂಡಿತು. ದ.ಪೂರ್ವ ಏಷಿಯಾದಲ್ಲಿ ತನ್ನ ಆಧಿಪತ್ಯ ಸ್ಥಾಪಿಸುವ ಉದ್ದೇಶದಿಂದ ಬ್ರಿಟಿಷ್ ಸಾಮ್ರಾಜ್ಯ ಬರ್ಮಾ ವಿರುದ್ಧ ಕಠಿಣ ನಿಲುವು ತಾಳಿತು. ಪ್ರಥಮ ಆಂಗ್ಲೋ ಬರ್ಮಿಸ್ ಯುದ್ಧಾನಂತರ ಬರ್ಮಾವನ್ನು ಆರ್ಥಿಕವಾಗಿ ದುರ್ಬಲಗೊಳಿಸಲು ಕಾಬ್ವಾ ಕಣಿವೆಯನ್ನು ಹತ್ತು ಲಕ್ಷ ಪೌಂಡ್‌ಗೆ ಬರ್ಮಾಕ್ಕೆ ಹಸ್ತಾಂತರಿಸುವ ಒಪ್ಪಂದಕ್ಕೆ ಬರಲಾಯಿತು. ಈ ಹಸ್ತಾಂತರ ಪ್ರಕ್ರಿಯೆಯು ದಿ. 9.1.1834 ರಲ್ಲಿ ಪೂರ್ಣಗೊಂಡಿತ್ತು. ಆದರೆ ಈ ಹಸ್ತಾಂತರದಿಂದ ಕಾಬ್ವಾ ಕಣಿವೆಯೊಂದಿಗೆ ಮಣಿಪುರಿಗಳು ಜೀವನ ರೇಖೆಯಂತಿದ್ದ ಚಿಂದ್ವಿನ್ ನದಿ (ನಿಂಗ್‌ಥಿ ನದಿ)ಯನ್ನು ಕಳೆದುಕೊಂಡರು. ಇದರಿಂದ ಮಣಿಪುರವು ಭೂ ಆವೃತವಾದ ಕಾರಣ ಜನರ ಬದುಕು ದುರ್ಬರವಾಯಿತು. ಎರಡು ಪ್ರದೇಶಗಳ ಮಧ್ಯೆ ಮುಕ್ತ ಸಂಚಾರ ಸ್ಥಗಿತಗೊಂಡು ಮಣಿಪುರ ನಲುಗಿತು. 1824–26 ನಂತರ 1852–53, 1855ರಲ್ಲಿ ಒಟ್ಟು ಮೂರು ಆಂಗ್ಲೋ ಬರ್ಮಾ ಯುದ್ಧಾನಂತರ ಬ್ರಿಟಿಷರು ದಕ್ಷಿಣ ಏಷ್ಯಾ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸುವಲ್ಲಿ ಯಶಸ್ವಿಯಾಯಿತು.

ಏಳು ವರ್ಷಗಳ ವಿನಾಶ (Seven years devastation)

1819ರಿಂದ 1826ರವರೆಗೆ ಮಣಿಪುರ ಕಣಿವೆಯು ಬರ್ಮಿಯರ ಆಳ್ವಿಕೆಯಲ್ಲಿ ಸಂಪೂರ್ಣ ನಾಶಗೊಂಡಿತು. ಇದನ್ನು ಏಳು ವರ್ಷಗಳ ವಿನಾಶವೆಂದು ಮಣಿಪುರಿ ಇತಿಹಾಸದಲ್ಲಿ ದಾಖಲಾಗಿದೆ. ಮಣಿಪುರದ ಇತಿಹಾಸದಲ್ಲಿ ಇದೊಂದು ಕರಾಳ ಮತ್ತು ದುರಂತಮಯ ಘಟನೆ ಎಂದು ಪರಿಗಣಿಸಲಾಗಿದೆ. ಇದು ಮಣಿಪುರ ಸಾಮ್ರಾಜ್ಯದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಮೇಲೆ ಗಂಭೀರ ಪರಿಣಾಮ ಬೀರಿತು. 1819ರಲ್ಲಿ ಬರ್ಮಾದ ರಾಜ ಬಗಿಡಾವ್‌ನ ಪಟ್ಟಾಭಿಷೇಕ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಮಣಿಪುರದ ರಾಜ ಮಾರ್ಜಿತ್‌ನಿಗೆ ನೀಡಿದ ಆದೇಶವನ್ನು ಧಿಕ್ಕರಿಸುತ್ತಾನೆ. ಇದರಿಂದ ಕೆರಳಿದ ಬಗಿಡಾವ್ ಮಣಿಪುರದ ಮೇಲೆ ಯುದ್ಧ ಸಾರುತ್ತಾನೆ. ಮಣಿಪುರಿ ಸೇನೆ ಸಂಪೂರ್ಣ ಸೋತು ಮಾರ್ಜಿತ್‌ನು ಕಾಚಾರ್‌ಗೆ ಪಲಾಯನ ಮಾಡುತ್ತಾನೆ. ಅನಂತರ ಬರ್ಮಿ ಸೇನೆ ಮಣಿಪುರದ ಜನರನ್ನು ಕ್ರೌರ್ಯದಿಂದ ನಿರ್ದಯದಿಂದ ಕೊಲ್ಲುತ್ತದೆ. ಈ ಏಳು ವರ್ಷಗಳ ವಿನಾಶದಲ್ಲಿ ಒಂದು ವರ್ಷ ಕಾಲ ದೊಡ್ಡ ಪ್ರಮಾಣದಲ್ಲಿ ಲೂಟಿ, ಚಿತ್ರಹಿಂಸೆಯನ್ನು ಮಣಿಪುರಿಗಳ ಮೇಲೆ ಬರ್ಮಿ ಸೇನೆ ನಡೆಸಿತು. ಈ ಅವಧಿಯಲ್ಲಿ ಸುಮಾರು 5.5 ಲಕ್ಷ ಮಣಿಪುರಿಗಳು ಕೊಲ್ಲಲ್ಪಟ್ಟರು. 3.3 ಲಕ್ಷಕ್ಕೂ ಹೆಚ್ಚು ಮಣಿಪುರಿಗಳನ್ನು ಸೆರೆಯಾಳುಗಳಾಗಿ ಒಯ್ಯಲಾಯಿತು. ಬರ್ಮಾದ ದಬ್ಬಾಳಿಕೆ, ಕ್ರೌರ್ಯಕ್ಕೆ ಹೆದರಿ ಮಣಿಪುರದ ಜನರು ಕಣಿವೆಯನ್ನು ತೊರೆದು ಕಾಡು ಬೆಟ್ಟಗಳಲ್ಲಿ ಅಡಗಿಕೊಂಡರು. ಏಳು ವರ್ಷಗಳ ಈ ವಿನಾಶಕಾರಿ ಘಟನೆ ಇಂದಿಗೂ ಮಣಿಪುರಿಗಳ ಮನಸ್ಸನ್ನು ತಲ್ಲಣಗೊಳಿಸುತ್ತಿದೆ. ಈ ಯುದ್ಧಾನಂತರ ಮಣಿಪುರ ಕಣಿವೆ ನಿರ್ಜನವಾಯಿತು. ಮಣಿಪುರ ಬ್ರಿಟಿಷ್ ಸಾಮ್ರಾಜ್ಯದ ಭಾಗವಾದರೂ ರಾಜನ ಆಳ್ವಿಕೆ ಮುಂದುವರಿಯಿತು. ಆಗ ಮಣಿಪುರದ ಅರಸ ರಾಜ್ಯದ ರಕ್ಷಣೆ ಮತ್ತು ಇತರ ಉದ್ದೇಶಗಳಿಗಾಗಿ ಲುಶ್ವಾ ಮತ್ತು ಚಿನ್ ಪರ್ವತೀಯ ಪ್ರದೇಶದ ಕುಕಿಚಿನ್ ಬುಡಕಟ್ಟು ಜನರಿಗೆ ಕಣಿವೆಗೆ ವಲಸೆ ಬರುವಂತೆ ಆಹ್ವಾನಿಸಿದ. ಮಣಿಪುರದಲ್ಲಿ ವಾತಾವರಣ ತಿಳಿಯಾಗಲಾರಂಭಿಸಿತು. ಆದರೆ ಮುಂದಿನ ದಿನಗಳಲ್ಲಿ ರಾಜನ ಆಡಳಿತದಲ್ಲಿ ಬ್ರಿಟಿಷರ ಅತಿಯಾದ ಹಸ್ತಕ್ಷೇಪದಿಂದ ರೋಸಿದ ಮಣಿಪುರ ರಾಜ 1891 ರಲ್ಲಿ ಬ್ರಿಟಿಷರ ವಿರುದ್ಧ ಯುದ್ಧ ಸಾರಿದ. ಈ ಯುದ್ಧ ಬ್ರಿಟಿಷರ ವಿಜಯದಲ್ಲಿ ಕೊನೆಗೊಂಡಿತು. ಬ್ರಿಟಿಷರು ಮೈದಿಂದು ಚುರ್‌ಚಂದ್‌ನನ್ನು ರಾಜನೆಂದು ಘೋಷಿಸಿದರು. ಬ್ರಿಟಿಷರು, ತಮ್ಮ ಆಡಳಿತದಲ್ಲಿ ಮಣಿಪುರವನ್ನು ಗುಡ್ಡಗಾಡು ಮತ್ತು ಬಯಲು ಪ್ರದೇಶವೆಂದು ದುರುದ್ದೇಶದಿಂದ ವಿಭಜಿಸಿತು. ಜನರನ್ನು ಸಂಪೂರ್ಣವಾಗಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಆಡಳಿತ, ರಾಜಕೀಯವಾಗಿ ಮಾತ್ರವಲ್ಲ ಮಾನಸಿಕವಾಗಿಯೂ, ಭಾವನಾತ್ಮಕವಾಗಿಯೂ ವಿಭಜಿಸಿದರು.

ಬ್ರಿಟಿಷರ ಜನಗಣತಿ ಆಯೋಗದ ಅಧಿಕಾರಿ ಸರ್ ಅಥಲ್‌ಸ್ಟೇನ್ ಬೈನ್ಸರು 1891ರ ಪ್ರಥಮ ಜನಗಣತಿಯಲ್ಲಿ ಮೈಥೆಯಿಗಳನ್ನು ಗುಡ್ಡಗಾಡು ಪ್ರದೇಶದ ಬುಡಕಟ್ಟು ಸಮುದಾಯವೆಂದು ಪ್ರತ್ಯೇಕಿಸಿದ್ದು, 1931 ರವರೆಗೆ ಅಸ್ತಿತ್ವದಲ್ಲಿತ್ತು. ಆನಂತರ ಬ್ರಿಟಿಷರ ಎಲ್ಲಾ ಆಡಳಿತಗಾರರು ಮಣಿಪುರಿಗಳನ್ನು ಮಾನಸಿಕವಾಗಿ ಪ್ರತ್ಯೇಕಿಸುವ ಕಾರ್ಯ ಮುಂದುವರಿಸಿದರು. ಇದರಲ್ಲಿ ಯಶಸ್ವಿಯೂ ಆದರು. ಇತ್ತೀಚಿನ ಗಲಭೆಗಳ ಕೆಲವು ಕಾರಣಗಳಲ್ಲಿ ಇದೂ ಒಂದು. ಬ್ರಿಟಿಷರು ಬರ್ಮಾ ಜಯಿಸಿದ ನಂತರ ಕಾಬ್ವಾ ಕಣಿವೆ ಪ್ರದೇಶ ಮಣಿಪುರಕ್ಕೆ ವಾಪಸು ನೀಡಬೇಕೆಂಬ ಮಣಿಪುರ ರಾಜನ ಕೋರಿಕೆಯನ್ನು ಬ್ರಿಟಿಷ್ ಸರಕಾರ ನಿರ್ಲಕ್ಷಿಸಿತು. ಸ್ವಾತಂತ್ರ್ಯಾ ನಂತರ ಮಣಿಪುರದ ರಾಜ ಮುಖ್ಯಮಂತ್ರಿ ಎಂ.ಕೆ. ಪ್ರಿಯಬ್ರಾತ ಸಿಂಗ್ ಈ ಬಗ್ಗೆ ಬ್ರಿಟಿಷ್ ಸರಕಾರದೊಡನೆ ಪತ್ರ ವ್ಯವಹಾರ ನಡೆಸಿದರು. ಆದರೆ ಸರ್ದಾರ್ ಪಟೇಲರು ಮಣಿಪುರ ರಾಜನಿಗೆ ಈ ಪ್ರಸ್ತಾಪ ಮುಂದುವರಿಸದಂತೆ ನೀಡಿದ ಸಲಹೆ ಮೇರೆಗೆ ರಾಜ ಪತ್ರ ವಾಪಸು ಪಡೆದರು. ಬ್ರಿಟಿಷರ ಕುತಂತ್ರದಿಂದಾಗಿ ಕಾಬ್ವಾ ಕಣಿವೆ ಇಂದಿಗೂ ಭಾರತ–ಮ್ಯಾನ್ಮಾರ್ ಮಧ್ಯೆ ಕುಖ್ಯಾತ ಹಾಗೂ ಸಂಕೀರ್ಣ ಭೂಭಾಗವಾಗಿದ್ದು, ಗಲಭೆಯ ಇನ್ನೊಂದು ಅದೃಶ್ಯ ಕಾರಣವಾಗಿದೆ.

ಕುಕಿ ಪರಂಪರೆ ಮತ್ತು ಗಲಭೆಯ ನಿಗೂಢ ಕಾರಣಗಳು

ಮಣಿಪುರಕ್ಕೆ ವಲಸೆ ಬಂದ ಕುಕಿಗಳ ಮುಖ್ಯಸ್ಥನು ಸಮುದಾಯದ ಸರ್ವೋಚ್ಚ ಅಧಿಕಾರಿಯಾಗಿದ್ದು, ಭೂಮಿ, ಗ್ರಾಮ ಅರಣ್ಯಗಳ ಒಡೆಯನಾಗಿರುತ್ತಾನೆ. ಆತ ಯಾರಿಗೂ ಭೂಮಿಯನ್ನು ಕೊಡುವ ಅಧಿಕಾರ ಹೊಂದಿರುತ್ತಾನೆ. ಕುಕಿಗಳು ಮಣಿಪುರದಲ್ಲಿ ನೆಲೆಸಿದ ನಂತರ ಬಾಂಗ್ಲಾ, ಬರ್ಮಾದಲ್ಲಿರುವ ತಮ್ಮ ಪರಿವಾರದವರನ್ನು ದೊಡ್ಡ ಸಂಖ್ಯೆಯಲ್ಲಿ ಆಹ್ವಾನಿಸಿದರು.

2011ರಲ್ಲಿ ಆದ ಜನಗಣತಿಯಲ್ಲಿ ತಿಳಿದಂತೆ ಇತರ ಬುಡಕಟ್ಟುಗಳಿಗಿಂತ ಕುಕಿಚಿನ್ ಗುಂಪಿನ ಜನಸಂಖ್ಯೆಯಲ್ಲಿ ಭಾರೀ ಏರಿಕೆಯಾಗಿದ್ದು, ರಾಜ್ಯದ ಜನಸಂಖ್ಯಾ ಸಮೀಕರಣ ಬದಲಾಗುತ್ತಿದೆ ಎಂದು ಮೈಥೆಯಿಗಳು, ನಾಗಾಗಳು ಆತಂಕಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 2022ರಲ್ಲಿ ಮಣಿಪುರ ವಿಧಾನಸಭೆಯು ಜನಸಂಖ್ಯಾ ಆಯೋಗ ರಚನೆ ಮತ್ತು ರಾಷ್ಟ್ರೀಯ ನಾಗರಿಕ ದಾಖಲಾತಿ (ಎನ್‌ಆರ್‌ಸಿ) ಜಾರಿಗೊಳಿಸಲು ನಿರ್ಣಯಿಸಿದೆ. ಇದು ಕುಕಿ ಪ್ರಮುಖರನ್ನು ಕೆರಳಿಸಿದೆ. ಕುಕಿಗಳಲ್ಲಿ ಮುಖಿಯಾಸ್ಥಾನ ಆರಂಭವಾದ ಬರ್ಮಾದ ಚಿಗ್‌ಹಿಟ್ಸ್‌ನಲ್ಲಿ 1948 ರಲ್ಲಿ ಈ ಸ್ಥಾನ ರದ್ದು ಮಾಡಲಾಯಿತು. 1954ರಲ್ಲಿ ಲುಶ್ವಾ ಗುಡ್ಡಗಾಡು ಜಿಲ್ಲೆಯ ಮುಖ್ಯಸ್ಥಾನ ಅಧಿಕಾರ, ಹಕ್ಕು ರದ್ದುಪಡಿಸುವ ಮಸೂದೆಯನ್ನು ಅಸ್ಸಾಂ ಸರಕಾರ ಮಂಡಿಸಿತು. ಆದರೆ 1967ರಲ್ಲಿ ಮಣಿಪುರದಲ್ಲಿ ಮುಖಿಯಾ ಹಕ್ಕು ರದ್ದುಪಡಿಸುವ ಮಸೂದೆಯನ್ನು ಪ್ರಭಾವಿ ಕುಕಿ ಮುಖ್ಯಸ್ಥರು ತಡೆಯುವಲ್ಲಿ ಯಶಸ್ವಿಯಾದರು.

ಬಡ ಅಮಾಯಕ ಕುಕಿಗಳು

ಸಾಮಾನ್ಯ ಮುಗ್ಧ ಬಡ ಭೂಹೀನ ಕುಕಿಗಳು ಮುಖಿಯಾನ ಕೃಪೆಯಲ್ಲಿ ಬದುಕುತ್ತಿದ್ದು, ಮೈಥೆಯಿಗಳು ತಮ್ಮ ಭೂಮಿಯನ್ನು ಕಬಳಿಸಲಿದ್ದಾರೆ ಎಂಬ ಸುಳ್ಳು ಪ್ರಚಾರದಿಂದ ಆತಂಕಗೊಂಡಿದ್ದಾರೆ. ಪ್ರಬಲ ಮುಖಿಯಾಗಳು, ಸಮಾಜಘಾತುಕ ಶಕ್ತಿಗಳು ಕುಕಿಗಳ ಮುಗ್ಧತೆಯನ್ನು ಬಳಸಿಕೊಂಡು ಮಣಿಪುರದಲ್ಲಿ ಹಿಂಸಾಚಾರ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. 2015ರಲ್ಲಿ ಸರಕಾರವು ಕಣಿವೆಯಲ್ಲಿರುವ ಭೂಮಿಯನ್ನು ಮಣಿಪುರಿಯೇತರರಿಗೆ ಮಾರಲು ಅವಕಾಶ ನೀಡುವ ರಾಜ್ಯ ಭೂ ಮಾರಾಟ ಕಾಯ್ದೆಗೆ 2015ರಲ್ಲಿ 7ನೇ ತಿದ್ದುಪಡಿಯನ್ನು ವಿಧಾನಸಭೆಯಲ್ಲಿ ಮಂಡಿಸಿತು. ಈ ತಿದ್ದುಪಡಿಯು ಬುಡಕಟ್ಟು ಜನರಿಂದ ಮೈಥೇಯಿಗಳು ಭೂಮಿಯನ್ನು ಕಸಿಯಲು ಮಾಡಿದ ಕಾನೂನೆಂದು ಇದರ ವಿರುದ್ಧ ಚೂರ್‌ಚಂದ್ರಪುರ ಜಿಲ್ಲೆಯಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ 8 ಮಂದಿ ಹತ್ಯೆಗೀಡಾಗಿದ್ದರು. ಮುಗ್ಧ ಕುಕಿಗಳನ್ನು ಅವರ ಸಮುದಾಯದ ಮುಖಿಯಾಗಳು, ರಚನಾತ್ಮಕ ಅಥವಾ ವಿಧ್ವಂಸಕ ಉದ್ದೇಶಕ್ಕೆ ಬಳಸುತ್ತಿರುವುದು ದುರದೃಷ್ಟಕರವಾಗಿದೆ. ಈ ಕುಕಿಗಳನ್ನು ವಿವಿಧ ಬಂಡುಕೋರ ಗುಂಪುಗಳು ತಮ್ಮ ಸಮಾಜಘಾತುಕ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿರುವುದು ಅಪಾಯಕಾರಿಯಾಗಿದೆ.

ಮಣಿಪುರ ಹೈಕೋರ್ಟ್ ನಿರ್ದೇಶನ

ಮಣಿಪುರ ಹೈಕೋರ್ಟ್‌ನ ಮೈಥೆಯಿಗಳನ್ನು ಕೂಡ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಬೇಕೆಂಬ ನಿರ್ದೇಶನವು ನಾಗಾ–ಕುಕಿ ಸಮುದಾಯಗಳನ್ನು ಒಂದಾಗಿಸಿದೆ. ಆದರೆ ನಿರ್ದೇಶನ ಜಾರಿಗೆ ಬರಲು ಸುದೀರ್ಘ ಸಂಸದೀಯ ಪ್ರಕ್ರಿಯೆ ನಡೆಯಬೇಕಾಗಿದೆ. ಆದರೆ ಕುಕಿ–ನಾಗಾಗಳು ನ್ಯಾಯಾಲಯದ ನಿರ್ದೇಶನ ವಿರೋಧಿಸಿ ಮೇ 3 ರಂದು ಆಲ್‌ಟ್ರೈಬಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಮಣಿಪುರ ಆಯೋಜಿಸಿದ್ದ ಏಕತಾ ರ‍್ಯಾಲಿಯಲ್ಲಿ ಸೇರಿದ ಸಮಾಜಘಾತುಕ ಶಕ್ತಿಗಳಿಂದ ಭಾರೀ ಹಿಂಸಾಚಾರವಾಗಿ ನೂರಾರು ಮಂದಿ ಸಾವಿಗೀಡಾದರು.

ಅಕ್ರಮಗಳ ವಿರುದ್ಧ ಸರಕಾರದ ಸಮರ

ಮಾದಕ ವಸ್ತುಗಳ ಪೂರೈಕೆದಾರರ ವಿರುದ್ಧ ಸರಕಾರ ಕೈಗೊಂಡಿರುವ ಕಠಿಣ ಕಾರ್ಯಾಚರಣೆ ಕೆಲವು ಕುಕಿ ಪ್ರಮುಖರಲ್ಲಿ ಆತಂಕ ಸೃಷ್ಟಿಸಿದೆ. ಅದೇ ರೀತಿ ಭಾರತೀಯ ಅರಣ್ಯ ಕಾಯ್ದೆ 1927 ಮತ್ತು ಮಣಿಪುರ ಅರಣ್ಯ ನಿಯಮ 2021ರಂತೆ ಚೂರ್‌ಚಂದ್ರಪುರ ಜಿಲ್ಲೆಯಿಂದ ಅತಿಕ್ರಮಣಕಾರರನ್ನು ಹೊರಹಾಕುವ ಕಾರ್ಯಾಚರಣೆಯನ್ನು ಕುಕಿಗಳ ಮೇಲಿನ ಅನಾಚಾರವೆಂದು ಸರಕಾರ ಮತ್ತು ಮೈಥೆಯಿಗಳ ವಿರುದ್ಧ ಕುಕಿಗಳನ್ನು ನಿಲ್ಲುವಂತೆ ಪ್ರೇರೇಪಿಸಲಾಯಿತು. ಸರಕಾರವು ಅರಣ್ಯಗಳ ಮೇಲಿನ ಸ್ವಾಮಿತ್ವವು ಕುಕಿ ಮುಖ್ಯಸ್ಥರಿಗೆ ನೀಡಬೇಕೆಂದು ಆಗ್ರಹಿಸಲಾಗುತ್ತಿದೆ. ಮೇಲ್ನೋಟಕ್ಕೆ ಇದು ಭೂ ಸ್ವಾಮಿತ್ವಕ್ಕೆ ಸಂಬಂಧಿಸಿದ ಸಮಸ್ಯೆಯಂತಿದ್ದರೂ ವಾಸ್ತವವಾಗಿ ಸರಕಾರ ಮತ್ತು ಕುಕಿ ಮುಖ್ಯಸ್ಥರ ನಡುವಿನ ಹಿತಾಸಕ್ತಿಯ ಸಂಘರ್ಷವಾಗಿದೆ. ಸರಕಾರವು ಕುಕಿ ಮುಖಿಯಾ ವ್ಯವಸ್ಥೆ ರದ್ದುಪಡಿಸುವ ಬಗ್ಗೆ ಯೋಚಿಸಬೇಕಾಗಿದೆ. ಇದರೊಂದಿಗೆ ಸರಕಾರವು ಬುಡಕಟ್ಟುಗಳ ಮಧ್ಯೆ ವಿಶ್ವಾಸ ನಿರ್ಮಿಸುವ ಕಾರ್ಯವನ್ನು ತುರ್ತಾಗಿ ಮಾಡಬೇಕಾಗಿದೆ.

ಮೈಸೂರು ಕ್ಯೂಸಿಎಫ್‌ಐನಿಂದ ಇಂದು ಗುಣಮಟ್ಟದ ಪರಿಕಲ್ಪನೆಗಳ ಸಮಾವೇಶ

ಮೈಸೂರು,ಜೂ.24(ಪಿಎಂ)–ಕ್ವಾಲಿಟಿ ಸರ್ಕಲ್ ಫೋರಮ್ ಆಫ್ ಇಂಡಿಯಾ (ಕ್ಯೂಸಿಎಫ್‌ಐ) ಮೈಸೂರು ಘಟಕದಿಂದ ಜೂ.25ರಂದು ಗುಣಮಟ್ಟದ ಪರಿಕಲ್ಪನೆಗಳ ಕುರಿತು 7ನೇ ವಾರ್ಷಿಕ ಸಮಾವೇಶ ಆಯೋಜಿಸಲಾಗಿದೆ ಎಂದು ಘಟಕದ ಮೆಂಟರ್ ಟಿ.ವಿ.ವೆಂಕಟರಾಮ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ 'ಉತ್ತಮ ಭವಿಷ್ಯಕ್ಕಾಗಿ ಗುಣಮಟ್ಟದ ಪರಿಕಲ್ಪನೆಗಳನ್ನು ಪಾಲಿಸಿ' ಶೀರ್ಷಿಕೆಯಡಿ ಸಮಾವೇಶ ನಡೆಯಲಿದೆ. ಅಂದು ಬೆಳಗ್ಗೆ 8.30ಕ್ಕೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ಸಮಾವೇಶ ಉದ್ಘಾಟಿಸಲಿದ್ದಾರೆ ಎಂದರು.

ಕ್ಯೂಸಿಎಫ್‌ಐ ಸಂಸ್ಥಾಪಕ ಸದಸ್ಯ ಪ್ರೊ.ನಾರಾಯಣ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಕ್ಯೂಸಿಎಫ್‌ಐ ದಕ್ಷಿಣ ನಿರ್ದೇಶಕ ಎ.ಎಲ್. ಕಿಶನ್ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕ್ಯೂಸಿಎಫ್‌ಐ ಮೈಸೂರು ಘಟಕದ ಅಧ್ಯಕ್ಷ ಸತ್ಯೇಂದ್ರ ಓ.ದೇವರಕೊಂಡೆ ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 3.45ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಯಾಗಿ ಪದ್ಮಶ್ರೀ ಪುರಸ್ಕೃತ ಸಿರಿಧಾನ್ಯ ಪ್ರಚಾರಕ ಡಾ.ಖಾದರ್ ವಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಪ್ರತಿವರ್ಷ ಮೈಸೂರು ಘಟಕದ ವತಿಯಿಂದ ಕ್ವಾಲಿಟಿ ಪರಿಕಲ್ಪನೆ ಸಮಾವೇಶ ನಡೆಸುತ್ತಾ ಬಂದಿದ್ದೇವೆ. ಅಂತೆಯೇ ಈ ಬಾರಿಯ ಸಮಾವೇಶದಲ್ಲಿ 200 ತಂಡಗಳು ಭಾಗವಹಿಸಲಿವೆ. ಈ ತಂಡಗಳು ಕ್ವಾಲಿಟಿ ಕುರಿತ ಯೋಜನೆಗಳನ್ನು ಪ್ರಸ್ತುತಪಡಿಸಲಿವೆ. 45 ಕಂಪನಿಗಳಿಂದ ಸುಮಾರು 200 ತಂಡಗಳು ಇದರಲ್ಲಿ ಪಾಲ್ಗೊಳ್ಳಲಿವೆ. ಈಗಾಗಲೇ ನಿಗದಿತ ಶುಲ್ಕ ಪಾವತಿಸಿ 130 ತಂಡಗಳು ನೋಂದಣಿ ಮಾಡಿಕೊಂಡಿವೆ. ಗುಣಮಟ್ಟ ಕಾಯ್ದುಕೊಳ್ಳುವ ಕುರಿತಂತೆ ಉತ್ತಮ ಯೋಜನೆ ಪ್ರದರ್ಶಿಸುವ ತಂಡಗಳಿಗೆ ಟ್ರೋಫಿಗಳನ್ನು ಪ್ರದಾನ ಮಾಡಲಾಗುವುದು ಎಂದು ವಿವರಿಸಿದರು.




1986ರಲ್ಲಿ ಹೈದರಾಬಾದಿನ ಬಿಹೆಚ್‌ಇಎಲ್‌ನಲ್ಲಿ ಕ್ವಾಲಿಟಿ ಸರ್ಕಲ್ ಆಫ್ ಇಂಡಿಯಾ ಪ್ರಾರಂಭವಾಯಿತು. ಇಂದು ಇಡೀ ಭಾರತದ ವಿವಿಧ ನಗರಗಳಲ್ಲಿ 36 ಘಟಕಗಳನ್ನು ಹೊಂದಿದೆ. ಅದೇ ರೀತಿ ಮೈಸೂರು ಘಟಕ 2017ರಲ್ಲಿ ಕಾರ್ಯಾರಂಭ ಮಾಡಿತು. ಎಲ್ಲಾ ರೀತಿಯ ಕೈಗಾರಿಕೆಗಳಿಗೆ ಭೇಟಿ ನೀಡಿ ಅಲ್ಲಿನ ಉದ್ಯೋಗಿಗಳಿಗೆ ಗುಣಮಟ್ಟ ಕಾಯ್ದುಕೊಳ್ಳುವ ಬಗ್ಗೆ ತರಬೇತಿ ನೀಡುವ ನಿಟ್ಟಿನಲ್ಲಿ ನಮ್ಮ ಘಟಕ ಕಾರ್ಯನಿರ್ವಹಿಸುತ್ತಿದೆ ಎಂದರು. ಕ್ಯೂಸಿಎಫ್‌ಐ ಮೈಸೂರು ಘಟಕದ ಕಾರ್ಯದರ್ಶಿ ವಾದಿರಾಜ್ ಕುಲಕರ್ಣಿ ಮಾತನಾಡಿ, ಕ್ಯೂಸಿಎಫ್‌ಐ ಸಂಸ್ಥಾಪಕ ಸದಸ್ಯ ಪ್ರೊ.ನಾರಾಯಣ ಅವರು ಮೂಲತಃ ಮೈಸೂರಿನವರೇ ಆಗಿದ್ದು, 93 ವರ್ಷ ವಯೋಮಾನದ ಹಿರಿಯರಾದ ಅವರು ಇದೀಗ ಮೈಸೂರಿನಲ್ಲೇ ನೆಲೆಸಿದ್ದಾರೆ. ಅವರೂ ಈ ಸಮಾವೇಶದಲ್ಲಿ ಪಾಲ್ಗೊಳ್ಳುತ್ತಿರುವುದು ನಮಗೆ ಹರ್ಷ ತಂದಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕ್ಯೂಸಿಎಫ್‌ಐ ಮೈಸೂರು ಘಟಕದ ಖಜಾಂಚಿ ಸಿ.ಆರ್.ಅಶ್ವಥ್ ಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸರ್ಕಾರ ಸಮಸ್ಯೆ ಎದುರಿಸಲು ಶಕ್ತವಾಗಿದೆ

●ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ●ಅನ್ನಭಾಗ್ಯಕ್ಕೆ ಕೇಂದ್ರ ಅಕ್ಕಿ ಕಲ್ಪಿಸಲು ನಿರಾಕರಿಸಿದರೂ ಭರವಸೆ ಈಡೇರಿಸಲು ಪ್ರಯತ್ನ ಮುಂದುವರೆದಿದೆ

ಬೆಂಗಳೂರು, ಜೂ.24 (ಕೆಎಂಶಿ)– ರಾಜ್ಯ ಸರ್ಕಾರ ಎಲ್ಲಾ ಸಮಸ್ಯೆಗಳನ್ನು ಎದುರಿಸಲು ಶಕ್ತವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರಸ್ತುತ ಮಳೆ ಶುರುವಾಗಿದೆ. ಇನ್ನಷ್ಟು ವ್ಯಾಪಕವಾಗಿ ಆಗಬೇಕಿದೆ. ಮಳೆ ಬರಲಿ ಎಂದು ಪ್ರಾರ್ಥಿಸುತ್ತಿದ್ದು, ಬಿತ್ತನೆ ಈಗಾಗಲೇ ಕೆಲವೆಡೆ ಪ್ರಾರಂಭವಾಗಿದೆ. ಇನ್ನು ಕೆಲವೆಡೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಈಗಾಗಲೇ ಎರಡು ಬಾರಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಸಭೆ ಕರೆದು ಸೂಚನೆಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

ಮಳೆ ಯಾವಾಗ ಬಂದರೂ ಬಿತ್ತನೆ ಮಾಡಲು ತಯಾರಾಗಿದ್ದೇವೆ. ಕೃಷಿ ಇಲಾಖೆ ಬೀಜ, ಗೊಬ್ಬರ ಹಾಗೂ ಔಷಧಿಗಳನ್ನು ಸಂಗ್ರಹಿಸಿ ಸರ್ವಸನ್ನದ್ಧವಾಗಿದೆ ಎಂದರು.

ಸಣ್ಣ ಕೈಗಾರಿಕೆಗಳು ಹಾಗೂ ಕಾಸಿಯಾ ಪ್ರತಿನಿಧಿಗಳೊಂದಿಗೆ ನಿನ್ನೆ ನಡೆದ ಚರ್ಚೆಯಲ್ಲಿ ಅವರು ತಮ್ಮ ಸಮಸ್ಯೆಗಳನ್ನು ತಿಳಿಸಿದ್ದಾರೆ. ಬಜೆಟ್ ಮಂಡನೆಯ ನಂತರ ಈ ಬಗ್ಗೆ ಪರಿಶೀಲಿಸುವ ಭರವಸೆ ನೀಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಕೈಗಾರಿಕೆಗಳಿಗೆ 9 ತಿಂಗಳ ವಿದ್ಯುತ್ ತೆರಿಗೆ ವಿಧಿಸಲಾಗಿದೆ. ಇದರಿಂದ ತಮಗೆ ಹೊರೆಯಾಗಿದೆ ಎಂದು ಕೈಗಾರಿಕೋದ್ಯಮಿಗಳು ತಿಳಿಸಿದ್ದಾರೆ. ದರ ಪರಿಷ್ಕರಣೆ ನಮ್ಮ ಸರ್ಕಾರದ ಅವಧಿಯಲ್ಲಿ ಆಗಿದ್ದಲ್ಲ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ್ದು. ದರ ಪರಿಷ್ಕರಣೆಯನ್ನು ಪ್ರತಿ ವರ್ಷ ಕೆ.ಇ.ಆರ್.ಸಿ ಮಾಡುತ್ತದೆ. ದರ ಏರಿಕೆಗೂ ನಮ್ಮ ಸರ್ಕಾರಕ್ಕೂ ಸಂಬಂಧವಿಲ್ಲ. ನಾವೂ ಕೂಡ ಅವರಿಗೆ ಎಷ್ಟು ಮಾಡಬೇಕೆಂದು ಮನವಿ ಸಲ್ಲಿಸಿರುತ್ತೇವೆ. ಅದೊಂದು ಸ್ವಾಯತ್ತ ಸಂಸ್ಥೆಯಾಗಿದೆ ಎಂದರು.

ಹಾಲಿನ ದರ ಹೆಚ್ಚಳದ ಕುರಿತಂತೆ ಇರುವ ಪ್ರಸ್ತಾವನೆ ಬಗ್ಗೆ ಸಂಬಂಧಪಟ್ಟವರೊಂದಿಗೆ ಮಾತನಾಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ಈಗಾಗಲೇ ತಿಳಿಸಿರುವಂತೆ ಬಡವರ ಕಾರ್ಯಕ್ರಮಕ್ಕೆ ತೊಂದರೆ ನೀಡಬೇಕೆಂದು, ಅಕ್ಕಿ ಕೊಡಲು ಕೇಂದ್ರ ಸರ್ಕಾರ ನಿರಾಕರಿಸಿದೆ. ಅವರ ಬಳಿ ಲಕ್ಷಗಟ್ಟಲೆ ಟನ್ ಅಕ್ಕಿಯಿದೆ. ಖಾಸಗಿಯವರಿಗೆ ಹರಾಜು ಮಾಡುತ್ತಾರೆ, ಆದರೆ ರಾಜ್ಯಗಳಿಗೆ ನೀಡುವುದಿಲ್ಲ ಎನ್ನುತ್ತಾರೆ. ಹಣ ನೀಡಿದರೂ ಕೊಡುವುದಿಲ್ಲ. ದ್ವೇಷದ ರಾಜಕಾರಣ ಮಾಡುವವರನ್ನು ಬಡವರ ವಿರೋಧಿ ಅನ್ನದೆ ಬೇರೇನು ಕರೆಯಬೇಕು ಎಂದರು.

ಬಿ.ಎಸ್.ಯಡಿಯೂರಪ್ಪ ಅವರು ಅಕ್ಕಿ ನೀಡದಿದ್ದರೆ ಧರಣಿ ಮಾಡುವುದಾಗಿ ಹೇಳಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಅವರಿಗೆ ಧರಣಿ ಮಾಡುವ ಸ್ವಾತಂತ್ರ್ಯವಿದೆ. ಆದರೆ ಅವರಿಗೆ ಯಾವ ನೈತಿಕತೆ ಇದೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಸರ್ಕಾರಿ ಏಜೆನ್ಸಿಗಳೊಂದಿಗೆ ಇಂದು ಮಾತುಕತೆ ನಡೆಸಲಾಗಿದೆ. ಐದು ಗ್ಯಾರಂಟಿ ಯೋಜನೆಗಳ ಪೈಕಿ ಈಗಾಗಲೇ ಒಂದು ಯೋಜನೆಗೆ ಚಾಲನೆ ನೀಡಲಾಗಿದೆ. ಜುಲೈ ಒಂದರಿಂದ ಉಚಿತ ವಿದ್ಯುತ್ ಯೋಜನೆ ಜಾರಿಗೆ ಬರಲಿದೆ. ಅಕ್ಕಿಯನ್ನು ನೀಡಬೇಕೆಂಬ ಉದ್ದೇಶವಿದ್ದರೂ ಅಕ್ಕಿ ದೊರೆಯುತ್ತಿಲ್ಲ. ದೊರೆತರೂ ಹೆಚ್ಚಿನ ದರ ಕೇಳುತ್ತಾರೆ. 2.29 ಲಕ್ಷ ಮೆಟ್ರಿಕ್ ಟನ್ ಎಲ್ಲಿಯೂ ದೊರೆಯುತ್ತಿಲ್ಲ. ಎಲ್ಲಾ ರಾಜ್ಯದವರೂ ಪೂರ್ಣಪ್ರಮಾಣದ ಅಕ್ಕಿ ದೊರೆಯುತ್ತಿಲ್ಲವಾದ್ದರಿಂದ ಬೇರೆ ಸರ್ಕಾರಿ ಏಜೆನ್ಸಿಗಳಿಂದ, ಎನ್.ಸಿ.ಸಿ.ಎಫ್ ನಿಂದ ಕೇಂದ್ರೀಯ ಭಂಡಾರ್, ನ್ಯಾಫೆಡ್ ಸಂಸ್ಥೆಗಳಿಂದ ದರಪಟ್ಟಿ ಕರೆಯಲಾಗಿದ್ದು, ಮಾತುಕತೆ ನಡೆದಿದೆ. ಎಷ್ಟು ಅಕ್ಕಿ, ದರ ಎನ್ನುವ ಬಗ್ಗೆ ತೀರ್ಮಾನ ಮಾಡಲಾಗುವುದು. ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಪಡೆಯಲು ಟೆಂಡರ್ ಕರೆಯಬೇಕು. ಜೋಳ, ರಾಗಿ ವಿತರಣೆ 6 ತಿಂಗಳಿಗಾಗುವಷ್ಟಿದೆ. 2 ಕೆಜಿಯಂತೆ ನೀಡಬಹುದು. ಇನ್ನೂ 3 ಕೆಜಿ ಅಕ್ಕಿ ನೀಡಬೇಕಿದೆ. ಇಡೀ ವರ್ಷ ನೀಡುವಷ್ಟು ರಾಗಿ, ಜೋಳವಿಲ್ಲ ಎಂದರು.



ಕಾರ್ಯ ನಿಮಿತ್ತ ಮೈಸೂರಿಗೆ ಆಗಮಿಸಿದ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಸರ್ಕಾರಿ ಅತಿಥಿಗೃಹದಲ್ಲಿ ಯುವ ಕಾಂಗ್ರೆಸ್ ಪದಾಧಿಕಾರಿಗಳು ಅಭಿನಂದಿಸಿದರು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡರಾದ ಎಸ್.ಆರ್.ರವಿ, ಸಯ್ಯದ್ ಆಭ್ರಾರ್, ರಾಜೇಂದ್ರ, ಚಂದ್ರು ಇನ್ನಿತರರು ಉಪಸ್ಥಿತರಿದ್ದರು.

ಶರತ್ ಮಡಿವಾಳ ಕುಟುಂಬಕ್ಕೆ ಪರಿಹಾರ ನೀಡಿ; ಆಗ್ರಹ

ಎಸ್‌ಸಿ ಪಟ್ಟಿಗೆ ಮಡಿವಾಳ ಸಮುದಾಯ ಸೇರ್ಪಡೆಗೆ ಕ್ರಮ ವಹಿಸಲೂ ಒತ್ತಾಯ

ಮೈಸೂರು,ಜೂ.24(ಪಿಎಂ)– ಕೋಮು ಸಂಘರ್ಷದ ಹಿನ್ನೆಲೆಯಲ್ಲಿ ಹತ್ಯೆಯಾದ ಮಡಿವಾಳ ಸಮುದಾಯದ ಆರ್‌ಎಸ್‌ಎಸ್ ಕಾರ್ಯಕರ್ತ ಶರತ್ ಮಡಿವಾಳ ಕುಟುಂಬಕ್ಕೆ ರಾಜ್ಯ ಸರ್ಕಾರ 50 ಲಕ್ಷ ರೂ. ಪರಿಹಾರ ನೀಡಬೇಕೆಂದು ಮೈಸೂರು ಜಿಲ್ಲಾ ವೀರ ಮಡಿವಾಳರ ಜಾಗೃತಿ ಯುವ ಬಳಗ ಒತ್ತಾಯಿಸಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಳಗದ ಅಧ್ಯಕ್ಷ ಎಸ್.ಮಾದುರಾಜು, 2017ರ ಜು.4ರಂದು ಶರತ್ ಮಡಿವಾಳ ಅವರ ಹತ್ಯೆಯಾಯಿತು. ಅಂದೂ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯನವರು ಮೃತ ಶರತ್ ಕುಟುಂಬಕ್ಕೆ ಯಾವುದೇ ಪರಿಹಾರವನ್ನು ನೀಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಆದರೆ ಇದೀಗ ಕೋಮು ಸಂಘರ್ಷದ ಹಿನ್ನೆಲೆಯಲ್ಲಿ ಹತ್ಯೆಯಾದ ಮೊಹಮ್ಮದ ಫಾಜಿಲ್, ಮಸೂದ್,



ಜಲೀಲ್ ಮತ್ತು ದೀಪಕ್ ರಾವ್ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ ತಲಾ 25 ಲಕ್ಷ ರೂ. ಪರಿಹಾರ ಮಂಜೂರು ಮಾಡಿದೆ. ಆದರೆ ಅಂದು ಇಡೀ ಕರ್ನಾಟಕವೇ ಶರತ್ ಮಡಿವಾಳನ ಹತ್ಯೆಗೆ ಕಂಬನಿ ಮಿಡಿದಿದ್ದರೂ ಸಿದ್ದರಾಮಯ್ಯನವರು ಯಾವುದೇ ಪರಿಹಾರ ಘೋಷಿಸಲಿಲ್ಲ. ಈಗಲಾದರೂ ಸಂಕಷ್ಟದಲ್ಲಿರುವ ಶರತ್ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ವರ್ಷದ ಮಧ್ಯಂತರ ಬಜೆಟ್‌ನಲ್ಲಿ ಮಡಿವಾಳ ಮಾಚಿದೇವರ ಅಭಿವೃದ್ಧಿ ನಿಗಮಕ್ಕೆ ಕನಿಷ್ಠ 250 ಕೋಟಿ ಅನುದಾನ ನೀಡಬೇಕು. ಜೊತೆಗೆ ಚುನಾವಣೆ ಪೂರ್ವದಲ್ಲಿ ನೀಡಿರುವ ಭರವಸೆಯಂತೆ ಪ್ರೊ.ಅನ್ನಪೂರ್ಣಮ್ಮ ವರದಿಯಂತೆ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಒತ್ತಾಯಿಸಿದರು. ಬಳಗದ ಪ್ರಧಾನ ಕಾರ್ಯದರ್ಶಿ ಕೆಂಪಶೆಟ್ಟಿ, ಉಪಾಧ್ಯಕ್ಷ ಸಿದ್ದಪ್ಪಾಜಿ, ಸಂಚಾಲಕ ಮಣಿಕಂಠ, ಮುಖಂಡ ಮಹದೇವ ಸುದ್ದಿಗೋಷ್ಠಿಯಲ್ಲಿದ್ದರು.

ಹಲಸು ತಿನ್ನುವುದಲ್ಲ ಅದನ್ನು ಎತ್ತುವುದರಲ್ಲೂ 'ಸಾಹಸ'



ಮೈಸೂರು, ಜೂ.24(ಎಂಕೆ)– ಹಲಸಿನ ಹಣ್ಣು ತಿನ್ನುವುದಷ್ಟೇ ಅಲ್ಲ ಹಣ್ಣಿನ ಭಾರವನ್ನು ಎತ್ತಿ ತೋರಿಸುವಲ್ಲಿ ಹಲಸಿನ ಹಣ್ಣಿನ ಪ್ರಿಯರು ಸೈ ಎನಿಸಿಕೊಂಡರು.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಕೃಷಿಕರ ಬಳಗದ ವತಿಯಿಂದ ಆಯೋಜಿಸಿರುವ 'ಹಲಸಿನ ಹಬ್ಬ'ದಲ್ಲಿ ನಡೆದ ಹಲಸಿನ ಹಣ್ಣನ್ನು ಎತ್ತುವ ಸ್ಪರ್ಧೆ ನೋಡುಗರಿಗೆ ರೋಮಾಂಚನ ನೀಡಿತು. 21 ಕೆಜಿ ತೂಕದ ಹಲಸಿನ ಹಣ್ಣನ್ನು ಎತ್ತುವ ಸ್ಪರ್ಧೆಯಲ್ಲಿ 22 ಮಂದಿ ಭಾಗವಹಿಸಿ ಹಲಸಿನ ಹಬ್ಬಕ್ಕೆ ಮೆರಗು ತಂದರು.

25 ಬಾರಿ ಹಲಸಿನ ಹಣ್ಣನ್ನು ಎತ್ತಿದ ಬೆಂಗಳೂರಿನ ಸತೀಶ್ ಪ್ರಥಮ ಬಹುಮಾನ ಗೆದ್ದರೆ, 24 ಬಾರಿ ಎತ್ತಿದ ಬೆಳವಾಡಿಯ ಮಹೇಶ್ ದ್ವಿತೀಯ ಹಾಗೂ 22 ಬಾರಿ ಮೇಲೆತ್ತಿದ ಮೇಲುಕೋಟೆ ಪ್ರೀತಂ ತೃತೀಯ ಬಹುಮಾನ ಪಡೆದರು. ಇದೇ ವೇಳೆ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ಅಧ್ಯಕ್ಷ ಬಿ.ಸಂದೀಪ್ ಅವರನ್ನು ಉದ್ಯಮಿ ಪ್ರದೀಪ್ ಸಿಂಗ್ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಅಂತರ ಕಾಲೇಜು ಗೋಲ್ಡ್ ಕಪ್ ಫುಟ್ಬಾಲ್ ಪಂದ್ಯಾವಳಿಗೆ ಚಾಲನೆ

ಮೈಸೂರು, ಜೂ.24(ಜಿಎ)– ಚೀಫ್ ಜಸ್ಟೀಸ್ ಹೊಂಬೇಗೌಡ ಸ್ಮಾರಕ ಮೈಸೂರು ವಿವಿ ಅಂತರ ಕಾಲೇಜುಗಳ ಗೋಲ್ಡ್ ಕಪ್ ಫುಟ್ಬಾಲ್ ಪಂದ್ಯಾವಳಿಗೆ ಚಾಲನೆ ನೀಡಲಾಯಿತು.



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಮತ್ತು ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ ವತಿಯಿಂದ ವಿವಿಯ ಫುಟ್‌ಬಾಲ್ ಮೈದಾನದಲ್ಲಿ ಆಯೋಜಿಸಿರುವ ಗೋಲ್ಡ್ ಕಪ್ ಫುಟ್ಬಾಲ್ ಪಂದ್ಯಾವಳಿಗೆ ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಡಾ.ಸಿ.ಕೃಷ್ಣ, ನಿರ್ದೇಶಕ ಡಾ.ಸಿ.ವೆಂಕಟೇಶ್ ಮತ್ತು ವಿವಿ ದೈಹಿಕ ಶಿಕ್ಷಣ ವಿಭಾಗದ ಉಪನಿರ್ದೇಶಕ ಡಾ.ಪಿ.ಕೃಷ್ಣಯ್ಯ ಚಾಲನೆ ನೀಡಿದರು.ಜೂ.28ರಂದು ಪಂದ್ಯಾವಳಿಯ ಸಮಾರೋಪ ಸಮಾರಂಭ ನಡೆಯಲಿದೆ. ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಎ.ಜಿರಾಮಸ್ವಾಮಿ ಮತ್ತು ಜಿಲ್ಲಾ ಫುಟ್ಬಾಲ್ ಅಸೋಸಿಯೇಶನ್‌ನ ಡಾ.ಬಿ.ಸದಾಶಿವಭಟ್ ಭಾಗವಹಿಸಲಿದ್ದಾರೆ.

ಮುಂಗಾರಿಗೆ ಮೈಸೂರು ಮಹಾನಗರ ಪಾಲಿಕೆ ಮುನ್ನೆಚ್ಚರಿಕಾ ಕ್ರಮ...

ವಿಪತ್ತು ನಿರ್ವಹಣೆಗೆ ಪಾಲಿಕೆ ವ್ಯಾಪ್ತಿಯಲ್ಲಿ 9 ತಂಡ ರಚನೆ





ಮೈಸೂರು, ಜೂ.24 (ಎಸ್‌ಬಿಡಿ)– ಮುಂಗಾರು ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಮುಂಜಾಗ್ರತಾ ಕ್ರಮವಾಗಿ ವಿಪತ್ತು ನಿರ್ವಹಣಾ ತಂಡಗಳನ್ನು ರಚಿಸಿಕೊಂಡಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಹಾಗೂ ಇತರೆ ಕಾರಣಗಳಿಂದ ಸಂಭವಿಸಬಹುದಾದ ಅನಾಹುತಗಳ ತುರ್ತು ನಿರ್ವಹಣೆ ಹಾಗೂ ಮುಂಜಾಗ್ರತಾ ಕ್ರಮ ವಹಿಸಲು 9 ವಲಯ ಕಚೇರಿ ಆಯುಕ್ತರ ಮೇಲ್ವಿಚಾರಣೆಯಲ್ಲಿ ತಂಡಗಳನ್ನು ರಚಿಸಿ, ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಸಮನ್ವಯ ಕಾರ್ಯಾಚರಣೆಗೆ ಅನುಕೂಲವಾಗುವಂತೆ ನೋಡಲ್ ಅಧಿಕಾರಿಗಳನ್ನೂ ನೇಮಿಸಿ ನಗರಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಆದೇಶಿಸಿದ್ದಾರೆ.

ಅತೀ ಸೂಕ್ಷ್ಮ ಪ್ರದೇಶಗಳ ಬಗ್ಗೆ ವಿಶೇಷ ನಿಗಾ ವಹಿಸಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ರಾಜಕಾಲುವೆಗಳ ಹಾಗೂ ರಸ್ತೆ ಬದಿ ಚರಂಡಿಗಳ ಹೂಳೆತ್ತುವ ಕಾರ್ಯವನ್ನು ಸಮರೋಪಾದಿಯಲ್ಲಿ ನಡೆಸಬೇಕು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಮುನ್ನೆಚ್ಚರಿಕೆ ನೀಡಿ, ಅಗತ್ಯವಿದ್ದರೆ ಸ್ಥಳಾಂತರ ಮಾಡಬೇಕು. ಚರಂಡಿಗಳಲ್ಲಿ ನೀರು ನಿಲ್ಲದಂತೆ ಸ್ವಚ್ಛಗೊಳಿಸಬೇಕು. ರಸ್ತೆ ಗುಂಡಿ ಮುಚ್ಚುವುದರ ಜೊತೆಗೆ ರಸ್ತೆ ಬದಿಯ ತ್ಯಾಜ್ಯವನ್ನು ತೆರವುಗೊಳಿಸಬೇಕು. ಮ್ಯಾನ್‌ಹೋಲ್ ಸರಿಪಡಿಸಬೇಕು. ಅರಣ್ಯ ಇಲಾಖೆ ಅಧಿಕಾರಿಗಳ ಸಮನ್ವಯದೊಂದಿಗೆ ಒಣಗಿರುವ ಮತ್ತು ಬೀಳುವಂತಿರುವ ಮರಗಳನ್ನು ತೆರವು ಮಾಡಿಸಬೇಕು. ಬೀದಿದೀಪ ಸರಿಪಡಿಸುವುದರ ಜೊತೆಗೆ ಕಂಬಗಳ ದುರಸ್ತಿ ಮಾಡಿಸಬೇಕು. ಕಂಬಗಳಲ್ಲಿ ಅಪಾಯಕಾರಿ ಪ್ಯಾನಲ್‌ಗಳಿದ್ದರೆ ಕೂಡಲೇ ಸರಿಪಡಿಸಬೇಕು. ಪ್ರಗತಿಯಲ್ಲಿರುವ ಮಳೆ ನೀರು ಚರಂಡಿ ಹಾಗೂ ಯುಜಿಡಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ನಿರ್ವಹಣೆಗೆ ಅಗತ್ಯವಾದ ಯಂತ್ರೋಪಕರಣ, ಸಲಕರಣೆ ಹಾಗೂ ವಾಹನಗಳ ಸಿದ್ಧಪಡಿಸಿಕೊಳ್ಳಬೇಕು. ಚರಂಡಿ ನೀರು ನುಗ್ಗುವ ಹಾಗೂ ಪ್ರವಾಹ ಉಂಟಾಗಬಹುದಾದ ಸ್ಥಳಗಳನ್ನು ಮುಂಚಿತವಾಗಿ ಗುರುತಿಸಿ ಸೂಕ್ತ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಅಪಾಯಕಾರಿ ತೆರೆದ ಗುಂಡಿ ತಡೆಗೋಡೆಗಳಿಲ್ಲದ ಚರಂಡಿ, ಮಳೆ ನೀರು ಚರಂಡಿ ಗುರುತಿಸಿ ಸುರಕ್ಷತಾ ಕ್ರಮ ವಹಿಸಬೇಕು. ದೂರುಗಳನ್ನು ಸ್ವೀಕರಿಸಿದ ತಕ್ಷಣವೇ ಕಾರ್ಯಾಚರಣೆ ಆರಂಭಿಸಬೇಕೆಂದು ಸೂಚನೆ ನೀಡಿದ್ದಾರೆ.

ತಂಡ 1– ವಲಯ ಕಚೇರಿ 1ರ ಆಯುಕ್ತ ಮಂಜುನಾಥ್ ರೆಡ್ಡಿ(9886114076)ಮೇಲ್ವಿಚಾರಣೆಯಲ್ಲಿ ಎಸ್.ಸುಶ್ರುತ್ (9448666380), ಜೆ.ಮಂಜುನಾಥ ಗೌಡ(9110801235), ಅರಸೇಗೌಡ(984489040), ವೈ.ಎನ್.ವಿನಯ್ (9449404947), ಜ್ಯೋತಿ(9916694234), ಶಿವಪ್ರಸಾದ್ (9964254808), ಮಧು(9742406268) ಒಳಗೊಂಡ ತಂಡಕ್ಕೆ 49, 50, 51, 52, 54, 55, 61 ವಾರ್ಡ್‌ಗಳ ನಿರ್ವಹಣೆ.

ತಂಡ 2– ನಾಗರಾಜು(9945266196) ಮೇಲ್ವಿಚಾರಣೆಯಲ್ಲಿ ಸೋಮಶೇಖರ್(9686237138), ಶಿವಮೂರ್ತಿ (8970543104), ಪ್ರಶಾಂತ್ ಕುಮಾರ್(8618549029), ಶೋಭಾ(9620576788), ಮಹಾದೇವಿ(7795380993), ಶೀಲಾ(7022369401), ಆರ್ಮುಗಂ(9036839075) ತಂಡ 48, 56, 59, 60, 62, 63, 64, 65ನೇ ವಾರ್ಡ್ ನಿರ್ವಹಣೆ.

ತಂಡ 3–ಟಿ.ಎಸ್.ಸತ್ಯಮೂರ್ತಿ(9731398207) ಮೇಲ್ವಿಚಾರಣೆಯಲ್ಲಿ ಎಂ.ಎಲ್.ಧನುಷ್(8123383036), ಪ್ರಸನ್ನ ಕುಮಾರ್(9164075405), ಸಿ.ಸೌಮ್ಯಾ(8971637599), ಅರ್ಪಿತಾ(9591787335), ರವಿಶಂಕರ್(8073313541), ಜಿ.ವಿ.ನವೀನ್‌ಕುಮಾರ್(8660840016) ತಂಡ 42ರಿಂದ 47, 57 ಹಾಗೂ 58ನೇ ವಾರ್ಡ್ ನೋಡಿಕೊಳ್ಳಲಿದೆ.

ತಂಡ 4–ಚಂದ್ರಮ್ಮ (9449338536) ಮೇಲ್ವಿಚಾರಣೆಯಲ್ಲಿ ಹೇಗಾನಂದ (9980809996), ಸಿದ್ದರಾಮೇಶ (9742223911), ಬಿ.ಎಲ್.ಗಿರೀಶ್(7406890709), ಎ.ಹೆಚ್.ನಿವೇದಿತಾ (8095196961), ಶ್ರೀದೇವಿ (8147240348), ಹರೀಶ್(7676010098), ರಜಾಕ್ (9620948778) ತಂಡ 6, 18, 19, 21, 22ನೇ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲಿದೆ.

ತಂಡ 5–ಸಿ.ಯೋಗಾನಂದ(9901332244) ಮೇಲ್ವಿಚಾರಣೆಯಲ್ಲಿ ಮನುಗೌಡ(9611879547), ಜಿ.ಎನ್. ಅಭಿಲಾಷ್(8095179720), ಮುದ್ದುಮಲ್ಲೇಗೌಡ (9900598089), ಡಿ.ಗೋವಿಂದನಾಯಕ(9845027363), ಚಿನ್ಮಯಿ (9902975701), ಯೋಗೇಶ್(8951780625), ಹನುಮಂತಪ್ಪ(6362285008) ತಂಡ 1ರಿಂದ 5, 7 ಹಾಗೂ 20ನೇ ವಾರ್ಡ್ ನಿರ್ವಹಣೆ ಮಾಡಲಿದೆ.

ತಂಡ 6–ಮಂಜುನಾಥ್(8660150889) ಮೇಲ್ವಿಚಾರಣೆಯಲ್ಲಿ ಕೃಷ್ಣಮೂರ್ತಿ(9019770948), ಜಗದೀಶ್ (9449509899), ಆರ್.ಹೆಚ್.ಪವಿತ್ರ(9738685652), ಮೈತ್ರಿ (8105739384), ಮಂಜುಕುಮಾರ್(9164143489), ನರಸಿಂಹಮೂರ್ತಿ(8050192021) ತಂಡ 23, 24, 25, 40, 41ನೇ ವಾರ್ಡ್‌ಗಳ ನಿರ್ವಹಣೆ ಮಾಡಲಿದೆ.

ತಂಡ 7–ನಂಜುಂಡಯ್ಯ (9448008342) ನೇತೃತ್ವದಲ್ಲಿ ರಾಜೀವ್‌ನಾಥ್ (9731926176), ರಾಕೇಶ್(7349670084), ಸಾಗರ್ (9548888947), ಜಿ.ಸಿ.ವಿಶ್ವಾಸ್(8317472886), ನವೀನ್ (9480413750), ತೇಜಸ್ವಿನಿ (8892911182), ಸುರೇಶ್ (7760400102) ತಂಡ 8, 9, 17, 26, 27, 28ನೇ ವಾರ್ಡ್ ನಿರ್ವಹಿಸಲಿದೆ.

ತಂಡ 8–ನಾಗೇಶ್(9448394923) ಮೇಲ್ವಿಚಾರಣೆಯಲ್ಲಿ ಅನಂತ(9480768828), ಆರ್.ಕೆ.ನಾಗರಾಜು (9738882947), ಹುಚ್ಚೇಗೌಡ(9740692468), ಜಿ.ಎಸ್. ಶ್ರೀಕಾಂತ್ (9980066635), ಶ್ರೀಕಾಂತ್(9739959945), ರಾಜೇಶ್ವರಿ ಬಾಯಿ(7760954056), ಕುಪ್ಪರಾಜು(9945181159) ತಂಡ 10ರಿಂದ 16, 29, 33ನೇ ವಾರ್ಡ್‌ನಲ್ಲಿ ನಿಗಾ ವಹಿಸಲಿದೆ.

ತಂಡ 9– ಶಿವಕುಮಾರ್(9900684767) ಮೇಲ್ವಿಚಾರಣೆಯಲ್ಲಿ ಹರ್ಷಿಯಾ ತರನಂ(7204796331), ಆರ್.ಸಂಜಯ್ (7795514340), ಮಂಜುನಾಥ್(9480382135), ಆರ್.ವಿನುತಾ(7019192841), ನವೀನ್(9480413750), ಧನಂಜಯಗೌಡ(9071150087), ಕೆಂಪೇಗೌಡ (9663109975) ಅವರನ್ನೊಳಗೊಂಡ ತಂಡ 30ರಿಂದ 39 ಹಾಗೂ 53ನೇ ವಾರ್ಡ್ ನಿರ್ವಹಿಸಲಿದೆ.

ನೋಡಲ್ ಅಧಿಕಾರಿಗಳು: ಮಧುಸೂಧನ್ (8970176007), ರಂಜಿತ್‌ಕುಮಾರ್(9686151347), ನಾಗರಾಜು (9448087742), ಜಿ.ಸುವರ್ಣ(8904883645), ಟಿ.ಎಸ್.ಸತ್ಯಮೂರ್ತಿ (9731398207), ಡಾ.ಹರ್ಷ(9448034037) ಹಾಗೂ ಡಾ.ಹೇಮಂತ್(9902928889) ಅವರನ್ನು ನೋಡಲ್ ಅಧಿಕಾರಿಗಳಾಗಿ ನಿಯೋಜಿಸಲಾಗಿದೆ. ಮಳೆಯಿಂದ ಸಮಸ್ಯೆ ಅಥವಾ ಏನೇ ಅವಘಡ ಸಂಭವಿಸಿದರೆ ಸಾರ್ವಜನಿಕರು ಸಂಬಂಧಪಟ್ಟ ತಂಡದವರನ್ನು ಸಂಪರ್ಕಿಸಬಹುದು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪರಿಗೆ ಸಾರ್ವಜನಿಕರಿಂದ ನಾನಾ ಅಹವಾಲು ಸಲ್ಲಿಕೆ

ಮೈಸೂರು, ಜೂ.24(ಎಂಕೆ)– ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.



ವರ್ಗಾವಣೆ, ಅನುದಾನ ಬಿಡುಗಡೆ, ಹಾಸ್ಟೆಲ್ ಮತ್ತು ಕಾಲೇಜು ಸೀಟ್ ಸೇರಿದಂತೆ ಹಲವು ಸಮಸ್ಯೆಗಳ ಕುರಿತು ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿದ ಸಚಿವರು, ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದರು. ತಿ.ನರಸೀಪುರ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ತಮ್ಮ ತಾಲೂಕಿನ ಅಭಿವೃದ್ಧಿ ಹಾಗೂ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು. ಇದೇ ವೇಳೆ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜಿ.ಗೋವಿಂದರಾಜು ನೇತೃತ್ವದ ನಿಯೋಗ ಹಾಗೂ ಹಲವರು ಸಚಿವರನ್ನು ಅಭಿನಂದಿಸಿದರು. ಬಳಿಕ ಮೈಸೂರು ಜಿಲ್ಲೆಯ ಅಭಿವೃದ್ಧಿ ವಿಚಾರಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್‌ರೆಡ್ಡಿ, ಮುಡಾ ಆಯುಕ್ತ ದಿನೇಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಮನೆ ಬಾಗಿಲು ಮೀಟಿ ನಗದು, ಚಿನ್ನಾಭರಣ ಕಳವು

ಮೈಸೂರು, ಜೂ. 24(ಆರ್‌ಕೆ)– ಮನೆ ಬಾಗಿಲು ಮೀಟಿ ಚಿನ್ನ–ಬೆಳ್ಳಿ ಆಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ವಸಂತನಗರದಲ್ಲಿ ಶುಕ್ರವಾರ ಮಧ್ಯಾಹ್ನ ಹಾಡಹಗಲೇ ಸಂಭವಿಸಿದೆ.

ಮೈಸೂರಿನ ಉದಯಗಿರಿಯ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿರುವ ದಕ್ಷಿಣಾಮೂರ್ತಿ ಎಂಬುವರ ವಸಂತ ನಗರ (ವಿದ್ಯಾವಿಕಾಸ ಕಾಲೇಜು ಹಿಂಭಾಗ)ದ ಮನೆಯಲ್ಲಿ ಕಳವಾಗಿದ್ದು, 20,000 ರೂ. ನಗದು, 65 ಗ್ರಾಂ ಚಿನ್ನಾಭರಣ ಹಾಗೂ 200 ಗ್ರಾಂ ಬೆಳ್ಳಿ ಆಭರಣ ಸೇರಿ 2.5 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಖದೀಮರು ದೋಚಿದ್ದಾರೆ. ಶುಕ್ರವಾರ ಬೆಳಗ್ಗೆ 11 ಗಂಟೆ ವೇಳೆಗೆ ಮನೆಗೆ ಬೀಗ ಹಾಕಿ ಮನೆಯವರೆಲ್ಲರೂ ದೇವಸ್ಥಾನಕ್ಕೆ ಹೋಗಿ ಸಂಜೆ 4 ಗಂಟೆಗೆ ವಾಪಸ್ಸಾದಾಗ ಮನೆಯ ಮುಂದಿನ ಬಾಗಿಲು ತೆರೆದಿದ್ದು ಕಂಡಿತು. ಬೀಗ ಮೀಟಿ ಒಳ ನುಗ್ಗಿರುವ ಕಳ್ಳರು, ಅಲ್ಮೇರಾದಲ್ಲಿದ್ದ ನಗದು, ಚಿನ್ನ, ಬೆಳ್ಳಿ ಆಭರಣ ಕದ್ದಿರುವುದು ತಿಳಿಯಿತು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು. ಶ್ವಾನದಳ ಹಾಗೂ ಬೆರಳಚ್ಚು ಮುದ್ರೆ ಘಟಕದ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು.

ಜೂ.29, ಶ್ರೀಕೃಷ್ಣಧಾಮದಲ್ಲಿ ತಪ್ತ ಮುದ್ರಾಧಾರಣೆ

ಮೈಸೂರು,ಜೂ.24(ಪಿಎಂ)– ಶ್ರೀಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀಕೃಷ್ಣ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಶೋಭಕೃತ್ ಸಂವತ್ಸರ ಆಷಾಢ ಮಾಸ ಶುದ್ಧ ಏಕಾದಶಿ ದಿನವಾದ ಜೂ.29ರಂದು ತಪ್ತ ಮುದ್ರಾಧಾರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರಿನ ಸರಸ್ವತಿಪುರಂನ ಸಾಹುಕಾರ್ ಚೆನ್ನಯ್ಯ ರಸ್ತೆಯ ಶ್ರೀಕೃಷ್ಣಧಾಮದಲ್ಲಿ ಅಂದು ಮಧ್ಯಾಹ್ನ 12ರಿಂದ ಸಂಜೆ 4ರವರೆಗೆ ಹಾಗೂ ರಾತ್ರಿ 8ರಿಂದ 9ರವರೆಗೆ ತಪ್ತ ಮುದ್ರಾಧಾರಣೆ ನಡೆಯಲಿದೆ. ಉಡುಪಿಯ ಶ್ರೀ ಪಲಿಮಾರು ಪೀಠಾಧಿಪತಿಗಳಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದ ಸ್ವಾಮೀಜಿಯವರು ತಪ್ತ ಮುದ್ರಾಧಾರಣೆ ನಡೆಸಿಕೊಡಲಿದ್ದಾರೆ. ಜೂ.30ರ ದ್ವಾದಶಿ ದಿನದಂದು ಬೆಳಗ್ಗೆ ಪೂಜಾ ಕೈಂಕರ್ಯ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಅಂತೆಯೇ ಜೂ.29ರಂದು ಶ್ರೀಕೃಷ್ಣಧಾಮದಲ್ಲಿ ತಪ್ತ ಮುದ್ರಾಧಾರಣೆಯು ಶ್ರೀ ಪಲಿಮಾರು ಶ್ರೀಗಳ ನೇತೃತ್ವದಲ್ಲಿ ನಡೆಯಲಿದೆ. ಬೆಳಗ್ಗೆ 9ರಿಂದ 11ರವರೆಗೆ ಕೃಷ್ಣಮಂದಿರ, 11ರಿಂದ ಸಂಜೆ 4ರವರೆಗೆ ಶ್ರೀಕೃಷ್ಣಧಾಮ, ಸಂಜೆ 6ರಿಂದ ರಾತ್ರಿ 8ರವರೆಗೆ ವಿಠ್ಠಲಧಾಮ, ರಾತ್ರಿ 8ರ ಬಳಿಕ ಶ್ರೀಕೃಷ್ಣಧಾಮದಲ್ಲಿ ತಪ್ತ ಮುದ್ರಾ ಧಾರಣೆ ನಡೆಯಲಿದೆ ಎಂದು ಮತ್ತೊಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮೈಸೂರು,ಜೂ.24–ಡಿ.ಎಂ.ಜಿ.ಹಳ್ಳಿಯಲ್ಲಿರುವ ಜವಾಹರ್ ನವೋದಯ ವಿದ್ಯಾಲಯಕ್ಕೆ 6ನೇ ತರಗತಿಗಾಗಿ 2024–25ನೇ ಸಾಲಿನ ಪ್ರವೇಶ ಪರೀಕ್ಷೆ ಆಹ್ವಾನಿಸಲಾಗಿದೆ. ವಿದ್ಯಾರ್ಥಿಯು 2023–24ನೇ ಸಾಲಿನ 5ನೇ ತರಗತಿಯಲ್ಲಿ ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಮತ್ತು ಮೈಸೂರು ಜಿಲ್ಲೆಯಲ್ಲಿ ಓದುತ್ತಿರಬೇಕು. 3 ಮತ್ತು 4ನೇ ತರಗತಿಗಳನ್ನು ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಓದಿರಬೇಕು. ಅರ್ಜಿ ಸಲ್ಲಿಸಲು ಆ.10 ಕಡೇ ದಿನ. ಮಾಹಿತಿಗೆ ದೂ.ಸಂ.0821–2970040.

ಬಾಳಗಾರು ಮಠದ ಶ್ರೀರಾಮಪ್ರಿಯ ತೀರ್ಥ ಶ್ರೀಪಾದಂಗಳವರ ಗುರುವಂದನೆ

ಮೈಸೂರು, ಜೂ.24(ಎಸ್‌ಪಿಎನ್)– ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಸಂಸ್ಥಾನದ ಬಾಳಗಾರು ಮಠದ ಶ್ರೀರಾಮಪ್ರಿಯ ತೀರ್ಥ ಶ್ರೀಪಾದಂಗಳವರ ಪುರಪ್ರವೇಶ ಮತ್ತು ಗುರುವಂದನೆ ಕಾರ್ಯಕ್ರಮ ಶನಿವಾರ ಜರುಗಿತು.



ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀಶಾರದಾ ವಿಲಾಸ ಕಾನೂನು ಕಾಲೇಜು ಆವರಣದ ಎಂ.ವೆಂಕಟಕೃಷ್ಣಯ್ಯ ಸಭಾಂಗಣದಲ್ಲಿ ಶ್ರೀರಾಮಪ್ರಿಯ ತೀರ್ಥ ಶ್ರೀಪಾದಂಗಳವರ ಗುರುವಂದನ ಸಮಿತಿ, ಮೈಸೂರು ನಗರ ನಾಗರಿಕ ಭಕ್ತವೃಂದ ಸಮಾರಂಭ ಆಯೋಜಿಸಿತ್ತು.

ಮೈಸೂರು ವಿವಿ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ. ಮಧುಸೂದನಾಚಾರ್ಯ ಶ್ರೀಪಾದಂಗಳವರಿಗೆ ಅಭಿನಂದನೆ ಸಲ್ಲಿಸುತ್ತಾ, ಶ್ರೀ ರಾಮಪ್ರಿಯ ತೀರ್ಥ ಶ್ರೀಪಾದಂಗಳವರು ತಮ್ಮ ಪೂರ್ವಾಶ್ರಮದಲ್ಲಿ ಮೈಸೂರು ವಿವಿಯಲ್ಲಿ ಎಂಎ ಕನ್ನಡ ವಿಷಯದಲ್ಲಿ ಅಧ್ಯಯನ ನಡೆಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಅಪಾರ ಪಾಂಡಿತ್ಯ ಪಡೆದುಕೊಂಡಿದ್ದಾರೆ ಎಂದರು.

ಶ್ರೀಪಾದಂಗಳವರು ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಿರಿ ಸಂಪನ್ನರಾಗಿ ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ. ಶ್ರೀ ರಾಮಪ್ರಿಯತೀರ್ಥ ಶ್ರೀಪಾದಂಗಳವರು ಕಡಿಮೆ ಹಣಕಾಸಿನ ವಹಿವಾಟು ಇರುವ ಮಠಕ್ಕೆ ಪೀಠಾಧಿಪತಿಗಳಾಗಿದ್ದಾರೆ. ಇದು ಅವರ ವ್ಯಕ್ತಿತ್ವವನ್ನು ತೋರುತ್ತದೆ ಎಂದು ತಿಳಿಸಿದರು.

ಶ್ರೀಪಾದಂಗಳವರು, ಶನಿವಾರ ಮೈಸೂರು ನಗರ ಪುರಪ್ರವೇಶ ಮಾಡಿದ್ದು, ಇದೇ ವೇದಿಕೆಯಲ್ಲಿ ಶ್ರೀಗಳ ಧಾರ್ಮಿಕ ಸೇವೆ ಪರಿಗಣಿಸಿ, ಇಲ್ಲಿನ ಭಕ್ತವೃಂದ ಅಭಿನಂದನೆ ಸಲ್ಲಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಹನೂರು ತಾಲೂಕು ಬಂಡಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಎಂ.ಮುತ್ತುರಾಜು ಅಭಿನಂದನೆ ಸಲ್ಲಿಸುತ್ತಾ, ಧಾರ್ಮಿಕ ಸೇವೆಯಲ್ಲಿ ಶ್ರೀಪಾದಂಗಳವರ ಸೇವೆ ಅಮೂಲ್ಯವಾದುದು ಎಂದರು.

ಈ ವೇಳೆ ಬೆಂಗಳೂರು ಕತ್ರಿಗುಪ್ಪೆಯ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ ಬಹುಶ್ರುತ ವಿದ್ವಾಂಸ ಸಿ.ಎಚ್.ಬದರೀನಾಥಾಚಾರ್ಯ, ಸಂಸ್ಕೃತಿ ಚಿಂತಕ ಡಾ.ಬೆ.ನಾ.ವಿಜಯೀಂದ್ರಾಚಾರ್ಯ, ಚಿತ್ರದುರ್ಗ ಅಬಕಾರಿ ಇಲಾಖೆ ಉಪ ಆಯುಕ್ತ ಡಾ.ಬಿ.ಮಾದೇಶ್, ಉಪನ್ಯಾಸಕರಾದ ವಿದ್ವಾನ್ ಕೃಪಾ.ಮಂಜುನಾಥ್ ಉಪಸ್ಥಿತರಿದ್ದರು. ವಿದುಷಿ ಶುಭರಾಘವೇಂದ್ರ, ವಿದ್ವಾನ್ ಸುಮುಖ ಮೌದ್ಗಲ್ಯ ಕೀರ್ತನೆ ಹಾಡಿದರು.

ಸಕಲ ಸರ್ಕಾರಿ ಗೌರವದೊಂದಿಗೆ ಯೋಧ ಜನಾರ್ಧನ್ ಅಂತ್ಯಕ್ರಿಯೆ



ಕೆ.ಆರ್.ಪೇಟೆ, ಜೂ.24– ಅನಾರೋಗ್ಯ ಕ್ಕೀಡಾಗಿ ಸಾವನ್ನಪ್ಪಿದ ತಾಲೂಕಿನ ವೀರಯೋಧ ಜನಾರ್ಧನ್‌ಗೌಡ(30) ಅವರ ಅಂತ್ಯಕ್ರಿಯೆ ಶನಿವಾರ ಸಂಜೆ ಸಕಲ ಸರ್ಕಾರಿ ಗೌರವಗಳೊಂದಿಗೆ ಹುಟ್ಟೂರು ಕಿಕ್ಕೇರಿಯಲ್ಲಿ ನೆರವೇರಿತು.

ಜಮ್ಮು–ಕಾಶ್ಮೀರದ ಭಾರತ–ಪಾಕಿಸ್ತಾನ ಗಡಿಯಲ್ಲಿ ಯೋಧನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜನಾರ್ಧನ್ ನ್ಯುಮೋನಿಯಾದಿಂದ ಬಳಲುತ್ತಿದ್ದರು. ಅವರನ್ನು ಜಮ್ಮು ಕಾಶ್ಮೀರದ ಶ್ರೀನಗರದ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಮುಂಜಾನೆ ಸಾವನ್ನಪ್ಪಿದ್ದರು. ಅವರ ಪಾರ್ಥಿವ ಶರೀರವನ್ನು ಶನಿವಾರ ಹುಟ್ಟೂರಿಗೆ ತರಲಾಗಿತ್ತು.

ಕಿಕ್ಕೇರಿ ಗ್ರಾಮದ ಗ್ರಾಪಂ ಸದಸ್ಯ ಪ್ರಕಾಶ್ ಮತ್ತು ಭಾರತಿ ದಂಪತಿ ಪುತ್ರ ಜನಾರ್ಧನ್, 2014ರಲ್ಲಿ ಭಾರತೀಯ ಸೇನೆಗೆ ಆಯ್ಕೆಯಾಗಿ, ಜಮ್ಮು–ಕಾಶ್ಮೀರದ ಶ್ರೀನಗರದ ಭಾರತ–ಪಾಕಿಸ್ತಾನ ಗಡಿಯಲ್ಲಿ ಕಳೆದ 9 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದರು. 2019ರಲ್ಲಿ ರಂಜಿತಾ ಅವರೊಂದಿಗೆ ವಿವಾಹವಾಗಿದ್ದು, ಇವರಿಗೆ 2 ವರ್ಷದ ಹೆಣ್ಣು ಮಗುವಿದೆ. ಯೋಧ ಜನಾರ್ಧನ್‌ಗೌಡ ಕಳೆದ 3 ತಿಂಗಳ ಹಿಂದಷ್ಟೇ ಕಿಕ್ಕೇರಿಗೆ ಆಗಮಿಸಿ ಕರ್ತವ್ಯಕ್ಕೆ ವಾಪಸ್ಸಾಗಿದ್ದರು.

ಗ್ರಾಮದ ಯೋಧ ಜನಾರ್ಧನ್ ಸಾವನ್ನಪ್ಪಿರುವ ವಿಷಯ ತಿಳಿಯುತ್ತಿದ್ದಂತೆ ಕಿಕ್ಕೇರಿ ಗ್ರಾಮಸ್ಥರು ಸ್ವಯಂ ಪ್ರೇರಿತರಾಗಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ






ಗೌರವ ಸಲ್ಲಿಸಿದರು. ಯೋಧನ ಮನೆ ಸೇರಿದಂತೆ ಇಡೀ ಕಿಕ್ಕೇರಿ ಗ್ರಾಮದಲ್ಲಿ ನೀರವ ಮೌನ ಆವರಿಸಿತ್ತು.

ಯೋಧನ ಪಾರ್ಥಿವ ಶರೀರವನ್ನು ಸೇನಾ ವಿಮಾನದ ಮೂಲಕ ಶನಿವಾರ ಬೆಳಗ್ಗೆ 8 ಗಂಟೆಗೆ ಚಂಡೀಗಢದಿಂದ ಬೆಂಗಳೂರಿಗೆ ಏರ್‌ಲಿಫ್ಟ್ ಮಾಡಲಾಯಿತು. ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಯಲಹಂಕ ವಾಯುನೆಲೆಗೆ ಆಗಮಿಸಿದ ಯೋಧನ ಪಾರ್ಥಿವ ಶರೀರಕ್ಕೆ ನಮನ ಸಲ್ಲಿಸಿ, ಬೆಳಗ್ಗೆ 11 ಗಂಟೆ ವೇಳೆಗೆ ಆರ್ಮಿ ಆಂಬುಲೆನ್ಸ್ ಮೂಲಕ ಬೆಂಗಳೂರಿನಿಂದ ಹೊರಟ ಯೋಧನ ಪಾರ್ಥಿವ ಶರೀರಕ್ಕೆ ಕುಣಿಗಲ್, ಯಡಿಯೂರು, ಬೆಳ್ಳೂರು ಕ್ರಾಸ್, ಹಿರಿಸಾವೆ, ಶ್ರವಣಬೆಳಗೊಳ ಸೇರಿದಂತೆ ವಿವಿಧೆಡೆ ಸಾರ್ವಜನಿಕರು ಹಾಗೂ ಅಭಿಮಾನಿಗಳು ಪುಷ್ಪ ನಮನ ಸಲ್ಲಿಸಿದರು. ಸಂಜೆ 4 ಗಂಟೆ ವೇಳೆಗೆ ಯೋಧನ ಪಾರ್ಥಿವ ಶರೀರ ಕಿಕ್ಕೇರಿ ತಲುಪಿತು.

ಜಿಲ್ಲಾಡಳಿತ ಕಿಕ್ಕೇರಿಯ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಿತ್ತು. ಬಳಿಕ ಕಿಕ್ಕೇರಿಯಲ್ಲಿ ತೆರೆದ ವಾಹನದಲ್ಲಿ ಮೃತ ಯೋಧನ ಪಾರ್ಥಿವ ಶರೀರದ ಮೆರವಣಿಗೆ ಮಾಡಲಾಯಿತು. ಬಳಿಕ ಯೋಧನ ಮನೆ ಬಳಿಯ ತೋಟದಲ್ಲಿ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡುವ ಮೂಲಕ ಅಂತ್ಯಕ್ರಿಯೆ ನೆರವೇರಿಸಲಾಯಿತು. ಇದಕ್ಕೂ ಮುನ್ನಾ, ಯೋಧ ಜನಾರ್ಧನ್ ಪಾರ್ಥಿವ ಶರೀರದ ಮೇಲಿದ್ದ ರಾಷ್ಟ್ರಧ್ವಜವನ್ನು ಆತನ ಪತ್ನಿ ರಂಜಿತಾ ಅವರಿಗೆ ಹಸ್ತಾಂತರಿಸಲಾಯಿತು. ಬಳಿಕ ಮೂರು ಸುತ್ತು ಕುಶಾಲತೋಪು ಹಾರಿಸಿ, ರಾಷ್ಟ್ರಗೀತೆ ಹಾಡುವ ಮೂಲಕ ಸಕಲ ಸರ್ಕಾರಿ ಗೌರವ ಸಲ್ಲಿಸಿ, ಅಂತಿಮ ನಮನ ಸಲ್ಲಿಸಲಾಯಿತು.



ಈ ವೇಳೆ ಜಿಲ್ಲಾಧಿಕಾರಿ ಡಾ. ಕುಮಾರ್, ಶಾಸಕ ಹೆಚ್.ಟಿ.ಕುಮಾರ್, ತಹಸೀಲ್ದಾರ್ ನಿಸರ್ಗಪ್ರಿಯ, ಡಿವೈಎಸ್ಪಿ ಲಕ್ಷ್ಮೀನಾರಾಯಣ ಪ್ರಸಾದ್ ಸೇರಿದಂತೆ ಹಲವು ಗಣ್ಯರು ಹಾಗೂ ಕಿಕ್ಕೇರಿ ಸುತ್ತಮುತ್ತಲ ಗ್ರಾಮಸ್ಥರು ಉಪಸ್ಥಿತರಿದ್ದರು.

ಮೈಷುಗರ್‌ಗೆ ಶಾಸಕ ಗಣಿಗ ರವಿಕುಮಾರ್ ಭೇಟಿ



ಮಂಡ್ಯ, ಜೂ.24– ಮೈಷುಗರ್ ಸಕ್ಕರೆ ಕಾರ್ಖಾನೆಗೆ ಶನಿವಾರ ಶಾಸಕ ಗಣಿಗ ರವಿಕುಮಾರ್ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಶೀಘ್ರ ಕಬ್ಬು ಅರೆಯಲು ಬೇಕಾದ ವ್ಯವಸ್ಥೆ ಮಾಡಿಕೊಳ್ಳಬೇಕು. ಈಗಾಗಲೇ ಕಬ್ಬು ಅರೆಯುವಿಕೆಗೆ ಚಾಲನೆ ನೀಡಿದ್ದು, 50 ಕೋಟಿ ಹಣ ಸಹ ಬಿಡುಗಡೆ ಮಾಡಲಾಗಿದೆ. ಜೊತೆಗೆ ಕಾರ್ಖಾನೆ ಬೇಗ ಪುನರಾರಂಭಗೊಂಡರೆ ಮತ್ತಷ್ಟು ಹಣವನ್ನು ಸರ್ಕಾರದೊಂದಿಗೆ ಮಾತನಾಡಿ ಬಿಡುಗಡೆ ಮಾಡಿಸಬಹುದು ಎಂದರು.

ಅಲ್ಲದೇ ಮೈಷುಗರ್ ಸಕ್ಕರೆ ಕಾರ್ಖಾನೆಗೆ ಸೇರಿದ ಆಸ್ತಿ ಬಗ್ಗೆಯೂ ಮಾಹಿತಿ ಪಡೆದುಕೊಂಡ ಶಾಸಕರು, ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಒಂದು ಎಕರೆ ಜೊತೆಗೆ ಮಂಡ್ಯ ನಗರದಲ್ಲಿರುವ ಒಂದು ಎಕರೆ ಜಾಗದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡಿ ಇದರಿಂದ ಬರುವ ಬಾಡಿಗೆ ಹಣದಿಂದ ಕಾರ್ಖಾನೆಯನ್ನು ಶಾಶ್ವತವಾಗಿ ನಿಲ್ಲದಂತೆ ನಡೆಸಲು ಯೋಜನೆ ರೂಪಿಸುವ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ಬಗ್ಗೆ ಸಂಬಂಧಿಸಿದ ಸಚಿವರ ಜೊತೆಗೆ ಚರ್ಚಿಸಲಾಗುವುದು ಎಂದರು.

ಬೇರೆ ಕಾರ್ಖಾನೆಗೆ ಕಬ್ಬು ಹೋಗದಂತೆ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದ ಶಾಸಕರು, ನಿಗದಿತ ಸಮಯಕ್ಕೆ ಕಬ್ಬು ಅರೆಯುವಿಕೆ ಕಾರ್ಯ ಮಾಡಬೇಕು. ಮೈಷುಗರ್ ಕಾರ್ಖಾನೆ ಆಸ್ತಿ ಕಾಪಾಡಲು ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಮಾರುಕಟ್ಟೆಗೆ ಭೇಟಿ: ಶಾಸಕ ಗಣಿಗ ರವಿಕುಮಾರ್ ನಿರ್ಮಾಣ ಹಂತದಲ್ಲಿರುವ ಪೇಟೆ ಬೀದಿಯ ನೂತನ ಮಾರುಕಟ್ಟೆ ಕಟ್ಟಡ ಕಾಮಗಾರಿ ವೀಕ್ಷಿಸಿದರು.

ಬಳಿಕ ಕಟ್ಟಡ ಕಾಮಗಾರಿಯಲ್ಲಿ ಗುಣಮಟ್ಟ ಕಾಪಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಶಾಸಕರು, ಶೀಘ್ರ ಕಾಮಗಾರಿ ಮುಗಿಸಿ ಮಾರುಕಟ್ಟೆ ಪ್ರಾರಂಭ ಮಾಡಬೇಕೆಂದು ಹೇಳಿದರು. ಇದೇ ವೇಳೆ ನಗರಸಭೆ ಆಯುಕ್ತ ಮಂಜುನಾಥ್, ನಗರಸಭೆ ಸದಸ್ಯರಾದ ನಹೀಮ್, ಮಂಜುಳಾ, ಸೇರಿ ಹಲವು ಮುಖಂಡರ ಈ ಭೇಟಿಯಲ್ಲಿ ಪಾಲ್ಗೊಂಡಿದ್ದರು.

ಸರ್ಕಾರಿ ನಿವೃತ್ತ ನೌಕರರ ಸಂಘದ ವಾರ್ಷಿಕ ಸಭೆ

ಪಾಂಡವಪುರ, ಜೂ.24– ಸರ್ಕಾರಿ ನೌಕರರು ತಮ್ಮ ಸೇವಾವಧಿಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದರೆ ನಿವೃತ್ತಿ ಬಳಿಕ ನೆಮ್ಮದಿ ಕಾಣಬಹುದು ಎಂದು ನಿವೃತ್ತ ಪ್ರಾಂಶುಪಾಲ ನೀ.ಗಿರೀಗೌಡ ತಿಳಿಸಿದರು.

ಪಟ್ಟಣದಲ್ಲಿ ನಡೆದ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಪ್ರತಿಯೊಬ್ಬರೂ ಶಿಸ್ತನ್ನು ಮೈಗೂಡಿಸಿಕೊಳ್ಳಬೇಕು. ವಿದ್ಯೆ ವ್ಯಕ್ತಿತ್ವ ರೂಪಿಸಿದರೆ ಆತನ ಮುಂದಿನ ಬದುಕು ಹಸನಾಗುತ್ತದೆ ಎಂದರು.

ಸರ್ಕಾರಿ ನೌಕರರು ನಿವೃತ್ತಿ ನಂತರ ತಮ್ಮ ದಿನಚರಿಯಲ್ಲಿ ಮಾರ್ಪಾಡು ಮಾಡಿಕೊಂಡು ಧ್ಯಾನ, ಯೋಗ, ಆಧ್ಯಾತ್ಮಿಕ ವಿಚಾರಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ನುಡಿದರು. ಪ್ರಸ್ತುತ ಪತ್ರಿಕಾರಂಗ ಕಲುಷಿತಗೊಂಡಿದ್ದು, ತನ್ನ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದೆ. ಹೀಗಾಗಿ ಪತ್ರಕರ್ತರು ವಸ್ತುನಿಷ್ಠ ವರದಿಗೆ ಆದ್ಯತೆ ನೀಡಬೇಕು ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಎಸ್. ನಾರಾಯಣಗೌಡ ವಹಿಸಿದ್ದರು. ಇದೇ ವೇಳೆ ಸಂಘದ ಹಿಂದಿನ ಕಾರ್ಯದರ್ಶಿ ಎಸ್.ಎ.ಶಾಂತಮೂರ್ತಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಬೋರೇಗೌಡ ಅವರನ್ನು ಆಯ್ಕೆ ಮಾಡಲಾಯಿತು.



ಕಳೆದ 45 ವರ್ಷಗಳಿಂದ ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಪತ್ರಕರ್ತ ಎಸ್. ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಖಜಾಂಚಿ ಜವರೇಗೌಡ, ನಿವೃತ್ತ ಮುಖ್ಯಶಿಕ್ಷಕ ಮುತ್ತುಸ್ವಾಮಿ ಪಾಲ್ಗೊಂಡಿದ್ದರು.

ಜೂ.27, ಪ್ರಗತಿ ಪರಿಶೀಲನಾ ಸಭೆ

ಮಂಡ್ಯ, ಜೂ.24– ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಧ್ಯಕ್ಷತೆಯಲ್ಲಿ ಜೂ.27 ರಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಕೆಡಿಪಿ ಸಭೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಶ್ರೀರಂಗಪಟ್ಟಣ ತಾಲೂಕಿನ ಮೇಳಾಪುರ ಗ್ರಾಪಂ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಧನರಾಜ್ ಅವರನ್ನು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಟಿ.ಶ್ರೀಧರ್, ಮುಖಂಡರಾದ ಶಿವಣ್ಣ, ಬೋರೇಗೌಡ, ವಿರೂಪಾಕ್ಷ, ಸದಾಶಿವ, ಚಿಟ್ಟೇಗೌಡ, ಗ್ರಾಮಸ್ಥರು ಅಭಿನಂದಿಸಿದರು.

ಕೆ.ಆರ್.ಪೇಟೆ: ಮಳೆಗಾಗಿ ಬಾಲಕರಿಗೆ ಮದುವೆ

ಮಂಡ್ಯ, ಜೂ.24– ಜಿಲ್ಲೆಯಲ್ಲಿ ಮುಂಗಾರು ಮಳೆ ಸಮರ್ಪಕವಾಗಿ ಆಗದ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ ತಾಲೂಕಿನ ಹುಳ್ಳಿಗಂಗನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ಇಬ್ಬರು ಬಾಲಕರಿಗೆ ಮದುವೆ ಮಾಡಿಸುವ ಮೂಲಕ ಮಳೆಗಾಗಿ ಪ್ರಾರ್ಥನೆ ಸಲ್ಲಿಸಿದ್ದಾರೆ.

ಜೂನ್ ಕಳೆಯುತ್ತಾ ಬಂದರೂ ಜಿಲ್ಲೆಯಲ್ಲಿ ನಿರೀಕ್ಷೆಯಂತೆ ಮುಂಗಾರು ಮಳೆ ಸುರಿಯುತ್ತಿಲ್ಲ. ಇದರಿಂದ ಬರದ ಮುನ್ಸೂಚನೆ ಎದುರಾಗಿರುವುದರಿಂದ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಮಳೆಗಾಗಿ ಪ್ರಾರ್ಥನೆ ಸಲ್ಲಿಸಲು ವಿವಿಧ ಆಚರಣೆಗಳಲ್ಲಿ ತೊಡಗಿದ್ದಾರೆ. ಅದರಂತೆ ಕೆ.ಆರ್.ಪೇಟೆ ತಾಲೂಕಿನ ಹುಳ್ಳಿಗಂಗನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರೆಲ್ಲ ಸೇರಿ ಮದುವೆಯ ರೀತಿಯಲ್ಲಿಯೇ ಇಬ್ಬರು ಗಂಡು ಮಕ್ಕಳ ಪೈಕಿ ಒಬ್ಬ ಗಂಡು ಮಗುವಿಗೆ ವಧುವಿನ ವೇಷ ಹಾಕಿಸಿ ಮದುವೆ ಮಾಡಿದ್ದಾರೆ.

ಗುರುವಾರ ರಾತ್ರಿ ಸಂಪ್ರದಾಯದಂತೆ ಡೋಲು, ವಾದ್ಯ ಸಮೇತ ವಧು–ವರರನ್ನು ಕರೆ ತರುವುದು ಸೇರಿದಂತೆ ಮದುವೆಯ ಕಾರ್ಯಗಳನ್ನು ಪೂರೈಸಿದ್ದಾರೆ. ನಂತರ ವಧುವಿನ ವೇಷ ತೊಟ್ಟಿದ್ದ ಬಾಲಕನಿಗೆ ಮತ್ತೊಬ್ಬ ಬಾಲಕನಿಂದ ತಾಳಿ ಕಟ್ಟಿಸುವ ಮೂಲಕ ಅಕ್ಷತೆ ಹಾಕಿ ಹಾಲಿನಿಂದ ಧಾರೆ ಎರೆದು ಆಶೀರ್ವಾದ ಮಾಡಿ ಮಳೆರಾಯ ಕೃಪೆ ತೋರು ಎಂದು ಪ್ರಾರ್ಥನೆ ಮಾಡಿದ್ದಾರೆ.

ನಂತರ ಗ್ರಾಮಸ್ಥರಿಗೆ ಮದುವೆಯ ಊಟ ಹಾಕಿದ್ದಾರೆ. ಅಲ್ಲದೆ, ಪಟಾಕಿ ಸಿಡಿಸಿ ಮದುವೆ ಸಂಭ್ರಮವನ್ನು ಆಚರಿಸಿದ್ದಾರೆ. ನಂತರ ವರುಣ ದೇವನಿಗೂ ಪೂಜೆ ಸಲ್ಲಿಸಿ ಮಳೆಗಾಗಿ ಮೊರೆ ಇಟ್ಟಿದ್ದಾರೆ. ಇದೊಂದು ವಿಚಿತ್ರ ಮದುವೆಯಂತೆ ಕಂಡು ಬಂದರೂ ಮಳೆಗಾಗಿ ಗ್ರಾಮಸ್ಥರು ಮಾಡಿರುವುದು ವಿಶೇಷವಾಗಿದೆ.

ಅಂತರಾಷ್ಟ್ರೀಯ ಮಟ್ಟದ ವಿದ್ಯಾರ್ಥಿ ಒಲಂಪಿಕ್‌ನಲ್ಲಿ ಚಿನ್ನ ಗೆದ್ದ ವಿದ್ಯಾನಂದ ಕಶ್ಯಪ್



ಮೈಸೂರು, ಜೂ.24– ಮಲೇಷಿಯಾದಲ್ಲಿ ನಡೆದ ಸ್ಟೂಡೆಂಟ್ಸ್ ಒಲಂಪಿಕ್ ಇಂಟರ್‌ನ್ಯಾಷನಲ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಮೈಸೂರು ಜಿಲ್ಲೆ ಕೆ.ಆರ್. ನಗರದ ಕೆ.ಅಂಬರೀಶ್ ಮತ್ತು ಕೆಎಸ್.ಜಯಶ್ರೀ ದಂಪತಿ ಪುತ್ರ ವಿದ್ಯಾನಂದ ಕಶ್ಯಪ್ ಶಟಲ್ ಬ್ಯಾಡ್ಮಿಂಟನ್‌ನಲ್ಲಿ ಚಿನ್ನ ಗೆದ್ದಿದ್ದಾರೆ. ವಿದ್ಯಾನಂದ ಕಶ್ಯಪ್, ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಇನ್‌ಫರ್ಮೇಷನ್ ಸೈನ್ಸ್ ವಿಭಾಗದ ಮೂರನೇ ವರ್ಷದ ವಿದ್ಯಾರ್ಥಿಯಾಗಿದ್ದು, ಭಾರತದ ಸ್ಟೂಡೆಂಟ್ಸ್ ಒಲಂಪಿಕ್ ಅಸೋಸಿಯೇಷನ್, ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿದ್ದ 9ನೇ ಸ್ಟೂಡೆಂಟ್ಸ್ ಒಲಂಪಿಕ್ ಗೇಮ್ಸ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ(ಚಿನ್ನದ ಪದಕ) ಗಳಿಸಿದ್ದರು. ಮಲೇಷಿಯಾದಲ್ಲಿ ಜೂ.16 ರಿಂದ 19ರವರೆಗೆ ನಡೆದ ರಾಷ್ಟ್ರೀಯ ಮಟ್ಟದ ಸ್ಟೂಡೆಂಟ್ಸ್ ಒಲಂಪಿಕ್‌ನ ಫೈನಲ್ ಪಂದ್ಯದಲ್ಲಿ ಸಿಂಗಾಪುರ್ ಆಟಗಾರನನ್ನು ಮಣಿಸಿ ಚಿನ್ನ ಗೆದ್ದಿದ್ದಾರೆ.

ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಸಮ್ಮುಖದಲ್ಲಿ

ನೂತನ ನಂದಿಧ್ವಜ ಉದ್ಘಾಟನೆ



ಮೈಸೂರು, ಜೂ.24(ಎಸ್‌ಬಿಡಿ)– ಶಿವಯೋಗಿ ಶ್ರೀ ಶಿವಪಾದ ಸ್ವಾಮಿಗಳ ಆರಾಧನೆ, ಶಿವಪಾದ ಗುರುಸೇವಾ ನಂದಿಧ್ವಜ ಸಂಘದ 87ನೇ ವಾರ್ಷಿಕೋತ್ಸವ ಹಾಗೂ ನೂತನ ನಂದಿಧ್ವಜದ ಉದ್ಘಾಟನಾ ಸಮಾರಂಭ ಶನಿವಾರ ನೆರವೇರಿತು.

ಮೈಸೂರಿನ ಬಸವೇಶ್ವರ ರಸ್ತೆ ಕುದೇರು ಮಠದ ಪಕ್ಕದಲ್ಲಿರುವ ಸಂಘದ ಆವರಣದಲ್ಲಿ ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ನಂದಿಧ್ವಜದ ಮಹತ್ವವನ್ನು ಸ್ಮರಿಸಿಕೊಂಡರು.

ನಂದೀಧ್ವಜ ಮೈಸೂರು ಭಾಗದಲ್ಲಿ ಅತ್ಯಂತ ಪ್ರಸಿದ್ಧಿಯಾಗಿದೆ. ವಿಶ್ವವಿಖ್ಯಾತ ದಸರಾ ಮಹೋತ್ಸವ ಸೇರಿದಂತೆ ಯಾವುದೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಂದಿ ಕಂಬ ಇದ್ದರೆ ಶುಭಕರ ಎನ್ನುವ ದೈವಿಕ ಭಾವ ಹಾಸುಹೊಕ್ಕಾಗಿದೆ. ಸ್ಥಿರ ಕಂಬದಂತಿರುವ ನಂದಿ ಧ್ವಜವನ್ನು ದೇವಸ್ಥಾನಗಳಲ್ಲಿ ಕಾಣುತ್ತೇವೆ. ನಾನಾ ಧಾರ್ಮಿಕ ಕಾರ್ಯಗಳನ್ನು ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಆರಂಭಿಸುವ ಸಂಪ್ರದಾಯ ಮುಂದುವರೆದಿದೆ ಎಂದರು.

ನಂದಿಕಂಬವನ್ನು ಹೊತ್ತಿ ಕುಣಿಯುವುದನ್ನು ಕಣ್ತುಂಬಿಕೊಳ್ಳುವುದು ಒಂದು ಸೋಜಿಗ. ಇದಕ್ಕೆ ಭಕ್ತಿ, ಶ್ರದ್ಧೆ, ಶಕ್ತಿ ಎಲ್ಲವೂ ಬೇಕು. ಈ ಮಹತ್ವದ ಆಚರಣೆಯನ್ನು 87 ವರ್ಷಗಳಿಂದ ಮುನ್ನಡೆಸಿಕೊಂಡು ಬರುವ ಮೂಲಕ ಮೈಸೂರಿನ ಶಿವಪಾದ ಗುರುಸೇವಾ ನಂದಿಧ್ವಜ ಸಂಘ ನಮ್ಮ ಸಾಂಸ್ಕೃತಿಕ ಆಚರಣೆಯನ್ನು ಪಸರಿಸುತ್ತಿದೆ. ಮುಂದೆಯೂ ಹೆಚ್ಚು ಯುವ ಪೀಳಿಗೆಯನ್ನು ಆಕರ್ಷಿಸಿ ಕೈಂಕರ್ಯವನ್ನು ಮುಂದುವರೆಸುವ ಮುಖೇನ ಶತಮಾನೋತ್ಸವ ಆಚರಿಸಿಕೊಳ್ಳಲಿ ಎಂದು ಶ್ರೀಗಳು ಆಶಿಸಿದರು.

ಕಾರ್ಯಕ್ರಮದಲ್ಲಿ ವೀರಶೈವ ನಂದಿಧ್ವಜ ಸಂಘದ ಎಂ.ಎನ್.ಚಂದ್ರಶೇಖರ, ಗೌರಿ ಶಂಕರ ನಂದಿಧ್ವಜ ಸಂಘದ ಮಹದೇವಪ್ಪ ಉಡಿಗಾಲ, ಗುರುಮಲ್ಲೇಶ್ವರ ನಂದಿಧ್ವಜ ಸಂಘದ ಮಲ್ಲೇಶಯ್ಯ ಅವರನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಅಗ್ರಹಾರದ 101 ಗಣಪತಿ ದೇವಸ್ಥಾನದ ಬಳಿಯಿಂದ ಬಸವೇಶ್ವರ ರಸ್ತೆಯ ಶಿವಪಾದ ಗುರುಸೇವಾ ನಂದಿಧ್ವಜ ಸಂಘದ ಕಚೇರಿವರೆಗೆ ನೂತನ ನಂದಿಧ್ವಜವನ್ನು ಮೆರವಣಿಗೆ ತರಲಾಯಿತು. ಡೊಳ್ಳು ಕುಣಿತ, ಪೂಜಾ ಕುಣಿತ, ವೀರಗಾಸೆ, ಮಂಗಳ ವಾದ್ಯ, ಕಹಳೆಯನ್ನು ಒಳಗೊಂಡ ಕಲಾತಂಡಗಳು ಮೆರವಣಿಗೆಯ ಮೆರಗು ಹೆಚ್ಚಿಸಿದವು.

ಸಮಾರಂಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಮೇಯರ್ ಶಿವಕುಮಾರ್, ಶಾಸಕರಾದ ಶ್ರೀವತ್ಸ, ಗಣೇಶ್ ಪ್ರಸಾದ್, ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್, ಶಿವಪಾದ ಗುರು ಸೇವಾ ನಂದಿಧ್ವಜ ಸಂಘದ ಅಧ್ಯಕ್ಷ ಆರ್. ಅಂಕಯ್ಯ ಮತ್ತಿತರರು ಭಾಗವಹಿಸಿದ್ದರು.

ಬದಲಾಗುತ್ತಿರುವ ಜಗತ್ತಿಗೆ ಅನುಗುಣವಾಗಿ ಬದುಕನ್ನು ರೂಪಿಸಿಕೊಳ್ಳಬೇಕಿದೆ

ಮೈಸೂರಿನ ಕೃಷಿ ಜಂಕ್ಷನ್ ಸಹ ಸಂಸ್ಥಾಪಕಿ ಡಾ. ಚೈತ್ರ ಭರತ್ ಅಭಿಮತ




ಮೈಸೂರು, ಜೂ.24– ಪ್ರತಿಯೊಬ್ಬರು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರಸ್ತುತ ಆಧುನಿಕ ಜಗತ್ತಿಗೆ ತಕ್ಕಂತೆ ಹೊಂದಿಸಿಕೊಂಡು ಬದುಕನ್ನು ರೂಪಿಸಿಕೊಳ್ಳಬೇಕೆಂದು ಮೈಸೂರಿನ ಕೃಷಿ ಜಂಕ್ಷನ್ ಸಹ ಸಂಸ್ಥಾಪಕಿ ಡಾ. ಚೈತ್ರ ಭರತ್ ತಿಳಿಸಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಏರ್ಪಡಿಸಿದ್ದ ರಾಜ್ಯ ಮಟ್ಟದ ಅಂತರ ಕಾಲೇಜುಗಳ 'ಬಿಝ್‌ಟೆಕ್ ಎಕ್ಸ್ಟ್ರಾವೆಗಾನ್ಝಾ– ವಿದ್ವತ್–2k23' ಎರಡು ದಿನಗಳ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಜಗತ್ತು ಯಾವುದೇ ಒಂದು ವ್ಯವಸ್ಥೆಗೆ ಹೊಂದಿಕೊಳ್ಳಲು ಮೊದಮೊದಲು ಬಹಳ ಸಮಯ ತೆಗೆದುಕೊಳ್ಳುತ್ತದೆ. ಆದರೆ ಮುಂದಿನ ಆವಿಷ್ಕಾರಗಳಿಗೆ ಬಹುಬೇಗ ಒಗ್ಗಿಕೊಳ್ಳುತ್ತೇವೆ. ನಿರಾಶಾದಾಯಕನಾದ ವ್ಯಕ್ತಿಯೊಬ್ಬ ತನ್ನಲ್ಲಿ ಅಗಾಧ ವ್ಯಾಪಾರೋಪಾಯಗಳಿದ್ದಾಗ್ಯೂ ಸಂಸಾರವೂ ಸೇರಿದಂತೆ ಯಾರೊಬ್ಬರೂ ಅವನ ನೆರವಿಗೆ ಧಾವಿಸದಿದ್ದಾಗ ರಾಕ್‌ಫೆಲ್ಲರ್‌ನಂತಹ ವ್ಯಕ್ತಿಯೊಬ್ಬ ಆತ್ಮಸ್ಥೈರ್ಯ ತುಂಬಿ ಆ ವ್ಯಕ್ತಿ ಯಶಸ್ವಿ ಉದ್ಯಮಿಯಾಗಲು ನೆರವನ್ನು ನೀಡಿದ್ದ ಕಥೆ ಹೇಳಿ ಎಲ್ಲರಲ್ಲೂ ಈ ರೀತಿಯ ಆತ್ಮಸ್ಥೈರ್ಯವನ್ನು ತಂದುಕೊಳ್ಳಬೇಕು ಎಂದರು. ಪರಿಸ್ಥಿತಿಯ ಒತ್ತಡಗಳಿಗೆ ಸಿಲುಕಿದ ವ್ಯಕ್ತಿ ಕಾಲಕ್ಕೆ ತಕ್ಕಂತೆ ಬದಲಾಗಿ ಯಶಸ್ಸನ್ನು ಪಡೆಯುವಂತೆ ಹಲವಾರು ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಎರಡು ದಿನಗಳ ಕಾರ್ಯಕ್ರಮದಲ್ಲಿ ಒಟ್ಟಾರೆ 16 ವಿಭಾಗಗಳಲ್ಲಿ ನಡೆದ ಸ್ಪರ್ಧೆಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಒಟ್ಟು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು, ವಿಜೇತರಾದ ಎಲ್ಲಾ ವಿಭಾಗಗಳ ಸ್ಪರ್ಧಾರ್ಥಿಗಳಿಗೆ ನಗದು ಬಹುಮಾನ ಹಾಗೂ ಟ್ರೋಫಿ ನೀಡಲಾಯಿತು. ಒಟ್ಟಾರೆ ಸಮಗ್ರ ಚಾಂಪಿಯನ್‌ಶಿಪ್ ವಿಜೇತರಾದ ಹುಬ್ಬಳ್ಳಿಯ ಕೆಎಲ್‌ಇ ಕಾಲೇಜಿನ ವಿದ್ಯಾರ್ಥಿಗಳಿಗೆ 15,000 ರೂ. ನಗದು ಹಾಗೂ ಟ್ರೋಫಿಯನ್ನು ನೀಡಿ ಗೌರವಿಸಲಾಯಿತು.

ತೇಜಸ್ವಿನಿ ನಿರೂಪಿಸಿ, ರಹೀಮಾ ರೋಷನ್ ಸ್ವಾಗತಿಸಿದ ಕಾರ್ಯಕ್ರಮದ ಅಧ್ಯಕ್ಷತೆ ಸಂಸ್ಥೆಯ ಕೋಶಾಧ್ಯಕ್ಷರಾದ ಶ್ರೀಶೈಲ ರಾಮಣ್ಣನವರ್ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಮರೀಗೌಡ, ವಿದ್ವತ್ ಸಂಚಾಲಕರಾದ ಸಿದ್ಧರಾಜು ಆರ್., ವತ್ಸಲ ಬಿ.ಕೆ., ಚೈತ್ರ, ಬೋಧಕರು, ಬೋಧಕೇತರರು ಹಾಜರಿದ್ದರು.

26 ವರ್ಷಗಳ ಬಳಿಕ ಭಾರತ ಪ್ರಧಾನಿ ಈಜಿಪ್ಟ್‌ಗೆ ಭೇಟಿ



ಕೈರೋ, ಜೂ.24– ಅಮೆರಿಕ ಪ್ರವಾಸ ಮುಗಿಸಿರುವ ಪ್ರಧಾನಿ ನರೇಂದ್ರ ಮೋದಿ ಇದೀಗ 2 ದಿನದ ಈಜಿಪ್ಟ್ ಪ್ರವಾಸಕ್ಕಾಗಿ ಕೈರೋ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದಾರೆ. ಪ್ರಧಾನಿ ಮೋದಿಗೆ ಅದ್ದೂರಿ ಹಾಗೂ ಆತ್ಮೀಯ ಸ್ವಾಗತ ಕೋರಲಾಗಿದೆ. ಪ್ರಧಾನಿ ಮೋದಿ ಬರಮಾಡಿಕೊಳ್ಳಲು ಈಜಿಪ್ಟ್ ಪ್ರಧಾನಿ ಮುಸ್ತಾಫಾ ಮಡ್‌ಬೌಲಿ ಖುದ್ದು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಮೋದಿಯವರನ್ನು ಆತ್ಮೀಯವಾಗಿ ಆಲಿಂಗಿಸಿ ಸ್ವಾಗತ ಕೋರಿದ್ದಾರೆ. ಜೂನ್ 24 ಹಾಗೂ ಜೂನ್ 25 ಎರಡು ದಿನ ಪ್ರಧಾನಿ ಮೋದಿ ಈಜಿಪ್ಟ್‌ನಲ್ಲಿ ಹಲವು ದ್ವಿಪಕ್ಷೀಯ ಮಾತುಕತೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಇದೇ ಮೊದಲ ಬಾರಿಗೆ ಈಜಿಪ್ಟ್ ಪ್ರವಾಸ ಮಾಡಿದ್ದಾರೆ. 1997ರ ಬಳಿಕ ಅಂದರೆ 26 ವರ್ಷಗಳ ಬಳಿಕ ಈಜಿಪ್ಟ್ ಪ್ರವಾಸ ಮಾಡಿದ ಭಾರತದ ಪ್ರಧಾನಿ ಎಂಬ ಹೆಗ್ಗಳಿಕೆಗೂ ಮೋದಿ ಪಾತ್ರಾಗಿದ್ದಾರೆ. ಜೂ.25 ಪ್ರಧಾನಿ ಮೋದಿ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತಾಹ್ ಎಲ್ ಸಿಸಿ ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಲಿದ್ದಾರೆ. 2023ರ ಗಣರಾಜ್ಯೋತ್ಸವಕ್ಕೆ ಈಜಿಪ್ಟ್ ರಾಷ್ಟ್ರಪತಿ ಭಾರತದ ವಿಶೇಷ ಅತಿಥಿಯಾಗಿದ್ದರು. ಇದೀಗ 6 ತಿಂಗಳ ಬಳಿಕ ಪ್ರಧಾನಿ ಮೋದಿ ಹಾಗೂ ಅಬ್ದೆಲ್ ಮತ್ತೆ ಭೇಟಿಯಾಗುತ್ತಿದ್ದಾರೆ. ಅಧ್ಯಕ್ಷ ಸೇರಿದಂತೆ ಈಜಿಪ್ಟ್ ಸರ್ಕಾರದ ಪ್ರಮುಖ ಗಣ್ಯರೊಂದಿಗೆ ಮೋದಿ ಮಾತುಕತೆ ನಡೆಸಲಿದ್ದಾರೆ.

ನಿಗಮ ಮಂಡಳಿಗಳಿಗೆ ನಿರ್ದೇಶಕರ ನಾಮನಿರ್ದೇಶನಕ್ಕಾಗಿ ಕಾರ್ಯಕರ್ತರ ಪಟ್ಟಿ ಕಳುಹಿಸಲು ಡಿಸಿಸಿ ಅಧ್ಯಕ್ಷರಿಗೆ ಸೂಚನೆ

ಬೆಂಗಳೂರು, ಜೂ. 24– ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, ಕಾಂಗ್ರೆಸ್‌ನ ಸಂಸದರು, ಶಾಸಕರು, 2019ರ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿದ್ದವರು ಹಾಗೂ 2023ರ ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳಾಗಿದ್ದವರ ಶಿಫಾರಸ್ಸಿನ ಮೇರೆಗೆ ನಿಗಮ–ಮಂಡಳಿಗಳಿಗೆ ನಿರ್ದೇಶಕರುಗಳನ್ನು ನಾಮನಿರ್ದೇಶನ ಮಾಡಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಿರ್ಧರಿಸಿದ್ದು, ಈ ಸಂಬಂಧ ಡಿಸಿಸಿ ಅಧ್ಯಕ್ಷರು ಹಾಗೂ ಇತರರಿಗೆ ಪತ್ರ ಬರೆದಿದ್ದಾರೆ.

ಪಕ್ಷದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿರುವ, ಪಕ್ಷದ ಸಂಘಟನೆಗೆ ಹೆಚ್ಚಿನ ಸಮಯವನ್ನು ನೀಡಿರುವ ಹಾಗೂ ಹಲವಾರು ವರ್ಷ ಪಕ್ಷದಲ್ಲಿ ಮುಂಚೂಣಿಯಲ್ಲಿ ಸೇವೆ ಸಲ್ಲಿಸಿ, ಇದುವರೆಗೂ ಯಾವುದೇ ರೀತಿಯ ಸ್ಥಾನಮಾನ ಸಿಗದ ಮುಖಂಡರ ಹೆಸರನ್ನು ಆದ್ಯತೆಯ ಮೇರೆಗೆ ಜಿಲ್ಲಾವಾರು, ತಾಲೂಕುವಾರು ಹಾಗೂ ಕ್ಷೇತ್ರವಾರು ಪ್ರತ್ಯೇಕ ಪಟ್ಟಿ ಮಾಡಿ ಕೆಪಿಸಿಸಿ ಕಚೇರಿಗೆ ಕಳುಹಿಸಬೇಕು ಎಂದು ಪತ್ರದಲ್ಲಿ ತಿಳಿಸಿರುವ ಡಿಕೆಶಿ, ಯಾವ ಯಾವ ಸಮಿತಿಗೆ ಎಷ್ಟು ಮಂದಿಯನ್ನು ಹಾಗೂ ಯಾವ ವರ್ಗದವರನ್ನು ಶಿಫಾರಸು ಮಾಡಬೇಕು ಎಂಬುದನ್ನು ಉಲ್ಲೇಖಿಸಿದ್ದಾರೆ.

ರಾಜ್ಯ ಮಟ್ಟದ ನಿಗಮ–ಮಂಡಳಿಗಳಿಗೆ ನಾಮನಿರ್ದೇಶನ ಮಾಡಲು ಪ್ರತಿ ವಿಧಾನಸಭಾ ಕ್ಷೇತ್ರದಿಂದ ಓರ್ವ ಮಹಿಳೆ ಸೇರಿ ಇಬ್ಬರನ್ನು ಶಿಫಾರಸು ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಡಿಸಿಸಿ ಬ್ಯಾಂಕ್, ಹಾಲು ಒಕ್ಕೂಟ ಸಹಕಾರ ಸಂಘ ಮತ್ತು ಜಿಲ್ಲಾ ಹಾಪ್‌ಕಾಮ್ಸ್‌ಗೆ ತಲಾ ಒಬ್ಬರು, ಜಿಲ್ಲಾ ಕೆಡಿಪಿಗೆ ಐವರು, ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಆರೋಗ್ಯ ರಕ್ಷಾ ಸಮಿತಿಗೆ ಆರು ಮಂದಿ, ಮಹಾನಗರ ಪಾಲಿಕೆಗೆ ಐವರು, ನಗರಸಭೆ ಮತ್ತು ಪಟ್ಟಣ ಪಂಚಾಯ್ತಿಗೆ ತಲಾ ಮೂವರು, ಪುರಸಭೆಗೆ ಐವರು, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ 6 ಮಂದಿ, ನಗರ ಯೋಜನಾ ಪ್ರಾಧಿಕಾರ, ವಿಧಾನಸಭಾ ಕ್ಷೇತ್ರದ ಪಟ್ಟಣ ಆಶ್ರಯ ಸಮಿತಿ, ಗ್ರಾಮಾಂತರ ಆಶ್ರಯ ಸಮಿತಿ, ಕ್ಷೇತ್ರ ಆರಾಧನ ಸಮಿತಿ ಹಾಗೂ ತಾಲೂಕು ಭೂನ್ಯಾಯ ಮಂಡಳಿಗೆ ತಲಾ ನಾಲ್ವರು, ತಾಲೂಕು ಕೆಡಿಪಿ ಸಮಿತಿ, ತಾಲೂಕು ಮಟ್ಟದ ಆಸ್ಪತ್ರೆಗಳ ಆರೋಗ್ಯ ರಕ್ಷಾ ಸಮಿತಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಸಲಹಾ ಸಮಿತಿಗೆ ತಲಾ ಆರು ಮಂದಿ ಎಪಿಎಂಸಿ ಮತ್ತು ಟಿಎಪಿಸಿಎಂಎಸ್ ಹಾಗೂ ತಾಲೂಕು ಅಕ್ರಮ–ಸಕ್ರಮ ಸಮಿತಿಗೆ ತಲಾ ಮೂವರನ್ನು ಶಿಫಾರಸು ಮಾಡಬೇಕೆಂದು ಡಿ.ಕೆ. ಶಿವಕುಮಾರ್ ಪತ್ರ ರವಾನಿಸಿದ್ದಾರೆ.

ದೇಶದ ಮೊದಲ ಒಮಿಕ್ರಾನ್ ನಿರ್ದಿಷ್ಟ mRNA ಬೂಸ್ಟರ್ ಲಸಿಕೆ

ನವದೆಹಲಿ, ಜೂ.24– ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಶನಿವಾರ ಕೋವಿಡ್‌ಗಾಗಿ ಒಮಿಕ್ರಾನ್–ನಿರ್ದಿಷ್ಟ mRNA ಆಧಾರಿತ ಬೂಸ್ಟರ್ ಲಸಿಕೆಯನ್ನು ಬಿಡುಗಡೆ ಮಾಡಿದರು.

GEMCOVAC ಎಂಬುದು Omicron–ನಿರ್ದಿಷ್ಟ mRNA–ಆಧಾರಿತ ಬೂಸ್ಟರ್ ಲಸಿಕೆಯಾಗಿದ್ದು ಜೈವಿಕ ತಂತ್ರಜ್ಞಾನ ಇಲಾಖೆ(DBT) ಮತ್ತು ಬಯೋಟೆಕ್ನಾಲಜಿ ಇಂಡಸ್ಟ್ರಿ ರಿಸರ್ಚ್ ಅಸಿಸ್ಟೆನ್ಸ್ ಕೌನ್ಸಿಲ್ (BIRAC)ನಿಂದ ಧನಸಹಾಯದೊಂದಿಗೆ ಜೆನೋವಾ ಸ್ಥಳೀಯ ಪ್ಲಾಟ್‌ಫಾರ್ಮ್ ತಂತ್ರಜ್ಞಾನವನ್ನು ಬಳಸಿಕೊಂಡು ಅಭಿವೃದ್ಧಿ ಪಡಿಸಿದ ಭಾರತದ ಮೊದಲ mRNA ಲಸಿಕೆಯಾಗಿದೆ.

ಕೆಲವು ದಿನಗಳ ಹಿಂದೆ, ಈ ಲಸಿಕೆ ತುರ್ತು ಬಳಕೆಯ ಅಧಿಕಾರಕ್ಕಾಗಿ (EUA) ಡ್ರಗ್ ಕಂಟ್ರೋಲ್ ಜನರಲ್ ಆಫ್ ಇಂಡಿಯಾ (DCGI) ಕಚೇರಿಯಿಂದ ಅನುಮೋದನೆ ಪಡೆಯಿತು.

ಕೋವಿಡ್–19 ಲಸಿಕೆಗಳ ವೇಗವರ್ಧಿತ ಅಭಿವೃದ್ಧಿಗಾಗಿ ಸರ್ಕಾರದ ಆತ್ಮನಿರ್ಭರ್ ಭಾರತ್ 3.0 ಪ್ಯಾಕೇಜ್ ಅಡಿಯಲ್ಲಿ DBT ಮತ್ತು BIRAC ನಿಂದ ಜಾರಿಗೊಳಿಸಲಾದ ಮಿಷನ್ COVID ಸುರಕ್ಷಾ ಬೆಂಬಲದೊಂದಿಗೆ GEMCOVAC-OM ಅಭಿವೃದ್ಧಿಪಡಿಸಿದ ಐದನೇ ಲಸಿಕೆಯಾಗಿದೆ. ತುಲನಾತ್ಮಕವಾಗಿ ಕಡಿಮೆ ಸಮಯದಲ್ಲಿ ಇತರ ಲಸಿಕೆಗಳನ್ನು ತಯಾರಿಸಲು ಈ 'ಭವಿಷ್ಯ–ಸಿದ್ಧ' ತಂತ್ರಜ್ಞಾನ ವೇದಿಕೆಯನ್ನು ಬಳಸಬಹುದು ಎಂದು ಸಿಂಗ್ ಹೇಳಿದರು.

GEMCOVAC-OM ಒಂದು ಥರ್ಮೋಸ್ಟೇಬಲ್

ಇದು ಸೂಜಿ ಮುಕ್ತ ಇಂಜೆಕ್ಷನ್!



ಲಸಿಕೆಯಾಗಿದೆ. ಇತರ ಅನುಮೋದಿತ mRNA–ಆಧಾರಿತ ಲಸಿಕೆಗಳಿಗೆ ಬಳಸಲಾಗುವ ಅಲ್ಟ್ರಾ–ಕೋಲ್ಡ್ ಚೈನ್ ಮೂಲಸೌಕರ್ಯ ಅಗತ್ಯವಿಲ್ಲ. ಈ ಲಸಿಕೆಯನ್ನು ನಿಯೋಜಿಸಲು ಅಸ್ತಿತ್ವದಲ್ಲಿರುವ ಸರಬರಾಜು ಸರಪಳಿ ಮೂಲಸೌಕರ್ಯವು ಸಾಕಾಗುತ್ತದೆ ಎಂದು ಸಿಂಗ್ ಹೇಳಿದರು. ಇದರ ವಿಶಿಷ್ಟ ವೈಶಿಷ್ಟ್ಯವೆಂದರೆ ಈ ಲಸಿಕೆಯನ್ನು ಸೂಜಿ ಚುಚ್ಚುಮದ್ದು ಇಲ್ಲದೆ ನಿರ್ವಹಿಸಬಹುದು.

ಸೂಜಿ–ಮುಕ್ತ ಇಂಜೆಕ್ಷನ್ ಸಾಧನ ವ್ಯವಸ್ಥೆಯನ್ನು ಬಳಸಿಕೊಂಡು ಲಸಿಕೆಯನ್ನು ಒಳ–ಚರ್ಮದ ಮೂಲಕ ವಿತರಿಸಲಾಗುತ್ತದೆ. ಅಧ್ಯಯನದಲ್ಲಿ ಭಾಗವಹಿಸುವವರಲ್ಲಿ, ಇದು ಗಮನಾರ್ಹವಾಗಿ ಹೆಚ್ಚಿನ ಪ್ರತಿರಕ್ಷಣಾ ಪ್ರತಿಕ್ರಿಯೆಗಳನ್ನು ಉಂಟುಮಾಡುತ್ತದೆ ಎಂದು ಹೇಳಿಕೆ ತಿಳಿಸಿದೆ. ಕ್ಲಿನಿಕಲ್ ಫಲಿತಾಂಶವು ಅಪೇಕ್ಷಿತ ಪ್ರತಿರಕ್ಷಣಾ ಪ್ರತಿಕ್ರಿಯೆಗಾಗಿ ವಿಭಿನ್ನ–ನಿರ್ದಿಷ್ಟ ಲಸಿಕೆಗಳ ಅಗತ್ಯವನ್ನು ತೋರಿಸುತ್ತದೆ ಎಂದು ಅದು ಹೇಳಿದೆ.

ಮೈಸೂರು ಮಿತ್ರ

ಮಂಡಕಳ್ಳಿ ಬಳಿ ಡಾ.ಅಂಬೇಡ್ಕರ್ ವಸತಿ ಶಾಲೆ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಿ

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೂಚನೆ



ಮೈಸೂರು, ಜೂ.24(ಆರ್‌ಕೆ)– ಮೈಸೂರು ಹೊರ ವಲಯದ ಮಂಡಕಳ್ಳಿ ಬಳಿ ಡಾ. ಅಂಬೇಡ್ಕರ್ ವಸತಿ ಶಾಲೆ ನಿರ್ಮಿಸಲು ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಅವರು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡರಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ಗಾಂಧಿನಗರದ ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಒದಗಿಸುತ್ತಿರುವ ಮೂಲ ಸೌಕರ್ಯಗಳ ಬಗ್ಗೆ ಇಂದು ಪರಿಶೀಲನೆ ನಡೆಸಿದ ಅವರು, ಬಾಡಿಗೆ ಕಟ್ಟಡದಲ್ಲಿ ಸ್ಥಳಾವಕಾಶದ ತೊಂದರೆ ಇರುವುದನ್ನು ಗಮನಿಸಿ ತಕ್ಷಣಕ್ಕೆ ತಾತ್ಕಾಲಿಕವಾಗಿ ಬೇರೆ ದೊಡ್ಡ ಕಟ್ಟಡಕ್ಕೆ ಶಾಲೆ ಸ್ಥಳಾಂತರಿಸುವಂತೆ ಸಲಹೆ ನೀಡಿದರು.

ಮಂಡಕಳ್ಳಿ ಬಳಿ ಇರುವ ಸರ್ಕಾರಿ ಜಾಗದಲ್ಲಿ ಡಾ.ಅಂಬೇಡ್ಕರ್ ವಸತಿ ಶಾಲಾ ಕಟ್ಟಡ ನಿರ್ಮಿಸಲು ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರಲ್ಲದೆ, ಪರಿಶಿಷ್ಟ ಜಾತಿಯ ಅಲೆಮಾರಿ ಜನಾಂಗಕ್ಕೆ ಸೇರಿದ ಮಕ್ಕಳೇ ಹೆಚ್ಚಾಗಿರುವ ವಸತಿ ಶಾಲೆಗಳಿಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಲು ಕ್ರಮ ವಹಿಸುವಂತೆ ಸಲಹೆ ನೀಡಿದರು. ಮಕ್ಕಳನ್ನು ಶಾಲೆಗೆ ಬಿಟ್ಟು ಬೇರೆ ಊರುಗಳಲ್ಲಿ ಕೂಲಿ ಕೆಲಸ, ವ್ಯಾಪಾರಕ್ಕೆಂದು ಪೋಷಕರು ಹೋಗುತ್ತಾರೆ. ಅಂತಹವರಿಗಾಗಿ ಸುಸಜ್ಜಿತ ವಸತಿ ಶಾಲೆಯ ಅಗತ್ಯವಿದೆ. ಶಾಲೆಗೆ ಶಿಕ್ಷಕರು, ಪೀಠೋಪಕರಣ, ಬೋಧನಾ ಸಾಮಗ್ರಿ, ವಸತಿ–ಊಟಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸಬೇಕಾದುದು ಇಲಾಖೆಯ ಜವಾಬ್ದಾರಿಯಾಗಿದೆ ಎಂದು ಗಾಯತ್ರಿ ಅವರು ಇದೇ ಸಂದರ್ಭ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಮೈಸೂರಲ್ಲಿ ವಾಕಥಾನ್ ಮೂಲಕ ವಿಶಿಷ್ಟ ಕಾಯಿಲೆ ಬಗ್ಗೆ ಜಾಗೃತಿ



ಮೈಸೂರು, ಜೂ.24(ಆರ್‌ಕೆ)–ನಾನ್ ಆಲ್ಕೋಹಾಲಿಕ್ ಸ್ಟಿಟೋ ಹೆಪಾಟಿಟಿಸ್ (NASH) ದಿನದ ಅಂಗವಾಗಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ವತಿಯಿಂದ ಶನಿವಾರ ಮೈಸೂರಲ್ಲಿ ನಾನ್ ಆಲ್ಕೋಹಾಲ್ ಫ್ಯಾಟಿಲಿಟರ್ ಡಿಸೀಸಸ್ (NAFLD) ಕುರಿತು ಜಾಗೃತಿ ಮೂಡಿಸಲು ವಾಕಥಾನ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಗ್ಯಾಸ್ಟ್ರೋ ಎಂಟರಾಲಜಿ ವಿಭಾಗ ಹಾಗೂ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ಸಂಯುಕ್ತಾಶ್ರಯದಲ್ಲಿ ನಡೆದ ವಾಕಥಾನ್ ಕಾರ್ಯಕ್ರಮಕ್ಕೆ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಚಾಮರಾಜ ಸರ್ಕಲ್, ಹಾರ್ಡಿಂಜ್ ಸರ್ಕಲ್, ಜೆಎಸ್‌ಎಸ್ ಮಹಾವಿದ್ಯಾಪೀಠ ಸರ್ಕಲ್, ಸಯ್ಯಾಜಿರಾವ್ ರಸ್ತೆ ಮೂಲಕ ಸಾಗಿದ ವಾಕಥಾನ್ ಕೆ.ಆರ್. ಸರ್ಕಲ್‌ನಲ್ಲಿ ಅಂತ್ಯವಾಯಿತು. ನಾನ್ ಆಲ್ಕೋಹಾಲಿಕ್ ಫ್ಯಾಟಿ ಲಿವರ್ ಡಿಸೀಸಸ್ ಮತ್ತು ನಾನ್ ಆಲ್ಕೋಹಾಲಿಕ್ ಸ್ಟಿಟೋ ಹೆಪಾಟಿಟಿಸ್ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಆರೋಗ್ಯ ರಕ್ಷಿಸಿಕೊಳ್ಳುವಂತೆ ಅರಿವು ಮೂಡಿಸಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟ್‌ಸೂರಮಠ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಗ್ಯಾಸ್ಟ್ರೋ ಎಂಟರಾಲಜಿ ವಿಭಾಗದ ಮುಖ್ಯಸ್ಥ ಡಾ. ದೀಪಕ್, ಓರಲ್ ಪೆಥಾಲಜಿ ಅಂಡ್ ಮೈಕ್ರೋಬಯಾಲಜಿ ಮುಖ್ಯಸ್ಥೆ ಡಾ. ಉಷಾ ಹೆಗ್ಡೆ ಸೇರಿದಂತೆ ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ವಾಕಥಾನ್‌ನಲ್ಲಿ ಭಾಗವಹಿಸಿದ್ದರು.

ಸಂಚಾರಿ ಜಾಗೃತಿ ನಡುವೆಯೂ ಪ್ರಕರಣಗಳ ಸಂಖ್ಯೆ ಹೆಚ್ಚಳ

ಮೈಸೂರಿನಲ್ಲಿ ಮೇ ತಿಂಗಳ ಅಂತ್ಯದವರೆಗೆ 3 ಲಕ್ಷಕ್ಕೂ ಹೆಚ್ಚು ಪ್ರಕರಣ ದಾಖಲು

ಮೈಸೂರು,ಜೂ.24(ಜಿಎ)–ಸಂಚಾರಿ ನಿಯಮದ ಬಗ್ಗೆ ಸಾಕಷ್ಟು ಜಾಗೃತಿ ಕಾರ್ಯಕ್ರಮಗಳು ನಡೆಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ.

ಮೇ ತಿಂಗಳ ಅಂತ್ಯದೊಳಗೆ ಮೈಸೂರಿನಲ್ಲಿ ವಿವಿಧ ಸಂಚಾರಿ ನಿಯಮ ಉಲ್ಲಂಘನೆಯ 3 ಲಕ್ಷಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ.

ಪ್ರತಿ ವರ್ಷವೂ ಪೊಲೀಸ್ ಇಲಾಖೆ ಮತ್ತು ವಿವಿಧ ಸಂಘ–ಸಂಸ್ಥೆಗಳಿಂದ ಸಂಚಾರಿ ನಿಯಮ ಪಾಲನೆ ಕುರಿತಂತೆ ಸಾಕಷ್ಟು ಜಾಗೃತಿ ಕಾರ್ಯಕ್ರಮ ಆಯೋಜಿಸಿದರೂ ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. 2021ರಲ್ಲಿ 12,28,285 ಪ್ರಕರಣ ಮತ್ತು 2022ರಲ್ಲಿ 10,30,771 ಪ್ರಕರಣಗಳು ದಾಖಲಾಗಿವೆ.

ಈ ವರ್ಷ ಈಗಾಗಲೇ ಹೆಲ್ಮೆಟ್ ಧರಿಸದೆ ವಾಹನ ಚಾಲನೆ, ಹಿಂಬದಿ ಸವಾರರು ಹೆಲ್ಮೆಟ್ ಧರಿಸದೆ ಇರುವುದು, ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ, ಡ್ರಂಕ್ ಅಂಡ್ ಡ್ರೈವ್, ಸೀಟ್ ಬೆಲ್ಟ್ ಧರಿಸದೆ ಸಂಚಾರ, ನೋ ಪಾರ್ಕಿಂಗ್, ದೋಷಿತ ನಂಬರ್ ಪ್ಲೇಟ್, ನೋ ಎಂಟ್ರಿ, ಟ್ರಿಪಲ್ ರೈಡಿಂಗ್ ಹಾಗೂ ಇತರ ಸಂಚಾರಿ ನಿಯಮ ಉಲ್ಲಂಘನೆಯ 3,94,394 ಪ್ರಕರಣಗಳು ಸೇರ್ಪಡೆಗೊಂಡಿವೆ. ಇದು ಮೇ ತಿಂಗಳ ಅಂತ್ಯದವರೆಗಿನ ಲೆಕ್ಕಾಚಾರ.

ಪ್ರಕರಣಗಳ ಸಂಖ್ಯೆ (ಮೇ ಅಂತ್ಯದೊಳಗೆ): ಓವರ್ ಸ್ಪೀಡ್– 474, ಡ್ರಂಕ್ ಅಂಡ್ ಡ್ರೈವ್–383, ಮೊಬೈಲ್ ಬಳಕೆ–119, ನೋ ಎಂಟ್ರಿ–1,600, ಸೇಫ್ಟಿ ಬೆಲ್ಟ್ ಧರಿಸದೆ ವಾಹನ ಚಾಲನೆ– 2,509, ನೋ ಪಾರ್ಕಿಂಗ್–507, ಟ್ರಿಪಲ್ ರೈಡಿಂಗ್–1,333, ದೋಷಪೂರಿತ ನಂಬರ್ ಪ್ಲೇಟ್– 1,492, ವಾಹನ ವಿಮೆ ಇಲ್ಲದಿರುವುದು–223, ವಾಹನ ಚಾಲನ ಪರವಾನಗಿ ಇಲ್ಲದೆ–260 ಮತ್ತು ಇತರೆ ಸಂಚಾರಿ ನಿಯಮ ಉಲ್ಲಂಘನೆಯಿಂದ 1,142 ಪ್ರಕರಣಗಳಾಗಿವೆ.

ಹೆಲ್ಮೆಟ್ ಧರಿಸದ ಪ್ರಕರಣಗಳೇ ಹೆಚ್ಚು: ದ್ವಿಚಕ್ರ ವಾಹನಗಳ ಸವಾರರು ಹೆಲ್ಮೆಟ್ ಧರಿಸದೇ ಇರುವುದೇ ಹೆಚ್ಚಾಗಿದೆ. ಅಪಘಾತಗಳ ಸಂದರ್ಭದಲ್ಲಿ ಪ್ರಮುಖವಾಗಿ ವಾಹನ ಸವಾರರು ಮತ್ತು ಹಿಂಬದಿ ಸವಾರರು ಹೆಲ್ಮೆಟ್ ಧರಿಸದೇ ತಲೆಗೆ ಪೆಟ್ಟಾಗಿ ಪ್ರಾಣ ಕಳೆದುಕೊಂಡಿರುವ ಪ್ರಕರಣಗಳು ಸಾಕಷ್ಟಿವೆ. ಆದರೂ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಲು ಹಿಂದೇಟು ಹಾಕುತ್ತಿದ್ದಾರೆ.

ಹೆಲ್ಮೆಟ್ ರಹಿತ ವಾಹನ ಚಾಲನೆ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. 2021ರಲ್ಲಿ 55,672, 2022ರಲ್ಲಿ 51,649 ಮತ್ತು 2023ರ ಮೇ ತಿಂಗಳ ಅಂತ್ಯದೊಳಗೆ 19,142 ಪ್ರಕರಣಗಳು ದಾಖಲಾಗಿವೆ. ಹಿಂಬದಿ ಸವಾರರು ಹೆಲ್ಮೆಟ್ ಧರಿಸದೆ ಸಂಚರಿಸಿರುವ ಪ್ರಕರಣಗಳ ಸಂಖ್ಯೆ ಹೀಗಿದೆ. 2021ರಲ್ಲಿ 30,020, 2022ರಲ್ಲಿ 33,175 ಮತ್ತು 2023ರಲ್ಲಿ 17,057 ಪ್ರಕರಣಗಳು ದಾಖಲಾಗಿವೆ.

ಇನ್‌ಫೋಸಿಸ್ ಉದ್ಯೋಗಿ ಮನೆಯಲ್ಲಿ ನಗದು, ಚಿನ್ನಾಭರಣ ಕಳ್ಳತನ

ಮೈಸೂರು, ಜೂ. 24– ಹಾಡಹಗಲೇ ಮೈಸೂರು ವಿಜಯನಗರ 4ನೇ ಹಂತದಲ್ಲಿರುವ ಇನ್‌ಫೋಸಿಸ್ ಉದ್ಯೋಗಿಯೊಬ್ಬರ ಮನೆಯ ಹಿಂಬಾಗಿಲು ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಲಾಗಿದೆ.

ಇನ್‌ಫೋಸಿಸ್‌ನಲ್ಲಿ ಫೆಸಿಲಿಟಿ ಎಕ್ಸಿಕ್ಯೂಟಿವ್ ಆಗಿರುವ ಬಿ. ನಾರಾಯಣ್ (50) ಚಿನ್ನಾಭರಣ ಹಾಗೂ ನಗದು ಕಳೆದುಕೊಂಡವರಾಗಿದ್ದು, ಇವರು ಜೂನ್ 23ರಂದು ಬೆಳಗ್ಗೆ ಕಚೇರಿಗೆ ತೆರಳಿದ್ದಾರೆ. ಇವರ ಪುತ್ರ ಸಾಗರ್ ಕಾಲೇಜಿಗೆ ಹೋಗಿದ್ದು, ಪತ್ನಿ ನಾಗರೇಖ ಅವರು ಬೆಳಗ್ಗೆ 11.30ಕ್ಕೆ ಮನೆಗೆ ಬೀಗ ಹಾಕಿಕೊಂಡು ಯಾದವಗಿರಿಯಲ್ಲಿರುವ ನಾರಾಯಣ್ ಅವರ ತಾಯಿ ಮನೆಗೆ ಹೋಗಿದ್ದಾರೆ. ಅಂದು ಸಂಜೆ 4.30ರ ಸುಮಾರಿನಲ್ಲಿ ಕಾಲೇಜಿನಿಂದ ಹಿಂತಿರುಗಿದ ಸಾಗರ್, ನೋಡಿದಾಗ ಮನೆಯ ಹಿಂಬಾಗಿಲಿನ ಡೋರ್‌ಲಾಕ್ ಮುರಿದು ಒಳನುಗ್ಗಿರುವ ಖದೀಮರು 2 ಬೆಡ್ ರೂಂಗಳಲ್ಲಿನ ವಾರ್ಡ್‌ರೋಬ್ ಮೀಟಿ 200 ಗ್ರಾಂ ತೂಕದ ಚಿನ್ನಾಭರಣ ಹಾಗೂ 20,000 ರೂ. ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ; ಸವಾರ ಸಾವು

ಮೈಸೂರು, ಜೂ. 24– ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಹೋಟೆಲ್ ಕೋರಂ ಮುಂಭಾಗ ಸಂಭವಿಸಿದೆ. ಮೈಸೂರಿನ ರಾಜೀವ್‌ನಗರ ನಿವಾಸಿ ಬಿ.ವಿ. ವೆಂಕಟರಮಣ(50) ಅಪಘಾತದಲ್ಲಿ ಸಾವಿಗೀಡಾದವರಾಗಿದ್ದು, ಇವರು ಜೂನ್ 21ರಂದು ಸಂಜೆ 6.30ರ ಸುಮಾರಿನಲ್ಲಿ ತಮ್ಮ ಬೈಕ್‌ನಲ್ಲಿ (ಕೆಎ 45–ಹೆಚ್ 8447) ಕಲಾಮಂದಿರದ ಕಡೆಯಿಂದ ಮೆಟ್ರೋಪೋಲ್ ಸರ್ಕಲ್ ಕಡೆಗೆ ಅತೀ ವೇಗವಾಗಿ ಬರುತ್ತಿದ್ದಾಗ ನಿಯಂತ್ರಣ ತಪ್ಪಿದ ಬೈಕ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ವೆಂಕಟರಮಣ ಅವರು ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಅಂದು ರಾತ್ರಿ 9 ಗಂಟೆ ಸುಮಾರಿನಲ್ಲಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ದೇವರಾಜ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರಿನ ಇಎಸ್‌ಐ ಆಸ್ಪತ್ರೆಯ ಸಿಬ್ಬಂದಿಗಳಿಗೆ ಜಿಲ್ಲಾ ಕ್ಷಯ ರೋಗ ನಿಯಂತ್ರಣ ಅಧಿಕಾರಿ ಡಾ. ಮೊಹಮ್ಮದ್ ಸಿರಾಜ್ ಅಹಮದ್ ಕೇಂದ್ರ ಸರ್ಕಾರ ಹೇಳಿದಂತೆ 2025ಕ್ಕೆ ಕ್ಷಯ ರೋಗ ಮುಕ್ತ ಮಾಡುವ ಉದ್ದೇಶದಿಂದ ಎಲ್ಲಾ ಸಿಬ್ಬಂದಿಗಳಿಗೆ ತರಬೇತಿ ನೀಡಿದರು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ರಮೇಶ್, ಡಾ.ಶಿವಕುಮಾರ್, ಆರ್‌ಎಂಓ ಚಂದ್ರಕಲಾ, ಗೋಪಾಲ್ ಸಿಬ್ಬಂದಿಗಳು ಹಾಜರಿದ್ದರು.

ಮೈಸೂರಲ್ಲಿ ಬಿಸಿಯೂಟ ನೌಕರರ ಫೆಡರೇಷನ್ ಸಭೆ: ವೇತನ ಹೆಚ್ಚಳಕ್ಕೆ ಆಗ್ರಹ

ಮೈಸೂರು, ಜೂ.24(ಬಿಎಲ್‌ಯು)– ಮೈಸೂರಿನಲ್ಲಿ ಇಂದು ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ನೌಕರರ ಫೆಡರೇಷನ್‌ನ ರಾಜ್ಯ ಸಮಿತಿ ಸಭೆ ನಡೆಯಿತು. ಸರ್ಕಾರದ ಮಟ್ಟದಲ್ಲಿ ತಮ್ಮ ಬೇಡಿಕೆ ಈಡೇರಿಸಿಕೊಳ್ಳುವ ಕುರಿತಂತೆ ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು.

ಕರ್ನಾಟಕ ರಾಜ್ಯದಲ್ಲಿ 1.20 ಲಕ್ಷ ಅಡುಗೆ ತಯಾರಕರು ಹಾಗೂ ಸಹಾಯಕರು ಇದ್ದಾರೆ. ಬಿಸಿಯೂಟ ತಯಾರು ಮಾಡುವ ಅಡುಗೆಯವರಿಗೆ 3700 ರೂಪಾಯಿ ಹಾಗೂ ಸಹಾಯಕರಿಗೆ 3600 ರೂಪಾಯಿ ವೇತನ ದೊರೆಯುತ್ತಿದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಒಂದು ಸಾವಿರ ರೂಪಾಯಿ ವೇತನ ಹೆಚ್ಚಳ ಘೋಷಣೆ ಮಾಡಿದ್ದರು. ಆದರೆ ಇನ್ನು ಅದು ಜಾರಿಯಾಗಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ 3 ಸಾವಿರ ರೂಪಾಯಿ ಹೆಚ್ಚಳ ಮಾಡುವುದಾಗಿ ಕಾಂಗ್ರೆಸ್ ನಾಯಕಿ ಪ್ರಿಯಾಂಕ ವಾದ್ರಾ ಭರವಸೆ ನೀಡಿದ್ದರು.

ಆದರೆ ಈ ತನಕ ನಮ್ಮ ಯಾವುದೇ ಬೇಡಿಕೆ ಈಡೇರಿಲ್ಲ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ತಮ್ಮ ಬೇಡಿಕೆ ಈಡೇರಿಸುವಂತೆ ಮನವಿ ಮಾಡಲು ಸಭೆಯಲ್ಲಿ ತೀರ್ಮಾನ ಮಾಡಲಾಯಿತು.

ಫೆಡರೇಷನ್‌ನ ರಾಜ್ಯಾಧ್ಯಕ್ಷ ಪೊನ್ನಪ್ಪ, ಪ್ರಧಾನ ಕಾರ್ಯದರ್ಶಿ ಅವರೆಗೆರೆ ಚಂದ್ರು, ಪದಾಧಿಕಾರಿಗಳಾದ ಪ್ರಭಾಮಣಿ, ಸಣ್ಣಮ್ಮ, ಜಯಂತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶ್ರೀ ಮಹದೇವಸ್ವಾಮಿಗಳಿಗೆ ವಚನಗ್ರಾಮ ಪ್ರಮಾಣ ಪತ್ರ ಪ್ರದಾನ



ಮೈಸೂರು, ಜೂ. 24– ವಚನಗಳನ್ನು ಅರಿತು ಬಾಳಿದರೆ ಪ್ರತೀ ಗ್ರಾಮ ಕಲ್ಯಾಣ ಗ್ರಾಮ ಆಗುತ್ತವೆ ಎಂದು ಶರಣು ವಿಶ್ವ ವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಡಾ. ಫ.ಗು ಹಳಕಟ್ಟಿಯವರ ಸ್ಮರಣಾರ್ಥ ಎನ್. ಶಿವಪ್ರಸಾದ್ ಅವರ ದತ್ತಿ ಅಂಗವಾಗಿ ಬಿ. ಮಲ್ಲಯ್ಯನಪುರ ಗ್ರಾಮದಲ್ಲಿ ಆಯೋಜಿಸಿದ್ದ ವಚನಗ್ರಾಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶರಣರ ಕಾಯಕ ತತ್ವ, ಪ್ರಸಾದ ತತ್ವ ಮತ್ತು ದಾಸೋಹ ತತ್ವ ಅಳವಡಿಸಿಕೊಂಡು ಜೀವನ ಸಾಗಿಸಿದ್ದೇ ಆದರೆ ಪ್ರತಿಯೊಬ್ಬರಲ್ಲೂ ಆತ್ಮವಿಶ್ವಾಸ ವೃದ್ಧಿಯಾಗಿ ಸಾರ್ಥಕ ಜೀವನ ಬಾಳಲು ಸಹಾಯಕವಾಗುತ್ತದೆ. ನಾವು ಇಹ ಲೋಕ ತ್ಯಜಿಸಿದ ಮೇಲೆ ಸ್ವರ್ಗ ನರಕಗಳನ್ನು ಪ್ರವೇಶಿಸುತ್ತೇವೆ ಎಂಬುದು ಸುಳ್ಳು ಕಲ್ಪನೆ. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ ಎಂದು ಹೇಳಿದ ಬಸವಣ್ಣನವರ ವಚನ ಅರ್ಥೈಸಿಕೊಂಡರೆ ಧರೆಯ ಮೇಲೆ ನಾವು ಅನುಭವಿಸುವ ಸಂತಸದ ಕ್ಷಣಗಳು, ನೋಡುವ ಒಳ್ಳೆಯ ಘಟನೆಗಳೇ ಸ್ವರ್ಗ. ಕೆಟ್ಟ ಕ್ಷಣ ಅನುಭವಿಸುವುದು ಮತ್ತು ಕೆಟ್ಟ ಘಟನೆಗಳನ್ನು ನೋಡುವುದೇ ನರಕ ಎಂದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಾಮರಾಜನಗರ ಜಿಲ್ಲಾ ಘಟಕದ ಅಧ್ಯಕ್ಷ ಜಿ ಗುರುಸ್ವಾಮಿ ಮಾತನಾಡಿ, ಪ್ರತೀ ಗ್ರಾಮದಲ್ಲಿ ರೈತರ ಸಂಕಷ್ಟಕ್ಕೆ ಮಿಡಿಯುವಂತಹ ಕೆರೆಗಳನ್ನು ತುಂಬಿಸುವ ಕಲ್ಪನೆ ನನಗೆ ಪ್ರಾರಂಭವಾದದ್ದೇ ಶರಣರ ವಚನದಿಂದ. ಡಾ. ಫ.ಗು ಹಳಕಟ್ಟಿರವರು ವಚನ ಸಾಹಿತ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ತಾಳೆಗರಿಯಲ್ಲಿದ್ದ ವಚನಗಳನ್ನು ಪುಸ್ತಕದ ರೂಪದಲ್ಲಿ ನೀಡಿದ್ದರ ಪರಿಣಾಮವಾಗಿ ಇಂದು ನಾವು ವಚನಗ್ರಾಮ ಕಾರ್ಯಕ್ರಮ ಮಾಡಲು ಸಾಧ್ಯವಾಗಿದೆ. ಡಾ. ಫ.ಗು.ಹಳಕಟ್ಟಿಯವರ ಮುಂದುವರೆದ ಭಾಗವಾಗಿ ಇಂದಿನ ಆಧುನಿಕ ಯುಗದಲ್ಲಿ ವಚನ ಸಾಹಿತ್ಯವನ್ನು ಗ್ರಾಮದ ಪ್ರತೀ ಮನೆ ಮನೆಗೆ ಉಚಿತವಾಗಿ ಪುಸ್ತಕ ವಿತರಿಸಿ ವಚನ ಜಾಗೃತಿ ಕಾರ್ಯಕ್ರಮ ಮಾಡುತ್ತಿರುವ ವಚನ ಕುಮಾರಸ್ವಾಮಿ ಮತ್ತು ರೂಪ ಕುಮಾರಸ್ವಾಮಿ ದಂಪತಿಗಳ ಕಾರ್ಯ ಶ್ಲಾಘನೀಯ ಎಂದರು.

ನಂತರ ಪ್ರತೀ ಮನೆಗೆ ವಚನ ಪುಸ್ತಕ ವಿತರಿಸಿ ವಚನಗ್ರಾಮ ಎಂದು ಘೋಷಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಗುರುಮಲ್ಲೇಶ್ವರ ಮಠದ ಶ್ರೀ ಮಹದೇವಸ್ವಾಮಿಗಳು, ದತ್ತಿ ದಾಸೋಹಿ ಎನ್. ಶಿವಪ್ರಸಾದ್, ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ, ಉಪಾಧ್ಯಕ್ಷ ಶಿವಪುರ ಉಮಾಪತಿ, ವಿಶ್ವಬಸವಸೇನೆ ಅಧ್ಯಕ್ಷ ಬಸವ ಯೋಗೀಶ್, ಗ್ರಾಮದ ಗೌಡಿಕೆ ಮಹೇಶ್, ಗೌಡಿಕೆ ರಾಜಮೂರ್ತಿ, ನಿವೃತ್ತ ಶಿಕ್ಷಕ ಹರವೆ ಬಿ.ಮಾದಪ್ಪ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು

ಅಂಚೆ ಚೀಟಿ ಸಂಗ್ರಹ ಉತ್ತಮ ಹವ್ಯಾಸ



ಮೈಸೂರು, ಜೂ. 24– ಅಂಚೆ ಚೀಟಿ ಸಂಗ್ರಹ ಉತ್ತಮ ಹವ್ಯಾಸವಾಗಿದ್ದು ಜ್ಞಾನಾರ್ಜನೆ ಹೆಚ್ಚಿಸುತ್ತದೆ ಎಂದು ಮೈಸೂರು ಅಂಚೆ ವಿಭಾಗದ ಡೆಪ್ಯುಟಿ ಎಸ್.ಪಿ.ಸುನಿಲ್ ಎಸ್ ಹಳಪೇಟಿ ಹೇಳಿದರು. ಅವರು ಮೈಸೂರಿನ ಟೀಚರ್ಸ್ ಲೇಔಟ್‌ನಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಅಂಚೆ ಸಂಗ್ರಹ ಹವ್ಯಾಸದ ಕುರಿತಾದ ಫಿಲಾಟಲಿ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಅಂಚೆ ಚೀಟಿ ಸಂಗ್ರಹ ಹವ್ಯಾಸದ ಜೊತೆಗೆ ಹೂಡಿಕೆ ಕೂಡ ಆಗಿದೆ. ಸಂಗ್ರಹಿಸುವ ಅಂಚೆ ಚೀಟಿಗಳ ಬೆಲೆಯೂ ಕೂಡ ಅಧಿಕವಾಗುತ್ತಾ ಹೋಗುತ್ತದೆ ಎಂದು ತಿಳಿಸಿದರು.

ಅಂಚೆ ಇಲಾಖೆಯಲ್ಲಿ ದೊರೆಯುವ ವಿವಿಧ ಉಳಿತಾಯ ಯೋಜನೆಗಳ ಕುರಿತು ವಿವರಿಸಿದ ಅವರು, ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ ಮಹಿಳಾ ಸಮ್ಮಾನ್ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದ್ದು, ಇದಕ್ಕೆ ಶೇ.7.5ರಷ್ಟು ಬಡ್ಡಿ ದರವಿದ್ದು ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಹೇಳಿದರು.

ಫಿಲಾಟಲಿ ಖಾತೆಯನ್ನು ತೆರೆಯುವುದರಿಂದ ವಿದ್ಯಾರ್ಥಿಗಳಿಗೆ ದೊರೆಯುವ ಲಾಭಗಳನ್ನು ವಿವರಿಸಿದ ಮೈಸೂರು ಅಂಚೆ ವಿಭಾಗ ಮಾರ್ಕೆಟಿಂಗ್ ಎಕ್ಸಿಕ್ಯುಟಿವ್ ಡಾ.ಸುರೇಶ್ ಕುಮಾರ್, ಪ್ರಸ್ತುತ 5 ಕೋಟಿಗೂ ಅಧಿಕ ಸಂಖ್ಯೆಯ ಅಂಚೆ ಸಂಗ್ರಹಕಾರರು ಇದ್ದಾರೆ ಎಂದು ತಿಳಿಸಿ, ಫಿಲಾಟಲಿ ಕ್ಲಬ್‌ನ ಸದಸ್ಯರಾಗುವ ಶಾಲಾ ಮಕ್ಕಳಿಗಾಗಿ ಭಾರತ ಸರ್ಕಾರ ಜಾರಿಗೆ ತಂದಿರುವ ದೀನ್ ದಯಾಳ್ ಸ್ಪರ್ಶ್ ಸ್ಕಾಲರ್‌ಷಿಪ್ ಯೋಜನೆಯ ಕುರಿತು ಮಕ್ಕಳಿಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರಾದ ಎಂ.ಆಶಾ, ಮೈಸೂರು ಅಂಚೆ ವಿಭಾಗೀಯ ಕಚೇರಿಯ ಬ್ಯುಸಿನೆಸ್ ಡೆವಲಪ್‌ಮೆಂಟ್ ವಿಭಾಗದ ಸಹಾಯಕ ಶ್ರೀಧರ್ ಉಪಸ್ಥಿತರಿದ್ದರು. ಶ್ರೀಮತಿ ಸುಮಾ ಎಂ.ಎಸ್.ಸ್ವಾಗತಿಸಿ, ಸತ್ಯನಾರಾಯಣ ವಂದನಾರ್ಪಣೆ ನೆರವೇರಿಸಿದರು.



ಶುಕ್ರವಾರ ಮೈಸೂರಿಗೆ ಭೇಟಿ ನೀಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಅವರ ಅಭಿಮಾನಿಗಳು ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಅದ್ದೂರಿಯಾಗಿ ಸ್ವಾಗತಿಸಿ, ಅಭಿನಂದಿಸಿದರು. ಉದ್ಬೂರು ಕೃಷ್ಣ, ಶಿವು ರಮ್ಮನಹಳ್ಳಿ, ಗೋಪಾಲ್, ಲೋಕಿ, ರವಿ ಮುಂತಾದವರು ಹಾಜರಿದ್ದರು.

ಡಾ.ಸುವೇಂದು ಭಟ್ಟಾಚಾರ್ಯರ 'ಇನ್ಸಿಗ್ನಿಫಿಕೆಂಟ್ ಪೀಪಲ್' ಪುಸ್ತಕ ಜೂ. 27ರಂದು ಬಿಡುಗಡೆ

ಮೈಸೂರು, ಜೂ. 24– ಮೈಸೂರಿನ ಸಿಎಫ್‌ಟಿಆರ್‌ಐನ ನಿವೃತ್ತ ಚೀಫ್ ಸೈಂಟಿಸ್ಟ್ ಡಾ.ಸುವೇಂದು ಭಟ್ಟಾಚಾರ್ಯ ಅವರ 'ಇನ್ಸಿಗ್ನಿಫಿಕೆಂಟ್ ಪೀಪಲ್' ಪುಸ್ತಕವನ್ನು ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ಡಾ.ಜಿ.ಸಿ.ಪ್ರಕಾಶ್ ಅವರು ಜೂನ್ 27 (ಮಂಗಳವಾರ)ರಂದು ಸಂಜೆ 5.15ಕ್ಕೆ ಮೈಸೂರಿನ ವಿನೋಬಾ ರಸ್ತೆಯ ಹೋಟೆಲ್ ಸದರನ್ ಸ್ಟಾರ್‌ನ ದರ್ಬಾರ್ ಹಾಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಿದ್ದಾರೆ.

ಮಹರ್ಷಿ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ಸಾಧನೆ



ಮಹರ್ಷಿ ಸಂಸ್ಥೆಯ ವಿದ್ಯಾರ್ಥಿಗಳು, ಮೈಸೂರಿನ ರೇಡಿಯಂಟ್ ಸ್ಪೋರ್ಟ್ಸ್ ವತಿಯಿಂದ ಆಯೋಜಿಸಿದ್ದ ಮ್ಯಾರಥಾನ್ ಓಟ ವಿಭಾಗದಲ್ಲಿ ಭಾಗವಹಿಸಿ ಪದಕ ಮತ್ತು ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ. ಮಹರ್ಷಿ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ವಿಶ್ವಸ್ಥ ಡಾ.ಭವಾನಿಶಂಕರ್, ಗೋಪಾಲಸ್ವಾಮಿ ಮತ್ತು ವಿದ್ಯಾರ್ಥಿಗಳನ್ನು ಚಿತ್ರದಲ್ಲಿ ಕಾಣಬಹುದು

ವಾಣಿಜ್ಯ ಪದವೀಧರರಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶ

ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ ಉದ್ಘಾಟಿಸಿ ಪ್ರಾದೇಶಿಕ ವ್ಯವಸ್ಥಾಪಕ ಕೋಟ ಜನಾರ್ಧನ್ ಮಾಹಿತಿ



ಮೈಸೂರು, ಜೂ. 24– ವಾಣಿಜ್ಯ ಪದವೀಧರರಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳಿದ್ದು, ಅದನ್ನು ದಕ್ಕಿಸಿಕೊಳ್ಳಲು ನಿರಂತರ ಪ್ರಯತ್ನ ಮಾಡುವಂತೆ ಮೈಸೂರಿನ ಎಸ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕ ಕೋಟ ಜನಾರ್ದನ್ ಕರೆ ನೀಡಿದರು.

ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಕೆರಿಯರ್ ಗೈಡೆನ್ಸ್ ಮತ್ತು ಪ್ಲೇಸ್‌ಮೆಂಟ್ ಸೆಲ್, ಐಕ್ಯುಎಸಿ ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಒಂದು ದಿನದ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ಪದವೀಧರರು ಐಬಿಪಿಎಸ್ ನಂತಹ ನೇಮಕಾತಿ ಸಂಸ್ಥೆಗಳ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಸರಿಯಾದ ಕ್ರಮದಲ್ಲಿ ಪ್ರಯತ್ನಪಟ್ಟರೆ ಸುಲಭವಾಗಿ ಬ್ಯಾಂಕ್‌ನಲ್ಲಿ ಉದ್ಯೋಗವನ್ನು ಪಡೆಯಬಹುದು ಎಂದರು.

ಭಾರತದ ಬ್ಯಾಂಕುಗಳ ಇತಿಹಾಸದಲ್ಲಿ ಕರ್ನಾಟಕದ ಪಾಲು ದೊಡ್ಡದು. ಇಲ್ಲಿ ಅತೀ ಹೆಚ್ಚು ಬ್ಯಾಂಕುಗಳು ಸ್ಥಾಪನೆಯಾಗಿದ್ದು, ದೇಶಾದ್ಯಂತ ಸಾವಿರಾರು ಬ್ರ್ಯಾಂಚ್‌ಗಳಿವೆ. ಈ ಮೂಲಕ ನೂರು ವರ್ಷಗಳಿಂದಲೂ ಆರ್ಥಿಕ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ ಎಂದು ವಿವರಿಸಿದರು.

ಕಾಲೇಜಿನ ಪ್ಲೇಸ್‌ಮೆಂಟ್ ಅಧಿಕಾರಿ ಡಾ.ನಿರಂಜನಬಾಬು ಪ್ರಾಸ್ತಾವಿಕವಾಗಿ ಮಾತನಾಡಿ, ಮಹಿಳಾ ಪದವೀಧರರಿಗೆ ಬ್ಯಾಂಕಿಂಗ್ ಕ್ಷೇತ್ರ ಅತ್ಯಂತ ಸುರಕ್ಷಿತವಾದದ್ದು. ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರು, ವಿಶೇಷಾಧಿಕಾರಿ, ಪ್ರೊಬೆಷನರಿ ಅಧಿಕಾರಿ ಹುದ್ದೆ ಸೇರಿದಂತೆ ಹಲವು ಉದ್ಯೋಗಾವಕಾಶಗಳಿವೆ. ಪದವಿ ಹಂತದಲ್ಲಿಯೇ ಅಗತ್ಯ ತಯಾರಿ ಮಾಡಿಕೊಂಡರೆ ಪರೀಕ್ಷೆಯನ್ನು ಸುಲಭವಾಗಿ ಎದುರಿಸಿ ಯಶಸ್ಸು ಗಳಿಸಬಹುದು ಎಂದು ಸಲಹೆ ನೀಡಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ನಬಾರ್ಡ್, ಗ್ರಾಮೀಣ ಬ್ಯಾಂಕುಗಳು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪ್ರತಿವರ್ಷವೂ ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿವೆ. ವಿದ್ಯಾರ್ಥಿ ದಿಸೆಯಲ್ಲಿಯೇ ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು. ಪರೀಕ್ಷೆಗಳನ್ನು ಎದುರಿಸುವ ಕೌಶಲ್ಯ ರೂಢಿಸಿಕೊಂಡರೆ ಅಂದುಕೊಂಡ ಗುರಿಮುಟ್ಟಬಹುದು ಎಂದರು.

ನಂತರ ಸಂಪನ್ಮೂಲ ವ್ಯಕ್ತಿಗಳಾದ ಚಂದ್ರಶೇಖರನ್ ಹಾಗೂ ಗವಿಷ್ ಅವರು ಕಾರ್ಯಾಗಾರ ನಡೆಸಿಕೊಟ್ಟರು. ಸಾರಸ್ವತ ಅಕಾಡೆಮಿ ಮುಖ್ಯಸ್ಥ ಡಾ.ವಸಂತ್ ಕುವಾರ್, ರಾಜೇಂದ್ರಕುವಾರ್, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಪ್ರೊ. ಆರ್.ನಳಿನಿ, ಡಾ.ಪ್ರೀತಮ್, ಡಾ.ರವಿಶಂಕರ್, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷೆ ಡಾ.ಬಿ.ವಿ.ತುಳಸಿ ಹಾಜರಿದ್ದರು. ಕಾರ್ಯಾಗಾರದಲ್ಲಿ 350ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಚಲಿಸುತ್ತಿದ್ದ ಕಾರಿನ ಮೇಲೆ ಕಾಡಾನೆ ದಾಳಿ

ಕೂದಲೆಳೆಯ ಅಂತರದಲ್ಲಿ ದಂಪತಿ ಪಾರು



ಮಡಿಕೇರಿ, ಜೂ.24– ಚಲಿಸುತ್ತಿದ್ದ ಕಾರಿನ ಮೇಲೆ ಕಾಡಾನೆ ದಾಳಿ ನಡೆಸಿದ್ದು, ಕಾರಿನಲ್ಲಿದ್ದ ದಂಪತಿ ಕಾಡಾನೆ ದಾಳಿಯಿಂದ ಕೂದಲೆಳೆಯ ಅಂತರದಲ್ಲಿ ಪಾರಾಗಿರುವ ಘಟನೆ ಸುಂಟಿಕೊಪ್ಪ–ಚೆಟ್ಟಳ್ಳಿ ರಸ್ತೆಯಲ್ಲಿ ನಡೆದಿದೆ.

ಶನಿವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಮತ್ತಿಕಾಡುವಿನ ನಿವಾಸಿ ಕೋರನ ಟಿಪ್ಪು ಎಂಬವರು ತಮ್ಮ ಬೆಂಝ್ ಕಾರಿನಲ್ಲಿ ಪತ್ನಿಯೊಂದಿಗೆ ಸುಂಟಿಕೊಪ್ಪದಿಂದ ಚೆಟ್ಟಳ್ಳಿ ಮಾರ್ಗವಾಗಿ ಮನೆಗೆ ಹಿಂತಿರುಗುತ್ತಿದ್ದರು. ರಸ್ತೆ ಮಧ್ಯದ ಕುಟ್ಟೋಟ್ಟಿ ಲೈನ್‌ಮನೆ ಸಮೀಪ ಕಾಡಾನೆಯೊಂದು ಮಾರ್ಗ ಮಧ್ಯಕ್ಕೆ ಆಗಮಿಸಿದ್ದಲ್ಲದೇ, ಕಾರಿನ ಮೇಲೆ ದಾಳಿ ನಡೆಸಲು ಮುಂದಾಗಿದೆ. ಎದುರಾಗಬಹುದಾದ ಅನಾಹುತದ ಸುಳಿವು ಅರಿತ ಟಿಪ್ಪು ಮತ್ತು ಅವರ ಪತ್ನಿ ಶರವೇಗದಲ್ಲಿ ಕಾರಿನಿಂದ ಇಳಿದು ಓಡಿ ಹೋಗಿ ಜೀವ ಉಳಿಸಿಕೊಂಡಿದ್ದಾರೆ.

ಇದರಿಂದ ರೋಷಗೊಂಡ ಕಾಡಾನೆ ದಂತದಿಂದ ಕಾರಿನ ಬಾನೆಟ್‌ಗೆ ತಿವಿದು ಹಾನಿಪಡಿಸಿ ಬಳಿಕ ಅಲ್ಲಿಂದ ಜಾಗ ಖಾಲಿ ಮಾಡಿದೆ. ಮತ್ತಿಕಾಡು ವ್ಯಾಪ್ತಿಯ ತೋಟಗಳಲ್ಲಿ ಬೆಳಗ್ಗೆಯಿಂದ ಕಾಡಾನೆಗಳನ್ನು ಕಾಡಿಗೆ ಓಡಿಸುವ ಕಾರ್ಯಾಚರಣೆ ನಡೆಯುತ್ತಿದ್ದು, ಈ ವೇಳೆ ಓಡಿಬಂದ ಸಲಗ, ಎದುರು ಸಿಕ್ಕಿದ ಕಾರಿನ ಮೇಲೆ ಎರಗಿದೆ ಎಂದು ತಿಳಿದು ಬಂದಿದೆ. ಕಾಡಾನೆ ದಾಳಿಯಿಂದ ದುಬಾರಿ ಬೆಲೆಯ ಕಾರಿಗೆ ಅಪಾರ ಹಾನಿಯಾಗಿದೆ.

ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಇಬ್ಬರ ಬಂಧನ

ವಿರಾಜಪೇಟೆ, ಜೂ.24– ಕೇರಳದ ಕಸಾಯಿಖಾನೆಗೆ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಇಬ್ಬರನ್ನು ವಿರಾಜಪೇಟೆ ನಗರ ಠಾಣೆ ಪೊಲೀಸರು ಬಂಧಿಸಿ, ಜಾನುವಾರುಗಳನ್ನು ರಕ್ಷಿಸಿದ್ದಾರೆ.



ಕೇರಳದ ಇರಿಟ್ಟಿ ಉಳಿಕಲ್ ವಯ್ಯತ್ತೂರು ಗ್ರಾಮದ ನಿವಾಸಿಗಳಾದ ಶ್ರೀನಾಥ್ ಮತ್ತು ಪಿಯೂಷ್ ಬಂಧಿತರು. ಆರೋಪಿಗಳು ಚಿಕ್ಕಮಗಳೂರಿನಿಂದ ಗೂಡ್ಸ್ ವಾಹನ (ಕೆ.ಎಲ್. 86–ಎ.3756) ದಲ್ಲಿ ಮೂರು ಕೋಣ ಮತ್ತು ಎರಡು ಎಮ್ಮೆ ಸೇರಿದಂತೆ 5 ಜಾನುವಾರುಗಳನ್ನು ವಿರಾಜಪೇಟೆ ಮಾರ್ಗವಾಗಿ ಕೇರಳದ ಕಸಾಯಿಖಾನೆಗೆ ಅಕ್ರಮವಾಗಿ ಸಾಗಿಸುತ್ತಿದ್ದರು.

ವಿರಾಜಪೇಟೆ ಪೆರುಂಬಾಡಿ ಚೆಕ್‌ಪೋಸ್ಟ್‌ನಲ್ಲಿ ನಗರ ಠಾಣೆ ಪೊಲೀಸರು ವಾಹನ ತಡೆದು ಪರಿಶೀಲನೆ ನಡೆಸಿದಾಗ ಜಾನುವಾರುಗಳ ಅಕ್ರಮ ಸಾಗಾಟ ಮಾಡುತ್ತಿರುವುದು ಕಂಡುಬಂತು. ಈ ವೇಳೆ ಶ್ರೀನಾಥ್ ಮತ್ತು ಪಿಯೂಷ್ ಅವರನ್ನು ಬಂಧಿಸಿದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಜೂ.24– ಕುಶಾಲನಗರ ವಿದ್ಯುತ್ ಉಪ ಕೇಂದ್ರದಿಂದ ಹೊರ ಹೋಗುವ ಕಾವೇರಿ ಮತ್ತು ಇಂಡಸ್ಟ್ರಿಯಲ್ ಏರಿಯಾ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.25 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆವರೆಗೆ ಕೂಡ್ಲೂರು, ಕೂಡುಮಂಗಳೂರು, ಕೂಡಿಗೆ, ಸುಂದರನಗರ, ಚಿಕ್ಕತ್ತೂರು, ದೊಡ್ಡತ್ತೂರು, ಹಳೆಕೂಡಿಗೆ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪೊಲೀಸ್ ಠಾಣೆ ಮೆಟ್ಟಿಲೇರಿದ ಬಸ್ ದೂರು

ಸಕಾಲಕ್ಕೆ ಕೆಎಸ್‌ಆರ್‌ಟಿಸಿ ಬಸ್ಸುಗಳು ಬಾರದ ಹಿನ್ನೆಲೆಯಲ್ಲಿ ದೂರು ನೀಡಿದ ವಿದ್ಯಾರ್ಥಿಗಳು





ನಾಪೋಕ್ಲು, ಜೂ.24– ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ನಿಗದಿತ ಸಮಯಕ್ಕೆ ಬಾರದ ವಿಷಯ ಪೊಲೀಸ್ ಠಾಣೆ ಮೆಟ್ಟಿಲೇರಿದೆ. ಬಸ್ ಬಾರದೆ ತಮಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಶಾಲಾ ವಿದ್ಯಾರ್ಥಿಗಳು ನಾಪೋಕ್ಲು ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿ, ಪ್ರತಿಭಟನೆ ನಡೆಸಿದ್ದಾರೆ.

ಬೆಂಗಳೂರಿನಿಂದ ನಾಪೋಕ್ಲು ಮುಖಾಂತರ ಭಾಗಮಂಡಲಕ್ಕೆ ತೆರಳುವ ಸರ್ಕಾರಿ ಬಸ್ಸುಗಳು ನಿಗದಿತ ಸಮಯಕ್ಕೆ ಬರುತ್ತಿಲ್ಲ. ಇದರಿಂದ ಶಾಲಾ ಕಾಲೇಜುಗಳಿಗೆ ತೆರಳುವ ನಮಗೆ ತೊಂದರೆಯಾಗುತ್ತಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದರು.

ನಾಪೋಕ್ಲುವಿನಿಂದ ನೆಲಜಿ, ಬಲಮಾವಟಿ, ಅಯ್ಯಂಗೇರಿ ಮೂಲಕ ಪ್ರತಿನಿತ್ಯ ಸಂಜೆ 4 ಬಸ್ಸುಗಳು ಭಾಗಮಂಡಲಕ್ಕೆ ತೆರಳುತ್ತಿದ್ದು ಇತ್ತೀಚಿನ ದಿನಗಳಲ್ಲಿ ಕೆಲವು ಬಸ್ಸುಗಳು ಇಲ್ಲಿಯ ಸಂತೆ ಮೈದಾನದಲ್ಲಿ ಸ್ಥಗಿತಗೊಳಿಸಲಾಗುತಿದ್ದು ನಿಯಮಿತವಾಗಿ ಸಂಚರಿಸುತ್ತಿಲ್ಲ ವಾರದಲ್ಲಿ ಎರಡು ಮೂರು ದಿನಗಳು ಮಾತ್ರ ಬರುವುದರಿಂದ ವಿದ್ಯಾರ್ಥಿಗಳು ತೀವ್ರ ಸಮಸ್ಯೆಯನ್ನು ಎದುರಿಸುವಂತಾಗಿದೆ.

ನಾಪೋಕ್ಲುವಿಗೆ ತಡವಾಗಿ ಆಗಮಿಸುವ ಬಸ್ಸುಗಳು ಸಂತೆ ಮೈದಾನದಲ್ಲಿ ನಿಲುಗಡೆಗೊಳ್ಳುತ್ತಿವೆ. ಇಲ್ಲಿಂದ ಮುಂದಕ್ಕೆ ತೆರಳುತ್ತಿಲ್ಲ. ನಾವು ಪ್ರತಿನಿತ್ಯ ಬಸ್ಸಿಗಾಗಿ ಕಾದು ಸಮಸ್ಯೆ ಅನುಭವಿಸುವಂತಾಗಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದರು. ಇದಕ್ಕೆ ಸಂಬಂಧಿಸಿದವರು ಕೂಡಲೇ ಸೂಕ್ತ ಕ್ರಮ ಕೈಗೊಂಡು ಸಮಸ್ಯೆಯನ್ನು ಪರಿಹರಿಸುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು ಇಲ್ಲಿಯ ಪೊಲೀಸ್ ಠಾಣೆ ಠಾಣಾಧಿಕಾರಿ ಮಂಜುನಾಥ ಅವರಿಗೆ ದೂರು ಸಲ್ಲಿಸಿದರು.

ದಿನ ನಾವು ಸಂಚರಿಸುತ್ತಿದ್ದ ಬಸ್ಸಿನಲ್ಲಿ ತಾಂತ್ರಿಕ ಸಮಸ್ಯೆ ಎದುರಾಗಿರುವುದರಿಂದ ಭಾಗಮಂಡಲಕ್ಕೆ ತಲುಪಲು ಸಾಧ್ಯವಾಗಿಲ್ಲ. ಆದಕಾರಣ ಸಂತೆ ಮೈದಾನದಲ್ಲಿ ನಿಲುಗಡೆಗೊಳಿಸಿದ್ದೇವೆ ಎಂದ ಬೆಂಗಳೂರಿನಿಂದ ನಾಪೋಕ್ಲು ಮುಖಾಂತರ ಭಾಗಮಂಡಲಕ್ಕೆ ತೆರಳುವ ಸರ್ಕಾರಿ ಬಸ್ಸು ಚಾಲಕ ಹೇಮರಾಜ್.ಎಂ ಹಾಗೂ ನಿರ್ವಾಹಕ ಕೆ.ಎಂ.ಪುಟ್ಟರಾಜು ತಿಳಿಸಿದರು.

ಬಸ್ಸು ಸಮಸ್ಯೆ ಪರಿಹರಿಸಲು ವಿದ್ಯಾರ್ಥಿಗಳು ನೀಡಿದ ಮನವಿಯನ್ನು ಪರಿಗಣಿಸಿದ ಠಾಣಾಧಿಕಾರಿ ಮಂಜುನಾಥ್ ಡಿಪೋ ವ್ಯವಸ್ಥಾಪಕರೊಂದಿಗೆ ದೂರವಾಣಿ ಕರೆ ಮಾಡಿ ಜನಸಾಮಾನ್ಯರಿಗೆ ಅನುಕೂಲವಾಗದಂತೆ ಸೂಕ್ತ ಸೌಲಭ್ಯ ಒದಗಿಸುವಂತೆ ಕೋರಿದರು ಹಾಗೂ ಇಂತಹ ಯಾವುದೇ ಸಮಸ್ಯೆಗಳಿದ್ದರೂ ಕಾನೂನು ಕೈಗೆತ್ತಿಕೊಳ್ಳದೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿ ತಮ್ಮ ಗಮನಕ್ಕೆ ತರುವಂತೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಕೆಲವು ದಿನಗಳಿಂದ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಸಮರ್ಪಕವಾಗಿ ನಾಪೋಕ್ಲು ವ್ಯಾಪ್ತಿಯಲ್ಲಿ ಸಂಚರಿಸುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು, ಪೋಷಕರು, ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಕೆಲವು ಕಡೆ ಕಾಡಾನೆಗಳ ಹಾವಳಿ ಇದ್ದು, ಮನೆ ತಲುಪುವ ಸಮಯಕ್ಕೆ ಕತ್ತಲಾಗುತ್ತಿರುವುದರಿಂದ ಜೀವಭಯ ಎದುರಾಗಿದೆ. ವಿದ್ಯಾರ್ಥಿಗಳಿಗೆ ಬಸ್‌ಪಾಸ್ ಮಾಡಿಸಿ ಪ್ರಯೋಜನ ಇಲ್ಲದಂತಾಗಿದೆ. ಸಂಬಂಧಿಸಿದವರು ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕು. ತಪ್ಪಿದಲ್ಲಿ ವಿದ್ಯಾರ್ಥಿಗಳು, ಪೋಷಕರು, ಸಾರ್ವಜನಿಕರು ಸೇರಿ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ವಿದ್ಯಾರ್ಥಿಗಳ ಪೋಷಕರಾದ ಕೃಷ್ಣಪ್ಪ.ಬಿ.ಆರ್, ಲಿಂಗಪ್ಪ (ಮಲ್ಲು) ಬಿ.ಎ, ಶೇಖರ್ ಬಿ.ಇ ಎಚ್ಚರಿಸಿದ್ದಾರೆ.

ಗ್ಯಾರಂಟಿ ಮೂಲಕ ಮುಗ್ಧ ಜನರಿಗೆ ಕಾಂಗ್ರೆಸ್ ವಂಚನೆ

ಕೊಡಗು ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್ ಜೈನಿ ಆರೋಪ

ಮಡಿಕೇರಿ, ಜೂ.24– ಗ್ಯಾರಂಟಿಗಳನ್ನು ಈಡೇರಿಸಲು ಸಾಧ್ಯವಾಗದೆ ವಿಚಲಿತಗೊಂಡಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ವಿರುದ್ಧ ಗೂಬೆ ಕೂರಿಸುವ ಮೂಲಕ ಮುಗ್ಧ ಜನರನ್ನು ವಂಚಿಸುತ್ತಿದೆ ಎಂದು ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್ ಜೈನಿ ಆರೋಪಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು ಚುನಾವಣೆ ಸಂದರ್ಭ ನೀಡಿದ ಭರವಸೆಯಂತೆ 10 ಕೆಜಿ ಅಕ್ಕಿಯನ್ನು ವಿತರಿಸಲು ಸಾಧ್ಯವಾಗದ ಕಾಂಗ್ರೆಸ್ ಸರ್ಕಾರ ಕೇಂದ್ರದ ಕಡೆ ಬೆರಳು ತೋರಿಸುತ್ತಿರುವುದು ಹಾಸ್ಯಾಸ್ಪದವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಈ ಹಿಂದಿನಿಂದಲೂ 5 ಕೆ.ಜಿ ಅಕ್ಕಿಯನ್ನು ನೀಡುವ ಮೂಲಕ ನುಡಿದಂತೆ ನಡೆದುಕೊಳ್ಳುತ್ತಿದೆ. ಆದರೆ ಸುಳ್ಳು ಗ್ಯಾರಂಟಿಗಳನ್ನು ನೀಡಿರುವ ಕಾಂಗ್ರೆಸ್ ಸರ್ಕಾರ ತನ್ನ ವೈಫಲ್ಯವನ್ನು ಮುಚ್ಚಿ ಹಾಕಲು ಕೇಂದ್ರದ ವಿರುದ್ಧ ಆರೋಪಗಳನ್ನು ಮಾಡುತ್ತಿದೆ. ಇದು ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ತಂತ್ರವಾಗಿದೆ ಎಂದು ಟೀಕಿಸಿದ್ದಾರೆ.

ಕಾಂಗ್ರೆಸ್ ಇತರ ರಾಜ್ಯಗಳಲ್ಲಿ ಕೂಡ ಯಾವುದೇ ಮುಂದಾಲೋಚನೆ ಮತ್ತು ಪೂರ್ವ ತಯಾರಿ ಇಲ್ಲದೆ ನೀಡಿದ ಗ್ಯಾರಂಟಿಗಳನ್ನು ಈಡೇರಿಸಲಾಗದೆ ವರ್ಷವೇ ಕಳೆದಿದೆ. ಮುಂಬರುವ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರ ಕೆಲವು ಗ್ಯಾರಂಟಿಗಳನ್ನು ಮಾತ್ರ ಷರತ್ತುಬದ್ಧವಾಗಿ ಜಾರಿಗೆ ತರುತ್ತಿದೆ. ಆದರೆ ಇವುಗಳೆಲ್ಲವೂ ಚುನಾವಣೆ ನಂತರ ಸ್ಥಗಿತಗೊಳ್ಳುವ ಮೂಲಕ ಜನ ವಂಚನೆಗೊಳಗಾಗುವುದು ಖಚಿತವೆಂದು ಮಹೇಶ್ ಜೈನಿ ಆರೋಪಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಧಾನಸಭಾ ಚುನಾವಣೆ ಪ್ರಚಾರದ ವೇಳೆ ಎಲ್ಲರಿಗೂ 10 ಕೆಜಿ ಅಕ್ಕಿ ಉಚಿತವಾಗಿ ನೀಡುವುದಾಗಿ ಘೋಷಿಸಿ ಜನರಿಂದ ಚಪ್ಪಾಳೆ ಗಿಟ್ಟಿಸಿಕೊಂಡಿದ್ದರು. ಆದರೆ ಅಧಿಕಾರಕ್ಕೆ ಬಂದ ನಂತರ ಗೋಸುಂಬೆಯಂತೆ ಬಣ್ಣ ಬದಲಾಯಿಸುತ್ತಿದ್ದಾರೆ ಎಂದು ಟೀಕಿಸಿರುವ ಅವರು, ಬಿಜೆಪಿ ಜನ ಜಾಗೃತಿಯ ಮೂಲಕ ಕಾಂಗ್ರೆಸ್ ಬಣ್ಣವನ್ನು ಬಯಲು ಮಾಡಲಿದೆ ಎಂದು ತಿಳಿಸಿದ್ದಾರೆ. ಮಾಜಿ ಸಿಎಂ ಬಿಎಸ್. ಯಡಿಯೂರಪ್ಪ ಹಾಗೂ ಹಿರಿಯ ನಾಯಕರ ನೇತೃತ್ವದಲ್ಲಿ ಜು.4ರಂದು ಬಿಜೆಪಿ ಹೋರಾಟವನ್ನು ಹಮ್ಮಿಕೊಂಡಿದ್ದು, ಜನತೆ ಎದುರು ಕಾಂಗ್ರೆಸ್‌ನ ಬಣ್ಣವನ್ನು ಬಯಲು ಮಾಡಲಿದೆ ಎಂದು ಮಹೇಶ್ ಜೈನಿ ತಿಳಿಸಿದ್ದಾರೆ.

ವಿಶೇಷಚೇತನರ ಕಲ್ಯಾಣಕ್ಕಾಗಿ ಶಾಸಕರ ಅನುದಾನದಲ್ಲಿ ಶೇ.5ರಷ್ಟು ಹಣ ಮೀಸಲು



ವಿರಾಜಪೇಟೆ, ಜೂ.24– ವಿಶೇಷ ಚೇತನರ ಕಲ್ಯಾಣಕ್ಕಾಗಿ ಶಾಸಕರ ಅನುದಾನದಲ್ಲಿ ಶೇ.5 ರಷ್ಟು ಹಣವನ್ನು ಮೀಸಲಿಡುವುದಾಗಿ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದ್ದಾರೆ.

ವಿರಾಜಪೇಟೆ ಪುರಭವನದಲ್ಲಿ ನಡೆದ ಬೇಟೋಳಿ, ಆರ್ಜಿ ಗ್ರಾಮ ಪಂಚಾಯಿತಿ ಹಾಗೂ ವಿರಾಜಪೇಟೆ ಪುರಸಭೆ ವ್ಯಾಪ್ತಿಯ ವಿಶೇಷ ಚೇತನರ ಕುಂದು ಕೊರತೆಯ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಕೆಲವು ವರ್ಷಗಳಿಂದ ವಿಶೇಷಚೇತನರ ಜೊತೆ ಒಡನಾಟದಿಂದ ಅವರ ಸಂಕಷ್ಟಗಳ ಅರಿವು ಇದೆ ಎಂದರು.

ಒಬ್ಬ ಶಾಸಕನಾಗಿ ವಿಶೇಷಚೇತನರಿಗೆ ಶೇ. 5ರ ಅನುದಾನ ಮೀಸಲಿಡುವುದರೊಂದಿಗೆ ಅವರಿಗೆ ತ್ರಿಚಕ್ರ ವಾಹನ, ಶಸ್ತ್ರ ಚಿಕಿತ್ಸೆ ವೆಚ್ಚ ಮತ್ತು ಸ್ವಾವಲಂಬಿಯಾಗಿ ಬದುಕಲು ಸ್ವ ಉದ್ಯೋಗ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಬಳಿಕ ಸಭೆಯಲ್ಲಿ ವಿಶೇಷ ಚೇತನರ ಕುಂದು–ಕೊರತೆ ಆಲಿಸಿ ಮನವಿ ಸ್ವೀಕರಿಸಿದರು.

ವಿಶೇಷ ಚೇತನರ ಒಕ್ಕೂಟದ ಸಂಚಾಲಕಿ ಆಯಿಷಾ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮಾಜದ ಮುಖ್ಯವಾಹಿನಿಗೆ ಎಲ್ಲರಂತೆ ವಿಶೇಷ ಚೇತನರು ಬರಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿಕೊಂಡರು.

ಆರ್ಜಿ ಗ್ರಾಪಂ ಅಧ್ಯಕ್ಷೆ ಪಾರ್ವತಿ ಉಪಸ್ಥಿತರಿದ್ದರು. ಸಭೆಯ ಮೊದಲಿಗೆ ಬೇಟೋಳಿ ಮತ್ತು ಆರ್ಜಿ ಹಾಗೂ ವಿರಾಜಪೇಟೆ ಪುರಸಭೆ ವ್ಯಾಪ್ತಿಯ ವಿಶೇಷಚೇತನರ ಪರವಾಗಿ ಶಾಸಕ ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು.

ಶಿಕ್ಷಣದಿಂದ ಮಾತ್ರ ದೇಶದ ಪ್ರಗತಿ ಸಾಧ್ಯ

ಜಿಲ್ಲಾ ಮಟ್ಟದ ಯುವ ಉತ್ಸವದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ, ಜೂ.24– ಯಾವುದೇ ದೇಶದ ಅಭಿವೃದ್ಧಿಯಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಮೌಲ್ಯಯುತ ಶಿಕ್ಷಣದಿಂದ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನೆಹರು ಯುವ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆದ ಜಿಲ್ಲಾ ಮಟ್ಟದ ಯುವ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವಕರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಯುವ ಉತ್ಸವ ಸಹಕಾರಿಯಾಗಿದೆ. ಯುವಕರು ತಮ್ಮ ಕಲೆ, ಸಾಹಿತ್ಯ, ಪ್ರತಿಭೆ ಅನಾವರಣಗೊಳಿಸಿ ಮುಖ್ಯವಾಹಿನಿಗೆ ಬರುವಂತಾಗಬೇಕು. ಆ ನಿಟ್ಟಿನಲ್ಲಿ ಹೆಜ್ಜೆ ಹಾಕಿದಾಗ ಮಾತ್ರ ಜಿಲ್ಲೆ ಕೀರ್ತಿ ಇನ್ನೂ ಉತ್ತುಂಗಕ್ಕೇರಲಿದೆ ಎಂದರು.

ಪ್ರಸ್ತುತ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಎಲ್ಲಾ ಹುದ್ದೆಗಳಿಗೂ ಅದರದೇ ಆದ ಮಹತ್ವವಿದೆ. ಹೀಗಾಗಿ ವಿದ್ಯಾರ್ಥಿಗಳು ಇದನ್ನು ಅರ್ಥ ಮಾಡಿಕೊಂಡು ವಿದ್ಯಾಭ್ಯಾಸ ಮಾಡಬೇಕು. ಸ್ಪರ್ಧಾತ್ಮಕ ಪ್ರಪಂಚದಲ್ಲಿ ಗಟ್ಟಿಯಾಗಿ ನಿಲ್ಲಲು ಚೆನ್ನಾಗಿ ಓದಬೇಕು. ಯುವ ಜನರು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡು ಶೈಕ್ಷಣಿಕ, ಆರ್ಥಿಕವಾಗಿ ಬೆಳೆದು ದೇಶದ ಬೆಳವಣಿಗೆಯಲ್ಲಿ ಭಾಗಿಯಾಗಬೇಕು ಎಂದರು.

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಸುರೇಶ್ ಎನ್.ಋಗ್ವೇದಿ ಮಾತನಾಡಿ, ಯುವಜನತೆ ನಾಡಿನ ಬಹುದೊಡ್ಡ ಶಕ್ತಿ. ಯುವಜನರು ತಮ್ಮ ಆಸಕ್ತಿಯನ್ನು ದೇಶದ ಅಭಿವೃದ್ಧಿಯಲ್ಲಿ ತೋರಿಸಿದಾಗ ಮಾತ್ರ ದೇಶ ಮುಂದುವರಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲೂ ಸಾಧ್ಯವಾಗುತ್ತದೆ. ಜಿಲ್ಲೆಯು ಜಾನಪದ, ಪವಾಡ ಪುರುಷರಿಂದ ಹೆಸರುವಾಸಿಯಾಗಿದೆ ಎಂದರು.

ನೆಹರು ಯುವ ಕೇಂದ್ರ ಜಿಲ್ಲಾ ಯುವಜನ ಅಧಿಕಾರಿ ಅಭಿಷೇಕ್ ಚವರೆ ಮಾತನಾಡಿ, ದೇಶ 75ನೇ ವರ್ಷದ ಸ್ವಾತಂತ್ರ್ಯೋತ್ಸವ ಆಚರಿಸಿ ಮುಂದೆ ಸಾಗುತ್ತಿದೆ. ಭಾರತ ದೇಶವು ಹೆಚ್ಚು ಯುವಶಕ್ತಿ ಹೊಂದಿರುವ ಜಗತ್ತಿನ ಮೊದಲ ರಾಷ್ಟ್ರವಾಗಿದೆ. ಜಿಲ್ಲಾ ಮಟ್ಟದ ಯುವ ಉತ್ಸವವು ಜಿಲ್ಲೆಯ ಯುವ ಪ್ರತಿಭೆಗಳಿಗೆ ಒಂದು ಒಳ್ಳೆಯ ವೇದಿಕೆಯಾಗಲಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನೆ ಜಿಲ್ಲಾ ಸಂಯೋಜನಾಧಿಕಾರಿ ಡಾ.ಎಂ.ಬಿ. ಮಹೇಶ್, ಜಾನಪದ ಕಲಾವಿದ ಸಿ.ಎಂ. ನರಸಿಂಹಮೂರ್ತಿ, ಬಾಲ ಕಾರ್ಮಿಕ ಸೊಸೈಟಿ ಯೋಜನಾಧಿಕಾರಿ ಎಂ. ಮಹೇಶ್, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಅಧ್ಯಕ್ಷ ಜಿ.ಬಂಗಾರು, ಲೆಕ್ಕಾಧಿಕಾರಿ ಸತೀಶ್, ಸಹನಾ ಇತರರಿದ್ದರು.

ಕುರಿಗಾಹಿಗಳಿಗೆ ಜಂತುನಾಶಕ ಔಷಧಿ ವಿತರಣೆ



ಹನೂರು, ಜೂ.24– ಪಟ್ಟಣದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಕಚೇರಿಗೆ ಕರ್ನಾಟಕ ಕುರಿ ಮಹಾಮಂಡಲದ ನಿರ್ದೇಶಕ ಪಂಡಿತ್ ರಾವ್ ಚಿದ್ರಿ ಭೇಟಿ ನೀಡಿ, ಕುರಿಗಾಹಿಗಳಿಗೆ ಜಂತು ನಾಶಕ ಔಷಧಿ ವಿತರಿಸಿದರು.

ಬಳಿಕ ಮಾತನಾಡಿದ ಪಂಡಿತ್ ರಾವ್ ಚಿದ್ರಿ, ಹನೂರು ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ಮುಂದಿನ ದಿನಗಳಲ್ಲಿ ಬ್ಯಾಂಕ್ ಆಗಿ ಪರಿವರ್ತನೆಯಾಗಿ ಕುರಿಗಾಹಿಗಳಿಗೆ ಸೌಲಭ್ಯ ಒದಗಿಸಬೇಕು ಎಂದರು.

ಪಶು ಸಂಗೋಪನೆ ಇಲಾಖೆ ಕುರಿಗಳ ಔಷಧಿಗಳನ್ನು ಪಶು ಆಸ್ಪತ್ರೆಗೆ ರವಾನಿಸುತ್ತಿದೆ. ಆದರೆ ಸರಿಯಾದ ಸಮಯಕ್ಕೆ ಕುರಿಗಾಹಿಗಳಿಗೆ ಔಷಧಿಗಳು ತಲುಪುತ್ತಿಲ್ಲ. ಆದ್ದರಿಂದ ನೇರವಾಗಿ ಆ ವ್ಯಾಪ್ತಿಗೆ ಬರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ಕುರಿಗಾಹಿಗಳಿಗೆ ಔಷಧ ತಲುಪಿಸುವಂತೆ ರಾಜ್ಯ ಮಟ್ಟದ ಕುರಿಗಾರರ ಸಭೆ ಆಯೋಜಿಸಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಕುರಿಗಳು ಆಕಸ್ಮಿಕವಾಗಿ ಸಾವನ್ನಪ್ಪಿದರೇ ಅನುಗ್ರಹ ಯೋಜನೆ ಅಡಿ ಒಂದು ಕುರಿಗೆ 5 ಸಾವಿರ ರೂ. ನೀಡಲಾಗುವುದು. ಈ ಯೋಜನೆಗೆ ಕುರಿ ಸಾವನ್ನಪ್ಪಿದ ಬಳಿಕ ಪಶು ವೈದ್ಯಾಧಿಕಾರಿ ಬಳಿ ಮರಣೋತ್ತರ ಪರೀಕ್ಷೆ ನಡೆಸಿ ನಂತರ ಅನುಗ್ರಹ ಯೋಜನೆಗೆ ಅರ್ಜಿ ಸಲ್ಲಿಸಬೇಕು. ಆದರೆ ಪಶು ವೈದ್ಯಾಧಿಕಾರಿಗಳ ಕೊರತೆಯಿಂದ ಕುರಿಗಾಹಿಗಳು ಕುರಿಗಳ ಮರಣೋತ್ತರ ಪರೀಕ್ಷೆ ಮಾಡಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಹೆಚ್ಚಿನ ಪಶು ವೈದ್ಯರನ್ನು ನಿಯೋಜಿಸುವಂತೆ ಮುಖ್ಯಮಂತ್ರಿಗಳಿಗೆ ಒತ್ತಾಯಿಸಲಾಗುವುದು ಎಂದರು.

ರಾಜ್ಯ ಸರ್ಕಾರದ ಜೊತೆ ಮಾತನಾಡಿ ಕುರಿ ಸಂಘಗಳ ಮೂಲಕ ಕುರಿಗಾಹಿಗಳಿಗೆ ಸಾಲ ಸೌಲಭ್ಯ ನೀಡುವಂತೆ ಮನವಿ ಮಾಡಲಾಗುತ್ತದೆ ಎಂದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿಗಾರರ ಸಭೆ ಕರೆದು ಕುಂದುಕೊರತೆ ಆಲಿಸಿ ಯೋಜನೆಗಳನ್ನು ರೂಪಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಈ ವೇಳೆ ಬೀದರ್ ಜಿಲ್ಲೆ ಯಲ್‌ಲಿಂಗ ಪುಣ್ಯ ಆಶ್ರಮದ ಮಚಂದ್ರನಾಥ ಮಹಾರಾಜ್, ಬೀದರ್ ಜಿಪಂ ಮಾಜಿ ಅಧ್ಯಕ್ಷೆ ಗೀತಾ ಹಾಗೂ ಹನೂರು ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಬಿ.ಪ್ರಕಾಶ್, ನಿರ್ದೇಶಕ ಕೃಷ್ಣಯ್ಯ, ಲೊಕ್ಕನಹಳ್ಳಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಬಸವರಾಜು, ಮೋಡಳ್ಳಿ ಕುರಿ ಮತ್ತು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಶ್ರೀಕಂಠ ಇನ್ನಿತರರಿದ್ದರು.

ನೂತನ ಎಸ್‌ಐ ಚರಣ್‌ಗೌಡ ಅಧಿಕಾರ ಸ್ವೀಕಾರ



ಬೇಗೂರು, ಜೂ.24– ಬೇಗೂರು ಪೊಲೀಸ್ ಠಾಣೆ ನೂತನ ಸಬ್ ಇನ್ಸ್‌ಪೆಕ್ಟರ್ ಚರಣ್‌ಗೌಡ ಅಧಿಕಾರ ಸ್ವೀಕರಿಸಿದರು.

ಇಲ್ಲಿನ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈ ಹಿಂದಿನ ಎಸ್‌ಐ ಜಗದೀಶ ಧೂಳಶೆಟ್ಟಿ ಅವರು ಚಾಮರಾಜನಗರ ಪಟ್ಟಣ ಠಾಣೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಚರಣ್‌ಗೌಡ ಅವರು ನೂತನ ಸಬ್ ಇನ್ಸ್‌ಪೆಕ್ಟರ್ ಆಗಿ ಅಧಿಕಾರ ಸ್ವೀಕರಿಸಿದ್ದಾರೆ. ಈ ವೇಳೆ ಸಿಪಿಐ ಕಿರಣ್ ಕುಮಾರ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಸ್ತುತ ಸರ್ಕಾರಿ ಶಾಲೆಯಲ್ಲೂ ಗುಣಮಟ್ಟದ ಶಿಕ್ಷಣ: ಶ್ರೀಕಾಂತ್

ಚಾಮರಾಜನಗರ, ಜೂ.24– ಪ್ರಸ್ತುತ ಸರ್ಕಾರಿ ಶಾಲೆಯಲ್ಲೂ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ ಎಂದು ರಾಮಸಮುದ್ರ ಪೂರ್ವ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಶ್ರೀಕಾಂತ್ ತಿಳಿಸಿದರು.

ತಾಲೂಕಿನ ಮಲ್ಲೂಪುರ ಸರ್ಕಾರಿ ಶಾಲೆಯಲ್ಲಿ ಎಆರ್‌ಎಸ್ ಟ್ರಸ್ಟ್ ದೊಡ್ಡರಾಯಪೇಟೆ, ಕಾವೇರಿ ಡೆಂಟಲ್ ಮತ್ತು ಓರಲ್ ಮೆಡಿಸನ್ ಕ್ಲಿನಿಕ್ ವತಿಯಿಂದ ಹಮ್ಮಿಕೊಂಡಿದ್ದ ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪೋಷಕರು ಖಾಸಗಿ ಮತ್ತು ಸರ್ಕಾರಿ ಶಾಲೆ ಎಂದು ತಾರತಮ್ಯ ಮಾಡಬಾರದು. ಏಕೆಂದರೆ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದವರು ಇಂದು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ ಎಂದ ಅವರು, ಸರ್ಕಾರಿ ಶಾಲೆಗಳಲ್ಲಿ ಪರೀಕ್ಷೆಗಳನ್ನು ಬರೆದು ಮೆರಿಟ್ ಆಧಾರದಲ್ಲಿ ಆಯ್ಕೆಗೊಂಡ ಪರಿಣಿತ ಶಿಕ್ಷಕರಿದ್ದು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ. ಅಲ್ಲದೇ ಪ್ರತಿಭಾವಂತ ಮಕ್ಕಳು ಯಾವ ಶಾಲೆಯಲ್ಲಿ ವ್ಯಾಸಂಗ ಮಾಡಿದರೂ ಅವರು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದುತ್ತಾರೆ. ಹೀಗಾಗಿ ಮುಂದೆ ದೇಶ ಪ್ರಜೆಗಳಾಗುವ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಬೇಕಾದ ಕರ್ತವ್ಯ ಪೋಷಕರು, ಶಿಕ್ಷಕರ ಮೇಲಿದೆ ಎಂದರು.



ದೊಡ್ಡರಾಯಪೇಟೆ ಗ್ರಾಮದ ನಿವೃತ್ತ ಉಪನ್ಯಾಸಕ ದಿವಗಂತ ರಂಗಸ್ವಾಮಿ ಅವರ ಮೂವರು ಪುತ್ರರು ತಂದೆ ಹೆಸರಿನಲ್ಲಿ ಎಆರ್‌ಎಸ್ ಟ್ರಸ್ಟ್ ಸ್ಥಾಪನೆ ಮಾಡಿ ಕಳೆದ 2 ವರ್ಷದಿಂದ ಸಮಾಜ ಸೇವೆಯಲ್ಲಿ ತೊಡಗಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎಆರ್‌ಎಸ್ ಟ್ರಸ್ಟ್ ಅಧ್ಯಕ್ಷ ಕೃಪಾಶಂಕರ್ ಮಾತನಾಡಿ, ನಮ್ಮ ತಂದೆಯವರು ಸೇವೆ ಸಲ್ಲಿಸಿರುವ ಶಾಲೆಗಳು ಅಭಿವೃದ್ಧಿ ಹೊಂದಿವೆ. ಅವರಿಂದ ಶಿಕ್ಷಣ ಕಲಿತ ಅನೇಕ ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಿದ್ದಾರೆ. ನಮ್ಮ ತಂದೆಯವರ ಸೇವಾ ಕಾರ್ಯದಿಂದ ಪ್ರೇರಣೆಗೊಂಡು ನಾವು ಮೂವರು ಸಹೋದರರು ಸೇರಿ ತಂದೆಯವರ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿ ಕಳೆದ 2 ವರ್ಷಗಳಿಂದ ಸೇವಾ ಕಾರ್ಯ ಮಾಡಿಕೊಂಡು ಬರುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಸಬ್ ಇನ್‌ಪೆಕ್ಟರ್ ಸಿ.ಕೆ.ಮಹೇಶ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಮಂಗಳಮ್ಮ, ಯು.ರಾಜು, ಎಆರ್‌ಎಸ್ ಟ್ರಸ್ಟ್ ಕಾರ್ಯದರ್ಶಿ ವಕೀಲ ಅರುಣ್‌ಕುಮಾರ್, ಗ್ರಾಪಂ ಸದಸ್ಯರಾದ ನಾಗಶೆಟ್ಟಿ, ಸಿದ್ದರಾಜು, ಮಾಜಿ ಸದಸ್ಯ ಮೂರ್ತಿ, ಮುಖ್ಯ ಶಿಕ್ಷಕ ನಟರಾಜು, ಶಿಕ್ಷಕಿ ಪವಿತ್ರ, ರವಿಗೌಡ, ಬಾಲರಾಜ್, ಬಸವಲಿಂಗ, ಆಟೋ ರಾಜು ಹಾಗೂ ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

ಜೂ.27ರಂದು ನಾಡಪ್ರಭು ಕೆಂಪೇಗೌಡ ಜಯಂತಿ

ಚಾಮರಾಜನಗರ, ಜೂ.24– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿಯನ್ನು ಜೂ.27ರಂದು ಬೆಳಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ಹೆಚ್.ಎಂ.ಗಣೇಶ್‌ಪ್ರಸಾದ್, ಎ.ಆರ್.ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ನಗರಸಭಾ ಸದಸ್ಯರಾದ ಹೆಚ್.ಎಸ್.ಮಮತ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಮೈಸೂರಿನ ಮಾನಸ ಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ಪ್ರಾಧ್ಯಾಪಕಿ ಡಾ.ಟಿ.ಜಯಲಕ್ಷ್ಮಿ ಸೀತಾಪುರ ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಇಂದು ಎನ್‌ಎಸ್‌ಯುಐನಿಂದ ಪ್ರತಿಭಾ ಪುರಸ್ಕಾರ

ಚಾಮರಾಜನಗರ, ಜೂ.24– ನಗರದ ಡಾ.ರಾಜ್ ಕುಮಾರ್ ಕಲಾ ಮಂದಿರದಲ್ಲಿ ಜೂ.25ರಂದು ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ(ಎನ್‌ಎಸ್‌ಯುಐ) ದಿಂದ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಮೋಹನ್(ನಗು) ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು ಎಂದರು.

ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಸಿದ್ದಮಲ್ಲೇಶ್ವರ ವಿರಕ್ತಮಠ ಶ್ರೀಚನ್ನಬಸವ ಸ್ವಾಮೀಜಿ ಹಾಗೂ ನಿಯೋಜಿತ ನಳಂದ ಬೌದ್ಧ ವಿಶ್ವವಿದ್ಯಾನಿಲಯ ಬಂತೇ ಬೋಧಿದತ್ತ ತೇರ, ಸಂತ ಫ್ರಾನ್ಸಿಸ್ ಆಂಗ್ಲ ಮಾಧ್ಯಮ ಶಾಲೆಯ ಬ್ರದರ್ ಪ್ರಭಾಕರ್ ಸಾನ್ನಿಧ್ಯ ವಹಿಸುವರು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಶಾಸಕ ಎ.ಆರ್. ಕೃಷ್ಣಮೂರ್ತಿ, ಶಾಸಕ ಗಣೇಶಪ್ರಸಾದ್, ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ಎಚ್.ಎ.ರಫೀಕ್ ಅಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಎನ್‌ಎಸ್‌ಯುಐ ರಾಜ್ಯಾಧ್ಯಕ್ಷ ಕೀರ್ತಿ ಗಣೇಶ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ 400 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಮಾಧ್ಯಮ ಕಾರ್ಯದರ್ಶಿ ಅರುಣ್ ಕುಮಾರ್, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಾಗೇಂದ್ರ ನಾಯಕ, ಎನ್‌ಎಸ್‌ಯುಐ ಜಿಲ್ಲಾ ಉಪಾಧ್ಯಕ್ಷ ಸ್ಟ್ಯಾನ್ಲಿ ಬಾಲರಾಜ್, ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಆರ್.ಎಸ್.ಅಕ್ಷಯ್‌ಕುಮಾರ್, ತಾಲೂಕು ಅಧ್ಯಕ್ಷ ಮುತ್ತುರಾಜ್ ಹಾಜರಿದ್ದರು.



ಒಂದನೇ ಪುಟದಿಂದ

ರಾಜ್ಯಾಧ್ಯಕ್ಷರ ನೇಮಕ ಕಗ್ಗಂಟು

ತರುವ ಯೋಚನೆ ಅವರಲ್ಲಿದೆ. ಮುಂಬರುವಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಒಕ್ಕಲಿಗ ಮತ್ತು ವೀರಶೈವ ಸಮುದಾಯಕ್ಕೆ ಸೇರಿದ ನಾಯಕರಿಗೆ ಎರಡರಲ್ಲೂ ಒಂದೊಂದು ಸ್ಥಾನ ನೀಡಲು ವರಿಷ್ಠರು ತೀರ್ಮಾನಿಸಿದ್ದಾರೆ.

ಈ ಲೆಕ್ಕಾಚಾರದ ಆಧಾರದ ಮೇಲೆ ಪ್ರತಿಪಕ್ಷದ ಸ್ಥಾನಕ್ಕೆ ಮತ್ತು ರಾಜ್ಯಾಧ್ಯಕ್ಷ ಸ್ಥಾನಕ್ಕೆ ಹಲವು ಹೆಸರುಗಳು ಕೇಳಿಬಂದರೂ ಸಂತೋಷ್ ನಿರ್ಧಾರವೇ ಅಂತಿಮವಾಗುವ ಸಾಧ್ಯತೆ ಇದೆ. ಇತ್ತೀಚೆಗೆ ಸಂತೋಷ್ ಬಣದಲ್ಲಿ ಗುರುತಿಸಿಕೊಂಡಿರುವ ಮುಖಂಡರು ನೀಡುತ್ತಿರುವ ಹೇಳಿಕೆ ಇದಕ್ಕೆ ಪುಷ್ಟಿ ನೀಡಿದಂತಿದೆ. ಮತ್ತೊಂದೆಡೆ ಸಿದ್ದರಾಮಯ್ಯ ಅವರನ್ನು ವಿಧಾನಸಭೆಯಲ್ಲಿ ಎದುರಿಸಲು ಬಸವರಾಜ ಬೊಮ್ಮಾಯಿ ಅವರಿಂದ ಮಾತ್ರ ಸಾಧ್ಯ ಎಂದು ಯಡಿಯೂರಪ್ಪ ಅಂಗಳದಲ್ಲಿ ಕೇಳಿ ಬರುತ್ತಿದೆ.

ಆದರೆ ಆರ್‌ಎಸ್‌ಎಸ್ ವಲಯದಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪ್ರತಿಪಕ್ಷ ಸ್ಥಾನಕ್ಕೆ ತಂದರೆ ಕಾಂಗ್ರೆಸ್ ಸರ್ಕಾರವನ್ನು ಎದುರಿಸಲು ಸಮರ್ಥರಿರುತ್ತಾರೆ ಎಂಬುದು ಕೇಳಿ ಬಂದಿದೆ. ಈ ಮಧ್ಯೆ ರಾಜ್ಯಾಧ್ಯಕ್ಷ ಸ್ಥಾನವನ್ನು ನನಗೆ ಕೊಡಿ ಎಂದು ಮಾಜಿ ಸಚಿವ ವಿ.ಸೋಮಣ್ಣ ಬಹಿರಂಗವಾಗಿಯೇ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ. ಅಷ್ಟೇ ಅಲ್ಲ ಮೋದಿ ಅವರನ್ನು ಹೊರತುಪಡಿಸಿ, ಉಳಿದೆಲ್ಲ ರಾಷ್ಟ್ರೀಯ ನಾಯಕರನ್ನು ಸೋಮಣ್ಣ ಭೇಟಿ ಮಾಡಿದ್ದಾರೆ. ಸೋಮಣ್ಣ ಬಹಿರಂಗ ಹೇಳಿಕೆ ನೀಡುತ್ತಿದ್ದಂತೆ ಹಾಲಿ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಬಹಿರಂಗ ಹೇಳಿಕೆ ನೀಡಿದ್ದರು.

ಕಬ್ಬು ಅರೆಯುವ ಕಾರ್ಯ ಆರಂಭ

ಮಂದಿ ಕಾರ್ಮಿಕರ ಅಗತ್ಯವಿದ್ದು, ಸ್ಥಳೀಯ ಒಂದು ಸಾವಿರ, ಬಳ್ಳಾರಿಯಿಂದ ಸಾವಿರ, ಮಹಾರಾಷ್ಟ್ರ, ವಿಜಯಪುರ ಹಾಗೂ ಜಾರ್ಖಂಡ್‌ನಿಂದ ತಲಾ 500 ಕಾರ್ಮಿಕರು ಮೈಷುಗರ್‌ನಲ್ಲಿ ಕೆಲಸ ನಿರ್ವಹಿಸಲಿದ್ದಾರೆ. ಸದ್ಯಕ್ಕೆ 300 ಮಂದಿ ಖಾಯಂ ಕಾರ್ಮಿಕರಿದ್ದು, ಕಾರ್ಖಾನೆಗೆ ಈಗಾಗಲೇ ಸರ್ಕಾರ 50 ಕೋಟಿ ಹಣ ಮಂಜೂರು ಮಾಡಿದೆ. ನಾವು 105 ಕೋಟಿ ಕೇಳಿದ್ದೆವು. ಈ ಹಣದಲ್ಲಿ ಒಂದೂವರೆ ಲಕ್ಷ ಟನ್ ಕಬ್ಬು ಅರೆಯಲು ಸಾಧ್ಯವಿದೆ ಎಂದರು. ಉಳಿದ ಹಣವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲು ಸರ್ಕಾರ ಒಪ್ಪಿದೆ. ಕಾರ್ಖಾನೆಯಲ್ಲಿ 18000 ಕ್ವಿಂಟಾಲ್ ಸಕ್ಕರೆ ದಾಸ್ತಾನಿದ್ದು, ಈ ಪೈಕಿ 11000 ಕ್ವಿಂಟಾಲ್ ಸಕ್ಕರೆ ಮಾರಾಟಕ್ಕೆ ಯೋಗ್ಯವಿದೆ. ಮಾರಾಟ ಮಾಡಿದ ಬಳಿಕ ಬರುವ ಹಣವನ್ನು ಕಾರ್ಖಾನೆ ಸುಧಾರಣೆಗೆ ಬಳಸಿಕೊಳ್ಳುತ್ತೇವೆ. ಒಂದೂವರೆ ಲಕ್ಷ ಟನ್ ಕಬ್ಬಿನಿಂದ ಉತ್ಪಾದನೆಯಾ ಗುವ ಸಕ್ಕರೆಯನ್ನು ಮಾರಾಟ ಮಾಡಿ ಆ ಹಣವನ್ನು ಸಹ ಕಾರ್ಖಾನೆ ಸುಸ್ಥಿತಿಗೆ ತರಲು ಬಳಸಿಕೊಳ್ಳುತ್ತೇವೆ ಎಂದು ಹೇಳಿದರು. ಕಂದಾಯ, ವಿವಿಧ ರೀತಿಯ ಬಾಡಿಗೆ, ವಿದ್ಯುತ್ ಸೇರಿದಂತೆ ಕಾರ್ಖಾನೆ 150 ಕೋಟಿ ಬಾಕಿ ಸಂದಾಯ ಮಾಡಬೇಕಿದೆ. ಈ ಪೈಕಿ ವಿದ್ಯುತ್ ದರವೇ 40 ಕೋಟಿ ಇದೆ. ಜೊತೆಗೆ ಬೆಂಗಳೂರಿನಲ್ಲಿ ಕಾರ್ಖಾನೆಗೆ ಸಂಬಂಧಿಸಿದ ಒಂದು ಎಕರೆ ಜಾಗದಲ್ಲಿ 15 ಲಕ್ಷ ಬಾಡಿಗೆ ಬರುತ್ತಿದ್ದು, ಅದು ಐಟಿಗೆ ಹೋಗುತ್ತಿದೆ. ಸಣ್ಣಪುಟ್ಟ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸಿ ಸುಸಜ್ಜಿತ ರೀತಿಯಲ್ಲಿ ಕಾರ್ಖಾನೆ ನಡೆಸಲು ಎಲ್ಲಾ ರೀತಿಯ ಅನುವು ಮಾಡಿಕೊಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

62.25 ಲಕ್ಷ ನಿವೃತ್ತಿ ವೇತನ ಗುಳುಂ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಗೀತಾಲಕ್ಷ್ಮೀ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ವಿವರ: ಆರೋಪಿ ಗಿರೀಶ ಅವರು ಚಾಮರಾಜನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಕಚೇರಿಯ ಅಧೀಕ್ಷಕರಾಗಿದ್ದು, ನ್ಯಾಷನಲ್ ಪೆನ್ಷನ್ ಸ್ಕೀಂ ಸಂಬಂಧ ಕಾರ್ಯ ನಿರ್ವಹಿಸುತ್ತಿದ್ದರು. ಈ ಸ್ಕೀಂಗೆ ಸಂಬಂಧಿಸಿದ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಮೂಲಕ ಅಂಗನವಾಡಿ ಕಾರ್ಯಕರ್ತೆಯರ ನಿವೃತ್ತಿ ವೇತನ ಮತ್ತು ಮರಣದ ನಂತರ ವಾರಸುದಾರರಿಗೆ ನೀಡಬೇಕಾದ ಹಣದ ನಿರ್ವಹಣೆಯನ್ನು ಕಂಪ್ಯೂಟರ್ ಆಪರೇಟರ್ ಮೋಹನ್ ಜೊತೆಗೂಡಿ ಮಾಡುತ್ತಿದ್ದರು. ಇವರು 2022ರ ಮೇ 30ರಂದು ನಿವೃತ್ತರಾಗಿದ್ದಾರೆ.

ನಿವೃತ್ತಿಯಾಗಿ ವರ್ಷ ಕಳೆದರೂ ತಮಗೆ ನಿವೃತ್ತಿ ವೇತನ ಬಂದಿಲ್ಲ ಎಂದು ಇತ್ತೀಚೆಗೆ ಕೆಲವು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ದೂರು ನೀಡಿದ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಪರಿಶೀಲನೆ ನಡೆಸಿದಾಗ ಅಂಗನವಾಡಿ ಕಾರ್ಯಕರ್ತೆಯರ ಪ್ರಾನ್ ಸಂಖ್ಯೆ (Pran) ಇನ್ಯಾಕ್ಟೀವ್ ಎಂದು ತೋರಿಸುತ್ತಿತ್ತು. ಹಾಲಿ ಇರುವ ಪಾಸ್‌ವರ್ಡ್ ದುರುಪಯೋಗವಾಗಿರಬಹುದು ಎಂಬ ಸಂಶಯದ ಮೇರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಪಾಸ್‌ವರ್ಡ್ ಅನ್ನು ಬದಲಾಯಿಸಿದ್ದರು. ಈ ಪ್ರಕರಣದ ಬಗ್ಗೆ ಮತ್ತಷ್ಟು ಪರಿಶೀಲನೆ ನಡೆಸಿದಾಗ ಹಲವು ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆಯಾಗದಿರುವುದು ಹಾಗೂ ಹಣ ವರ್ಗಾವಣೆಯಾಗಿರುವ ಬ್ಯಾಂಕ್ ಖಾತೆಗಳಿಗೂ ಕಾರ್ಯಕರ್ತೆಯರ ಖಾತೆಗಳಿಗೂ ವ್ಯತ್ಯಾಸವಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಇಲಾಖೆಯ ಉಪನಿರ್ದೇಶಕಿಯು ಮುಂಬೈನ ಎನ್‌ಎಸ್‌ಡಿಎಲ್‌ಗೆ ಪತ್ರ ರವಾನಿಸಿ 2021ರಿಂದ 23ನೇ ಸಾಲಿನವರೆಗೆ ನಿವೃತ್ತಿಯಾದವರ ಹಾಗೂ ಮರಣ ಹೊಂದಿದವರ ಎನ್‌ಎಸ್‌ಪಿ ಹಣ ಪಾವತಿಯಾಗಿರುವ ವಿವರಗಳನ್ನು ಕೋರಿದ್ದಾರೆ. ಎನ್‌ಎಸ್‌ಡಿಎಲ್ ನೀಡಿದ ವರದಿಯನ್ವಯ ಗಿರೀಶ ಅವರು ನಿವೃತ್ತಿ ಹೊಂದಿದ 2022ರ ಮೇ 30ರಂದು ಅವರ ಖಾತೆಗೆ 9,77,769.64 ರೂ. ಜಮೆಯಾಗಿದೆ. ನಿವೃತ್ತಿಯ ನಂತರ 2022ರ ಜುಲೈ 15 ಮತ್ತು 29ರಂದು ಕ್ರಮವಾಗಿ 63,828.39 ಮತ್ತು 64.205.70 ರೂ. ಜಮೆಯಾಗಿದೆ. ಒಟ್ಟು ಅವರ ಖಾತೆಗೆ 11,05,803 ರೂ. ಜಮೆಯಾಗಿರುವುದಲ್ಲದೇ, ಅಂಗನವಾಡಿ ಕಾರ್ಯಕರ್ತೆಯರಲ್ಲದವರ ಕೆಲವರ ಖಾತೆಗಳಿಗೆ ಒಟ್ಟು 62,25, 632.99 ರೂ. ಜಮೆಯಾಗಿದೆ. ಈ ಸಂಬಂಧ ಇನ್ನೂ ಹೆಚ್ಚಿನ ಹಣ ದುರುಪಯೋಗವಾಗಿರುವ ಅನುಮಾನವೂ ಇದೆ. ಗಿರೀಶ ಮತ್ತು ಮೋಹನ್ ಅವರು ಮಾತ್ರವಲ್ಲದೇ ಈ ಪ್ರಕರಣದಲ್ಲಿ ಮತ್ತೆ ಕೆಲವರು ಕೂಡ ಭಾಗಿಯಾಗಿರುವ ಶಂಕೆ ಇದೆ ಎಂದು ಮಹಿಳಾ ಮತ್ತು ಮಕ್ಕಳ ಇಲಾಖೆ ಉಪನಿರ್ದೇಶಕಿ ಗೀತಾಲಕ್ಷ್ಮೀ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಚಾಮರಾಜನಗರ ಜಿಲ್ಲಾ ಸೆನ್ ಠಾಣೆಯ ಇನ್ಸ್‌ಪೆಕ್ಟರ್ ಆನಂದಕುಮಾರ್ ತನಿಖೆ ಮುಂದುವರೆಸಿದ್ದಾರೆ.

ಆ.17ರ ನಂತರ ಯಜಮಾನಿಗೆ ಮನಿ

ಸಲ್ಲಿಸಬಹುದು ಎಂದರು. ಸಚಿವ ಸಂಪುಟ ಸಭೆಯಲ್ಲಿ ಈ ಹೊಸ ಆ್ಯಪ್ ಬಗ್ಗೆ ಮಾಹಿತಿ ನೀಡಲಾಗುವುದು. ಏನಾದರು ಮಾರ್ಪಾಡು ಮಾಡುವ ಅಥವಾ ಹೊಸದಾಗಿ ಮಾಹಿತಿ ಸೇರಿಸುವ ಸೂಚನೆ ಸಚಿವ ಸಂಪುಟ ಸಭೆಯಲ್ಲಿ ವ್ಯಕ್ತವಾದರೆ, ಅದನ್ನು ಅಳವಡಿಸಲಾಗುತ್ತದೆ. ಬಳಿಕ ಈ ಆ್ಯಪ್ ಮೂಲಕವೇ ಅರ್ಜಿ ಆಹ್ವಾನಿಸಲಾಗುತ್ತದೆ ಎಂದು ತಿಳಿಸಿದರು.

ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಹೊಸ ಆ್ಯಪ್ ರೂಪಿಸಲಾಗಿದೆ. ಯಾವುದೇ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ನಿಗದಿ ಮಾಡಿಲ್ಲ. ಆ್ಯಪ್ ಮೂಲಕ ಅರ್ಜಿ ಸಲ್ಲಿಕೆ ಬಳಿಕ ಸ್ವೀಕೃತಿ ಪತ್ರ ದೊರೆಯಲಿದೆ. ಈ ಸ್ವೀಕೃತಿ ಪತ್ರ ಪಡೆದವರು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಲಿದ್ದಾರೆ. ಆ.17ರ ನಂತರ ಫಲಾನುಭವಿಗಳ ಖಾತೆಗೆ ತಿಂಗಳಿಗೆ 2 ಸಾವಿರ ರೂ. ಜಮೆ ಮಾಡಲಾಗುತ್ತದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು.

ಗೊಂದಲ ಬೇಡ: ರಾಜಕೀಯ ದುರುದ್ದೇಶದಿಂದ ವಿರೋಧ ಪಕ್ಷಗಳು ಕರ್ನಾಟಕ ಸರ್ಕಾರದ ಐದು ಗ್ಯಾರಂಟಿಗಳ ಬಗ್ಗೆ ಅಪಪ್ರಚಾರ ಮಾಡುತ್ತಿವೆ. ಇದಕ್ಕೆ ಜನ ಮನ್ನಣೆ ನೀಡಬಾರದು. ನಮ್ಮ ಸರ್ಕಾರ ಶಕ್ತಿ ಯೋಜನೆ, ಗೃಹಜ್ಯೋತಿ ಯೋಜನೆಯಂತೆ ಗೃಹಲಕ್ಷ್ಮಿ ಯೋಜನೆಯನ್ನೂ ಪರಿಣಾಮಕಾರಿಯಾಗಿ ಜಾರಿ ಗೊಳಿಸಲಿದೆ. ಅದಕ್ಕಾಗಿ ಬೇಕಾದ ಹಣಕಾಸಿನ ಕ್ರೋಢೀಕರಣಕ್ಕೂ ಮುಂದಾಗಿದ್ದೇವೆ. ರಾಜ್ಯದ ಜನತೆ ಐದು ಗ್ಯಾರಂಟಿ ಸೌಲಭ್ಯ ಪಡೆದುಕೊಳ್ಳಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಹಲಸಿನ ಹಬ್ಬ

ಸದಾನಂದ, ಸರ್ವಋತು, ಅಂಟು ರಹಿತ, ಕೆಂಪು ಹಲಸಿನ ತಳಿಗಳಾದ ಸಿದ್ದು, ಶಂಕರ ಮತ್ತು ಇತರ ತಳಿಯ ಹಲಸಿನ ಹಣ್ಣುಗಳನ್ನು ಹಬ್ಬದಲ್ಲಿ ಪ್ರದರ್ಶಿಸಲಾಗಿದೆ.

ತಿಪಟೂರು, ಚೇಳೂರಿನ ಕೆಂಪು ತೊಳೆಯ ಹಲಸು, ಕೊಳ್ಳೇಗಾಲದ ಸಹಜ ಕೃಷಿಕ ಕೈಲಾಸಮೂರ್ತಿ ಅವರು ಬೆಳೆದ ಹಲಸಿನ ತಳಿ, ಬೆಳವಲ ತೋಟದ ಫುಟ್‌ಬಾಲ್ ಗಾತ್ರದ ರುದ್ರಾಕ್ಷಿ ಹಲಸು, ಕೆಂಪು–ಹಳದಿ–ಬಿಳಿ ಹಲಸಿನ ತಳಿಯ ಹಣ್ಣುಗಳನ್ನು ನೋಡಲು ಮತ್ತು ಸವಿಯಲು ಜನರು ಹಬ್ಬಕ್ಕೆ ಅತ್ಯಧಿಕ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

ಹಲಸಿನ ಐಸ್‌ಕ್ರೀಂ, ಚಿಪ್ಸ್, ಚಾಕೊಲೇಟ್, ಹಪ್ಪಳ, ಹಲ್ವ, ಕಬಾಬ್, ಹೋಳಿಗೆ, ವಡೆ, ದೋಸೆ, ಪಲ್ಯ, ಬಿರಿಯಾನಿ ಮುಂತಾದ ಹಲಸಿನ ಖಾದ್ಯಗಳು, ವಿವಿಧ ಬಗೆಯ ಉಪ್ಪಿನ ಕಾಯಿಗಳು, ಸಿರಿಧಾನ್ಯಗಳು, ಕೃಷಿ ಪರಿಸರ ಮಾದರಿಯ ತೋಟದಲ್ಲಿ ರಾಗಿ, ಬಾಳೆ, ನೇರಳೆ, ಕರಿಬೇವು, ಕಡಲೆಕಾಯಿ ಬೀಜ, ಸೊಪ್ಪುಗಳಂತಹ ಮಾನವನಿಗೆ ಅಗತ್ಯವಿರುವ ಪೌಷ್ಟಿಕಾಂಶದ ಆಹಾರ ಪದಾರ್ಥ ಬೆಳೆಯುವ ಬಗ್ಗೆಯೂ ಹಲಸಿನ ಹಬ್ಬದಲ್ಲಿ ಪ್ರದರ್ಶಿಸಲಾಗಿದೆ. ತರಕಾರಿ ಬೀಜ, ದೇಸೀ ಭತ್ತ, ತೆಂಗು, ಮಾವು, ಧಾನ್ಯ, ಮೌಲ್ಯವರ್ಧಿತ ಉತ್ಪನ್ನಗಳು, ವಿವಿಧ ತಳಿಯ ಹಲಸಿನ ಸಸಿಗಳನ್ನೂ ಮಾರಾಟ ಮಾಡಲಾಗುತ್ತಿದ್ದು, ಜನರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ಹಲಸಿನ ಹಣ್ಣು ಎತ್ತುವ ಮತ್ತು ತೂಕ ಅಂದಾಜಿಸಿ ಹೇಳುವ ಸ್ಪರ್ಧೆಯೂ ನಡೆಯಿತು. ನಾಳೆ (ಭಾನುವಾರ) ಬೆಳಗ್ಗೆ 10 ಗಂಟೆಗೆ 5 ರಿಂದ 12 ವರ್ಷದೊಳಗಿನ ಮಕ್ಕಳಿಗೆ 'ನಾ ಕಂಡ ಹಲಸು' ಚಿತ್ರಕಲಾ ಸ್ಪರ್ಧೆ, ಮಧ್ಯಾಹ್ನ 12 ಗಂಟೆಗೆ 'ಹಲಸಿನ ಅಡುಗೆ ಸ್ಪರ್ಧೆ ಹಾಗೂ ಮಧ್ಯಾಹ್ನ 2 ಗಂಟೆಗೆ ಹಲಸಿನ ಹಣ್ಣು ತಿನ್ನುವ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಹುಲಿ ಸಂರಕ್ಷಿತ ಪ್ರದೇಶಗಳಿಗೆ ಮಾರಕವಾದ
ಕೌನ್ಸಿಲಿಂಗ್ ಮೂಲಕ ಸಿಬ್ಬಂದಿ ವರ್ಗಾವಣೆ ಪ್ರಕ್ರಿಯೆ

● ಮುಂಚೂಣಿ ಸಿಬ್ಬಂದಿಗಳಲ್ಲಿ ಭುಗಿಲೆದ್ದ ಅಸಮಾಧಾನ ● ಕೌನ್ಸಿಲಿಂಗ್ ಪ್ರಕ್ರಿಯೆಯಿಂದ ಆರ್‌ಎಫ್‌ಓ, ಎಸಿಎಫ್, ಡಿಸಿಎಫ್‌ಗೆ ವಿನಾಯಿತಿ ● ನಗರ ಪ್ರದೇಶ ಹಾಗೂ ಉತ್ತರ ಕರ್ನಾಟಕದ ಸಿಬ್ಬಂದಿ ಅನುಕೂಲಕಾರಿ ● ಹಳೆ ಮೈಸೂರು, ಹುಲಿ ಸಂರಕ್ಷಿತ ಪ್ರದೇಶ, ವನ್ಯಧಾಮಗಳ ಸಿಬ್ಬಂದಿಗೆ ಪ್ರತಿಕೂಲ

ಮೈಸೂರು,ಜೂ.24(ಎಂಟಿವೈ)– ಅರಣ್ಯ ಇಲಾಖೆ ಮುಂಚೂಣಿ ಸಿಬ್ಬಂದಿಗಳಿಗೆ ಸೀಮಿತಗೊಳಿಸಿ ಜಾರಿಗೆ ತರಲು ಉದ್ದೇಶಿಸಿರುವ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆ ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಧಾಮಗಳಿಗೆ ಕಂಟಕವಾಗಿ ಮಾರ್ಪಟ್ಟಿದ್ದು, ಇದೀಗ ಮುಂಚೂಣಿ ಸಿಬ್ಬಂದಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಕರ್ನಾಟಕದಲ್ಲಿ ಅರಣ್ಯ ಇಲಾಖೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಅರಣ್ಯಾಧಿಕಾರಿಗಳು ಮತ್ತು ವರ್ಗಾವಣೆ ಹಾಗೂ ಸ್ಥಳ ನಿಯಂತ್ರಣ) ಅಧಿನಿಯಮ 2016 ಹಾಗೂ 2019 ನಿಯಮದಡಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವುದಕ್ಕೆ ಮುಂದಾಗಿದ್ದು, ನಿಯಮದಲ್ಲಿ ಹಲವು ಲೋಪದೋಷಗಳಿದ್ದು, ಭವಿಷ್ಯದಲ್ಲಿ ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಧಾಮಗಳ ಸಂಪತ್ತಿನ ರಕ್ಷಣೆಗೆ ಸಿಬ್ಬಂದಿಗಳ ಕೊರತೆ ಎದುರಾಗುವ ಎಲ್ಲಾ ಲಕ್ಷಣ ಗೋಚರಿಸುತ್ತಿವೆ.

ಕೌನ್ಸಿಲಿಂಗ್ ವರ್ಗಾವಣೆ ಪದ್ಧತಿಯು ನಗರ ಪ್ರದೇಶ ಹಾಗೂ ಉತ್ತರ ಕರ್ನಾಟಕ ಭಾಗದ ಅರಣ್ಯ ಸಿಬ್ಬಂದಿಗಳಿಗೆ ವರದಾನವಾದರೂ, ಹುಲಿ ಸಂರಕ್ಷಿತ ಪ್ರದೇಶ ಹಾಗೂ ವನ್ಯಧಾಮಗಳು, ದಟ್ಟ ಅರಣ್ಯ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ಅರಣ್ಯ ಸಿಬ್ಬಂದಿಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಲಿದೆ. ತಾರತಮ್ಯ ನೀತಿಗೆ ಮನ್ನಣೆ ನೀಡಿದಂತಾಗುತ್ತಿದೆ ಎಂದು ಮುಂಚೂಣಿ ಅರಣ್ಯ ಸಿಬ್ಬಂದಿಗಳ ವಾದವಾಗಿದೆ.

ಕೌನ್ಸಿಲಿಂಗ್ ವರ್ಗಾವಣೆ ನಿಯಮವು ಅರಣ್ಯ ವೀಕ್ಷಕ, ಅರಣ್ಯ ರಕ್ಷಕ ಹಾಗೂ ಡಿಆರ್‌ಎಫ್‌ಓಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಆದರೆ, ಕೌನ್ಸಿಲಿಂಗ್ ವರ್ಗಾವಣೆ ನೀತಿಯಿಂದ ಆರ್‌ಎಫ್‌ಓ, ಎಸಿಎಫ್ ಹಾಗೂ ಡಿಸಿಎಫ್ ಸೇರಿದಂತೆ ಹಿರಿಯ ಅಧಿಕಾರಿಗಳನ್ನು ದೂರ ಇಡಲಾಗಿದೆ. ಇದು ಕೂಡ ಮುಂಚೂಣಿ ಸಿಬ್ಬಂದಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಅರಣ್ಯ ಸಂರಕ್ಷಣೆಯಲ್ಲಿ ಬಹುಮುಖ್ಯ ಪಾತ್ರವಹಿಸುವ ಮುಂಚೂಣಿ ಸಿಬ್ಬಂದಿಗಳಿಗೆ ಅವೈಜ್ಞಾನಿಕ ಕೌನ್ಸಿಲಿಂಗ್ ವರ್ಗಾವಣೆ ನೀತಿ ಅನುಸರಿಸಲಾಗುತ್ತಿದೆ ಎಂಬ ಅಸಮಾಧಾನ ಹೊರಹಾಕುತ್ತಿದ್ದಾರೆ.

ಕೌನ್ಸಿಲಿಂಗ್‌ನಿಂದಾಗುವ ಸಮಸ್ಯೆ: ಅರಣ್ಯ ಇಲಾಖೆ ಜಾರಿಗೊಳಿಸುವ ಕೌನ್ಸಿಲಿಂಗ್ ಪದ್ಧತಿಯಿಂದಾಗಿ ನಗರ ಪ್ರದೇಶದಲ್ಲಿ ಕೆಲಸ ಮಾಡುವ ಸಿಬ್ಬಂದಿ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಅಕ್ಕ–ಪಕ್ಕದ ವಲಯಗಳಲ್ಲೇ ಸೇವೆ ಸಲ್ಲಿಸಬಹುದಾದ ಅವಕಾಶ ಸಿಗಲಿದೆ. ಕೆಲವು ನಿಬಂಧನೆಗಳನ್ನು ವಿಧಿಸಲಾಗಿದ್ದು, ಅದು ಕೂಡ ಕೌನ್ಸಿಲಿಂಗ್ ಪದ್ಧತಿಯಲ್ಲಿ ವರ್ಗಾವಣೆ ಆಗುವ ನಗರ ಪ್ರದೇಶದಲ್ಲಿ ಕೆಲಸ ಮಾಡುವ ಅರಣ್ಯ ಸಿಬ್ಬಂದಿಗಳಿಗೂ ಹೊಡೆತ ಬೀಳಲಿದೆ.



ಹಳೆ ಮೈಸೂರು ಭಾಗದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶ, ಮಲೆಮಹದೇಶ್ವರ ಬೆಟ್ಟ ವನ್ಯಧಾಮ, ಕಾವೇರಿ ವನ್ಯಧಾಮ ಸೇರಿದಂತೆ ದಟ್ಟಾರಣ್ಯಗಳ ವಿವಿಧ ವಲಯಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ತೊಂದರೆಯಾಗಲಿದೆ. ಅವರು ಸೇವಾ ಅವಧಿಯುದ್ದಕ್ಕೂ ಕೋರ್ ಏರಿಯಾಗಳಲ್ಲೇ ಸೇವೆ ಸಲ್ಲಿಸಬೇಕಾದ ಅನಿವಾರ್ಯತೆ ಮುಂದುವರೆಯಲಿದೆ. ಈ ಕಾರಣದಿಂದಲೂ ಸಿಬ್ಬಂದಿಗಳಲ್ಲಿ ಅಸಮಾಧಾನದ ಕಿಡಿ ಹೊತ್ತಿದೆ.

ಈ ಪದ್ಧತಿಯಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕೋರ್ ಪ್ರದೇಶಗಳಾದ ಮೂಲೆಹೊಳೆ, ಕಲ್ಕರೆ, ಗುಂಡ್ರೆ, ಬಂಡೀಪುರ ಹಾಗೂ ಕುಂದಕೆರೆ, ನಾಗರಹೊಳೆಯ ಕಲ್ಲಳ್ಳ, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶ ಕೆ.ಗುಡಿ ವಲಯ ಸೇರಿದಂತೆ ಇನ್ನಿತರ ವಲಯಗಳು ನಾಗರಿಕ ಪ್ರದೇಶಕ್ಕಿಂತ ಹತ್ತಾರು ಕಿ.ಮಿ ದೂರದ ದಟ್ಟಾರಣ್ಯದಲ್ಲಿದ್ದು, ಆ ವಲಯಗಳಲ್ಲಿ ಸೇವೆ ಸಲ್ಲಿಸಲು ಮುಂದೆ ಬರುವವರ ಸಂಖ್ಯೆ ಕ್ಷೀಣಿಸಲಿದೆ. ಇದರಿಂದ ಅರಣ್ಯ ಅಪರಾಧ ತಡೆಗೆ ಹಿನ್ನೆಡೆಯಾಗುವ ಆತಂಕವೂ ಎದುರಾಗಿದೆ. ಇದರಿಂದ ಕೌನ್ಸಿಲಿಂಗ್ ಪದ್ಧತಿ ರದ್ದು ಮಾಡುವಂತೆ ಮುಂಚೂಣಿ ಸಿಬ್ಬಂದಿಗಳ ಸಂಘ ಆಗ್ರಹಿಸಿದೆ.

ಹತ್ತಾರು ಶಾಸಕರಿಂದ ಶಿಫಾರಸು ಪತ್ರ: ಕೌನ್ಸಿಲಿಂಗ್ ಪ್ರಕ್ರಿಯೆ ಮೂಲಕ ವರ್ಗಾವಣೆ ಮಾಡಲು ಮುಂದಾಗಿರುವ ಕ್ರಮದಿಂದ ಮುಂಚೂಣಿ ಸಿಬ್ಬಂದಿಗಳಿಗೆ ತೊಂದರೆಯಾಗುವುದನ್ನು ಮನಗಂಡು, ಈಗಾಗಲೇ ಈ ವರ್ಗಾವಣೆ ಪ್ರಕ್ರಿಯೆಯನ್ನು ರದ್ದು ಮಾಡುವಂತೆ ಹತ್ತಾರು ಕ್ಷೇತ್ರಗಳ ಶಾಸಕರು ಪತ್ರ ಬರೆದಿದ್ದಾರೆ. ಆದರೆ, ಹಿರಿಯ ಅಧಿಕಾರಿಯೊಬ್ಬರು ಈ ಪದ್ಧತಿಯನ್ನು ಜಾರಿಗೊಳಿಸಲೇಬೇಕೆಂದು ಹಠಕ್ಕೆ ಬಿದ್ದಿರುವುದರಿಂದ ಮುಂದಿನ ದಿನಗಳಲ್ಲಿ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ತೊಡಕಾಗುವ ಆತಂಕ ನಿರ್ಮಾಣವಾಗಿದೆ.

ನಿಯಮದಲ್ಲಿ ದೋಷ: ಕೌನ್ಸಿಲಿಂಗ್ ಪದ್ಧತಿಯಲ್ಲಿ ಆರ್‌ಎಫ್‌ಓ ಹುದ್ದೆ ಒಳಗೊಂಡಂತೆ ಹಿರಿಯ ಅಧಿಕಾರಿಗಳನ್ನು ಸೇರಿಸದಿರುವುದು, ವರ್ಗಾವಣೆಗೆ ಅಂಕ ನಿಗದಿಪಡಿಸಿರುವುದು, ಪರಸ್ಪರ ವರ್ಗಾವಣೆ ಮತ್ತು ನಿಯೋಜನೆಗೆ ಅವಕಾಶವಿಲ್ಲದಿರುವುದು, ಪತಿ–ಪತ್ನಿ ವರ್ಗಾವಣೆಗೆ ಆದ್ಯತೆ ನೀಡಿಲ್ಲ. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ2(6) ನಿಯಮಕ್ಕೆ ವಿರುದ್ಧವಾದ ಅಂಶ ಒಳಗೊಂಡಿರುವುದು. ರೊಟೇಶನ್ ಆಧಾರದಲ್ಲಿ ವರ್ಗಾವಣೆ ಅಸಾಧ್ಯವಾಗಿದೆ. ವಿವಿಧ ವರ್ಗಗಳ ಹುದ್ದೆ ಹಂಚಿಕೆಯಲ್ಲಿ ತಾರತಮ್ಯ, 58 ವರ್ಷದವರೆಗೂ ಮಾತ್ರ ತಾಲೂಕಿನಲ್ಲಿ ಸೇವೆಗೆ ಅವಕಾಶ ನೀಡದಿರುವುದು ಸೇರಿದಂತೆ ಹಲವು ಷರತ್ತು ವಿಧಿಸಲಾಗಿದೆ. ಈ ಎಲ್ಲಾ ಷರತ್ತುಗಳು ಮುಂಚೂಣಿ ಸಿಬ್ಬಂದಿಗಳನ್ನು ಶೋಷಣೆಗೆ ಗುರಿಪಡಿಸಲಿದೆ ಎಂದು ಅರಣ್ಯ ಸಿಬ್ಬಂದಿಗಳ ಅಭಿಪ್ರಾಯವಾಗಿದೆ.

ಸಿಎಂ ಮೊರೆ ಹೋಗಲು ನಿರ್ಧಾರ

ಅವೈಜ್ಞಾನಿಕ ಕೌನ್ಸಿಲಿಂಗ್ ವರ್ಗಾವಣೆ ಪದ್ಧತಿ ರದ್ದು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲು ಅರಣ್ಯ ಇಲಾಖೆಯ ಮುಂಚೂಣಿ ನೌಕರರ ಸಂಘ ನಿರ್ಧರಿಸಿದೆ. ಭವಿಷ್ಯದ ಅರಣ್ಯ ಸಂಪತ್ತಿನ ಸಂರಕ್ಷಣೆಗಾಗಿ ಕೌನ್ಸಿಲಿಂಗ್ ಪದ್ಧತಿ ರದ್ದು ಮಾಡುವಂತೆ ಹಾಗೂ ಅರಣ್ಯ ಸಂಪತ್ತಿನ ರಕ್ಷಣೆ ಮಾಡುವ ಮುಂಚೂಣಿ ಸಿಬ್ಬಂದಿಗಳ ಹಿತಕಾಯುವಂತೆ ಮನವಿ ಮಾಡಲು ಸಂಘದ ಪದಾಧಿಕಾರಿಗಳು ನಿರ್ಧರಿಸಿದ್ದಾರೆ.



ಮುಜರಾಯಿ ಇಲಾಖೆ ದೇವಸ್ಥಾನಗಳಲ್ಲಿ ಸರ್ವರಿಗೂ ಮುಕ್ತ ಪ್ರವೇಶ

ಬೆಂಗಳೂರು, ಜೂ.24– ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿ ಜಾತಿ ಹಾಗೂ ಲಿಂಗಭೇಧವಿಲ್ಲದೆ ಸರ್ವರಿಗೂ ಮುಕ್ತ ಪ್ರವೇಶ ಎಂಬ ಫಲಕವನ್ನು ಅಳವಡಿಸುವುದು ಕಡ್ಡಾಯ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಕಾಂಗ್ರೆಸ್, 'ಯಾವುದೇ ದೇವಸ್ಥಾನಗಳಲ್ಲಿ ದಲಿತರು, ಸ್ತ್ರೀಯರು ಎಂಬ ತಾರತಮ್ಯ ಮಾಡದಂತೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು. ಧಾರ್ಮಿಕ ಸ್ವತಂತ್ರದ ವಾತಾವರಣ ನಿರ್ಮಿಸುವುದೇ ನಿಜವಾದ ಧರ್ಮ ರಕ್ಷಣೆ ಎಂದು ನಂಬಿದೆ ನಮ್ಮ ಸರ್ಕಾರದ್ದು ಎಂದು ಬರೆದುಕೊಂಡಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟರ ಹಾಸ್ಟೆಲ್‌ಗಳು ಅವ್ಯವಸ್ಥೆಯ ಕೂಪವಾಗಿದ್ದವು. ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಕಡಿತಗೊಳಿಸಲಾಗಿತ್ತು. ದಲಿತರಿಗೆ ಗುಣಮಟ್ಟದ ಶಿಕ್ಷಣ, ಗುಣಮಟ್ಟದ ಆಹಾರ ನೀಡುವ ನಿಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ಮಹತ್ವದ ಬದಲಾವಣೆ ತರುತ್ತಿದೆ. ಪರಿಶಿಷ್ಟರ ಹಾಸ್ಟೆಲ್‌ಗಳಲ್ಲಿ ಸೋನಾ ಮಸೂರಿ ಅಕ್ಕಿಯನ್ನು ಬಳಸುವಂತೆ ಸಚಿವರಾದ ಮಹದೇವಪ್ಪ ಹಾಗೂ ಬಿ. ನಾಗೇಂದ್ರ ಆದೇಶಿಸಿದ್ದಾರೆ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಸಂವಿಧಾನಪೂರ್ವ ಪೀಠಿಕೆ ಓದುವುದನ್ನು ಕಡ್ಡಾಯ ಮಾಡಿ

ಜೈ ಭೀಮ್ ಜನಸ್ಪಂದನಾ ವೇದಿಕೆ ಮನವಿ

ಮೈಸೂರು, ಜೂ. 24– ಎಲ್ಲಾ ಅನುದಾನಿತ, ಅನುದಾನ ರಹಿತ, ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಇನ್ನು ಮುಂದೆ ನಾಡಗೀತೆ, ರಾಷ್ಟ್ರಗೀತೆಯ ನಂತರ ಸಂವಿಧಾನದ ಪೀಠಿಕೆಯನ್ನು ಕಡ್ಡಾಯವಾಗಿ ಓದಿಸಬೇಕು ಎಂದು ಜೈ ಭೀಮ್ ಜನಸ್ಪಂದನಾ ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು ಮನವಿ ಮಾಡಿದ್ದಾರೆ.

ರಾಜ್ಯದ ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಲ್ಲಿ ಕೂಡ ಸಂವಿಧಾನದ ಪೀಠಿಕೆಯ ಚಿತ್ರವನ್ನು ಹಾಕಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿ ಆದೇಶಿಸಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದ್ದಾರೆ.

ಪ್ರಸ್ತುತ ಕೋಮುವಾದಿ ಮನಸ್ಥಿತಿ ಉಳ್ಳವರು ಮತ್ತು ಕೋಮುಶಕ್ತಿಗಳು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಹಿನ್ನೆಲೆಯಲ್ಲಿ ಸಂವಿಧಾನದ ಬಗೆಗಿನ ಗೌರವ ಹೆಚ್ಚಿಸಲು ಹಾಗೂ ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಅಸಂವಿಧಾನದ ಬಗೆಗಿನ ಅರಿವು ಮೂಡಿಸಲು, ಎಲ್ಲ ಇಲಾಖೆಯ ನೌಕರರಲ್ಲಿ ಸಂವಿಧಾನದ ಬಗೆಗಿನ ಗೌರವ ಮತ್ತು ಶ್ರದ್ಧೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಸಚಿವ ಸಂಪುಟದಲ್ಲಿ ಕಡ್ಡಾಯವಾಗಿ ಸಂವಿಧಾನದ ಪೀಠಿಕೆಯನ್ನು ಓದುವುದು ಮತ್ತು ಸಂವಿಧಾನದ ಚಿತ್ರದ ಫೋಟೊವನ್ನು ಹಾಕಬೇಕೆಂಬ ತೀರ್ಮಾನ ಕೈಗೊಂಡು ಒಪ್ಪಿಗೆ ನೀಡಿರುವುದು ಸ್ವಾಗತಾರ್ಹ ಎಂದು ತಿಳಿಸಿದ್ದಾರೆ.

ಬಡರೋಗಿಗಳಿಗೆ ನೂರು ಕನ್ನಡಕ ವಿತರಣೆ



ಮೈಸೂರು, ಜೂ.24(ಜಿಎ)–ಡಾ.ಪಿನ್ನಪಾಟಿ ಪದ್ಮನಾಭನ್ ಚಾರಿಟಬಲ್ ಫೌಂಡೇಶನ್ ಮತ್ತು ನಿತ್ಯ ಅನ್ನದಾನ ಚಾರಿಟಬಲ್ ಟ್ರಸ್ಟ್ ಪ್ರಾರಂಭೋತ್ಸವದ ಅಂಗವಾಗಿ ನೂರು ಬಡರೋಗಿಗಳಿಗೆ ಉಚಿತ ಕನ್ನಡಕ ವಿತರಣೆ ಮಾಡಲಾಯಿತು.

ನಗರದ ಪುರಭವನದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಮತ್ತು ಮೇಯರ್ ಶಿವಕುಮಾರ್ ಅವರು ಕನ್ನಡಕ ವಿತರಣೆ ಮಾಡಿದರು. ನಂತರ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಕಳೆದ ನಾಲ್ಕು ತಿಂಗಳ ಹಿಂದೆ ಪದ್ಮನಾಭನ್ ಅವರು ಬಂದು ಈ ಟ್ರಸ್ಟ್ ಆರಂಭಿಸಿ ಸಮಾಜಮುಖಿ ಕಾರ್ಯಕ್ರಮಗಳ ಬಗ್ಗೆ ವಿತರಿಸಿದರು. ಜಿಲ್ಲೆಯ ಎಲ್ಲಾ ಶಾಸಕರು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ, ಬಡತನ ರೇಖೆಯಲ್ಲಿರುವ ಸಾರ್ವಜನಿಕರನ್ನು ಗುರುತಿಸಿ ಇಂದು ಕನ್ನಡಕ ವಿತರಣೆ ಮಾಡಿದ್ದಾರೆ. ಇದು ಉತ್ತಮ ಕೆಲಸವಾಗಿದ್ದು, ನಿರಂತರವಾಗಿ ಇಂಥ ಕೆಲಸಗಳನ್ನು ಟ್ರಸ್ಟ್ ವತಿಯಿಂದ ಮುಂದುವರೆಸಿ ಎಂದು ಶುಭಕೋರಿದರು.

ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಎಂ.ಶಿವಣ್ಣ, ಕೆ.ಆರ್ ಆಸ್ಪತ್ರೆ ಐ ಬ್ಯಾಂಕ್‌ನ ಪಿ.ಚಂದ್ರಕಲಾ, ಟ್ರಸ್ಟ್ ಅಧ್ಯಕ್ಷ ಡಾ.ಪಿನ್ನಪಾಟಿ ಪದ್ಮನಾಭನ್, ಉಪಾಧ್ಯಕ್ಷ ಜಬ್ಬರ್ ಸಿಂಗ್, ಕೋಶಾಧ್ಯಕ್ಷೆ ಎ.ವಿಜಯಲಕ್ಷ್ಮಿ ಮತ್ತು ಡಾ.ಮದನ್ ಲಾಲ್ ಉಪಸ್ಥಿತರಿದ್ದರು.

ಇಂದು ಗಂಧರ್ವ ಗಾನ ಲಹರಿ ಸಂಗೀತ ಸಂಜೆ

ಮೈಸೂರು,ಜೂ.24(ಪಿಎಂ)– ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ ವತಿಯಿಂದ ಗ್ರೂಪ್‌ನ ಮೊದಲ ವಾರ್ಷಿಕೋತ್ಸವ ಅಂಗವಾಗಿ ಜೂ.25ರಂದು 'ಗಂಧರ್ವ ಗಾನ ಲಹರಿ' ಶೀರ್ಷಿಕೆಯಡಿ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗ್ರೂಪ್‌ನ ಗಾಯಕ ಪಿ.ಮೋಹನ್ ಕುಮಾರ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಟಿ.ಎಸ್. ಶ್ರೀವತ್ಸ ಉದ್ಘಾಟಿಸಲಿದ್ದಾರೆ ಎಂದರು.



ಅತಿಥಿಗಳಾಗಿ ಮೇಯರ್ ಶಿವಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ. ಮಂಜುನಾಥ್, ಗಾಯಕ ಜಾರ್ಜ್ ಪ್ರಭಾಕರ್, ಸಮಾಜ ಸೇವಕ ರವಿಗೌಡ ಪಾಲ್ಗೊಳ್ಳಲಿದ್ದಾರೆ. ನಮ್ಮ ಗ್ರೂಪ್ ಹವ್ಯಾಸಿ ಗಾಯಕರ ತಂಡವಾಗಿದ್ದು, 20 ಸದಸ್ಯರ ಪೈಕಿ ಅಂದು 13 ಗಾಯಕರು ಹಾಡಲಿದ್ದಾರೆ. ಕರೋಕೆ ವಿಧಾನದಲ್ಲಿ ಸುಮಾರು 46 ಗೀತೆಗಳನ್ನು ಸಾದರಪಡಿಸಲಿದ್ದೇವೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದು ತಿಳಿಸಿದರು. ಗ್ರೂಪ್‌ನ ಗಾಯಕರಾದ ಕೆ.ಜೆ.ಶೇಖರ್, ರಮೇಶ್, ಮಂಜುಳಾ ಗೋಷ್ಠಿಯಲ್ಲಿದ್ದರು.

ತರಬೇತಿ ಶಿಬಿರ

ಮೈಸೂರು, ಜೂ. 24– ಮೈಸೂರಿನ ದೇಸಿರಂಗ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಜೂ. 27 ರಿಂದ ಜು. 10 ರವರೆಗೆ 14 ದಿನಗಳ ಕಾಲ ರಂಗಭೂಮಿ ಮತ್ತು ಕರ್ನಾಟಕದ ಮೂಲ ಜನಪದ ನೃತ್ಯಗಳ ತರಬೇತಿ (ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಮಾರಿಕುಣಿತ, ಕೋಲಾಟ) ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪ್ರತಿದಿನ ಸಂಜೆ 4.30 ರಿಂದ 6 ರವರೆಗೆ ಕಲಾಮಂದಿರದ ಆವರಣದಲ್ಲಿ ತರಬೇತಿ ನೀಡಲಾಗುವುದು. ಮೊ. 7019441509 ಸಂಪರ್ಕಿಸಬಹುದು.

ಇಂದೋರ್ ಕಸ ವಿಂಗಡಣೆ ವ್ಯವಸ್ಥೆ ಮೈಸೂರಿನಲ್ಲಿ ಅಳವಡಿಸಲು ಕ್ರಮ

ಇಂದೋರ್ ಪ್ರವಾಸದ ಮಾಹಿತಿ ಹಂಚಿಕೊಂಡ ಮೇಯರ್, 28ಕ್ಕೆ ಸಭೆ

ಮೈಸೂರು, ಜೂ.24(ಜಿಎ)–ಇಂದೋರ್‌ನಲ್ಲಿ ಕಸ ವಿಂಗಡಣೆ ಮತ್ತು ಸ್ವಚ್ಛತೆಯ ಬಗ್ಗೆ ವಹಿಸಿರುವ ವ್ಯವಸ್ಥೆಗಳು ಉತ್ತಮವಾಗಿದ್ದು, ಮೈಸೂರಿನಲ್ಲಿಯೂ ಅದೇ ರೀತಿ ಅಳವಡಿಸಲು ಜೂ.28ರಂದು ವಿಶೇಷ ಸಭೆ ನಡೆಸಲಾಗುತ್ತದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಇಂದೋರ್ ಪ್ರವಾಸ ಮುಗಿಸಿ, ಮೈಸೂರಿಗೆ ಆಗಮಿಸಿರುವ ಮೇಯರ್ ಶಿವಕುಮಾರ್ ಮಾಧ್ಯಮಗಳೊಂದಿಗೆ ಮಾತನಾಡಿದರು.

ಸತತ ಎರಡು ಬಾರಿ ಸ್ವಚ್ಛ ನಗರಿ ಪಟ್ಟ ಇಂದೋರ್‌ಗೆ ಲಭಿಸಿದ ಹಿನ್ನೆಲೆಯಲ್ಲಿ ಅಲ್ಲಿನ ಪೌರಕಾರ್ಮಿಕರು ಹೇಗೆ ಕಾರ್ಯ ನಿರ್ವಹಿಸುತ್ತಾರೆ. ಕಸ ವಿಂಗಡಣೆಗೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿದು ಕೊಳ್ಳಲು 48 ಪಾಲಿಕೆ ಸದಸ್ಯರೊಳಗೊಂಡಂತೆ ನಾನು ಇಂದೋರ್ ಪ್ರವಾಸ ಕೈಗೊಂಡಿದ್ದೆ ಎಂದು ತಿಳಿಸಿದರು.

ಪ್ರವಾಸದಲ್ಲಿ ನಾವು ನೋಡಿದಂತೆ ಇಂದೋರ್‌ನಲ್ಲಿ ಪ್ರಮುಖವಾಗಿ ಪೌರಕಾರ್ಮಿಕರು ಬೆಳಗ್ಗೆ 5.30ರಿಂದ ಮಧ್ಯಾಹ್ನ 1 ಗಂಟೆವರೆಗೂ ಹಾಗೂ ಮಧ್ಯಾಹ್ನ 3 ರಿಂದ ರಾತ್ರಿ 8 ಗಂಟೆವರೆಗೂ ಎರಡು ಪಾಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜೊತೆಗೆ ಇದಕ್ಕಾಗಿ ವೆಬ್ ಮಾನಿಟರಿಂಗ್ ಸಿಸ್ಟಮ್ ಅಳವಡಿಸಿಕೊಂಡಿದ್ದು, ಕಸ ಸಂಗ್ರಹಿಸುವ ವಾಹನಗಳಿಗೆ ಜಿಪಿಎಸ್ ಅಳವಡಿಸಿದ್ದಾರೆ. ಪೌರಕಾರ್ಮಿಕ ಯಾವ ರೀತಿ ಕಾರ್ಯ ನಿರ್ವಹಿಸುತ್ತಿದ್ದಾನೆ ಎಂಬುದರ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದ್ದಾರೆ ಎಂದರು.



ಇಂದೋರ್‌ನಲ್ಲಿ 85 ವಾರ್ಡ್‌ಗಳಿದ್ದು, ವಾರ್ಡ್‌ಗಳಿಗೂ ಎನ್‌ಜಿಓಗಳನ್ನು ನೇಮಿಸಿಕೊಂಡಿದ್ದಾರೆ. ಆ ಎನ್‌ಜಿಓಗಳು ವಾರ್ಡ್‌ನಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನು ಗಮನಿಸುತ್ತಾರೆ. ಇದಕ್ಕಾಗಿಯೇ ಗೃಹಬಳಕೆ ಮತ್ತು ಕೈಗಾರಿಕೆ ಎಂದು ಪ್ರತ್ಯೇಕ ವಿಂಗ್‌ಗಳನ್ನು ಮಾಡಿದ್ದಾರೆ. ಪ್ರತಿ ನಿತ್ಯ ಸಂಗ್ರಹವಾಗುವ 500 ಟನ್ ಹಸಿ ಕಸವನ್ನು ಬಯೋಗ್ಯಾಸ್ ಮಾಡಲು ಒಂದು ಸಂಸ್ಥೆಗೆ ಗುತ್ತಿಗೆ ನೀಡುತ್ತಿದ್ದು, ಅವರು ಅದಕ್ಕಾಗಿ ಪಾಲಿಕೆಗೆ 2.50 ಕೋಟಿ ರೂ. ರಾಯಧನ ನೀಡುತ್ತಿದ್ದಾರೆ ಎಂದು ತಿಳಿಸಿದರು. ಖರೀದಿ ಮಾಡಿದ ಹಸಿ ಕಸದಲ್ಲಿ 17 ಸಾವಿರ ಕೆ.ಜಿ. ಗ್ಯಾಸ್ ಉತ್ಪಾದಿಸಿ, ಪಾಲಿಕೆಯ ಸಿಎನ್‌ಜಿ ವಾಹನಗಳಿಗೆ ಮತ್ತು ಬಸ್‌ಗೆ ರಿಯಾಯಿತಿ ದರದಲ್ಲಿ ಪೂರೈಕೆ ಮಾಡುತ್ತಾರೆ. ಈ ಎಲ್ಲಾ ಅಂಶಗಳನ್ನು ಪ್ರವಾಸದಲ್ಲಿ ಗಮನಿಸಿದ್ದು, ಇವುಗಳನ್ನು ಮೈಸೂರು ನಗರದಲ್ಲಿ ಜಾರಿ ಮಾಡಲು ಈಗಾಗಲೇ ಆಯುಕ್ತರಿಗೆ ತಿಳಿಸಿದ್ದು, ಈ ವ್ಯವಸ್ಥೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಮತ್ತು ಅದಕ್ಕೆ ತಗುಲುವ ಹೆಚ್ಚುವರಿ ವೆಚ್ಚದ ಬಗ್ಗೆ ಚರ್ಚಿಸಲು ಜೂ.28ರಂದು ಪ್ರವಾಸಕ್ಕೆ ಬಂದಿದ್ದ ಪಾಲಿಕೆ ಸದಸ್ಯರು ಮತ್ತು ಅಧಿಕಾರಿಗಳ ವಿಶೇಷ ಸಭೆ ನಡೆಸುತ್ತೇನೆ. ಮೈಸೂರನ್ನು ಮತ್ತೆ ಸ್ವಚ್ಛನಗರಿಯಾಗಲು ವಿಶೇಷ ಕಾರ್ಯಕ್ರಮವನ್ನು ಆಯೋಜಿಸುತ್ತೇನೆ ಎಂದು ಶಿವಕುಮಾರ್ ತಿಳಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ



ಮೈಸೂರು,ಜೂ.24(ಪಿಎಂ)– ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯು 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ರಷ್ಟು ಅಂಕ ಗಳಿಸಿದ ವಿಶ್ವಕರ್ಮ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದು, ಆಸಕ್ತರು ಜು.30ರೊಳಗೆ ಅರ್ಜಿ ಸಲ್ಲಿಸಬೇಕೆಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಸ್ಟ್ 2ನೇ ವಾರದಲ್ಲಿ ಟ್ರಸ್ಟ್‌ನ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಏರ್ಪಡಿಸಲು ತೀರ್ಮಾನಿಸಲಾಗಿದೆ. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಲು ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಲಾಗುವುದು ಎಂದರು. ನಂ.13, 19ನೇ ಕ್ರಾಸ್, ರೈಲ್ವೆ ಬಡಾವಣೆ, ವಿಜಯನಗರ 2ನೇ ಹಂತ, ಮೈಸೂರು ವಿಳಾಸದಲ್ಲಿರುವ ಟ್ರಸ್ಟ್‌ಗೆ ಸಮುದಾಯದ ವಿದ್ಯಾರ್ಥಿಗಳು, ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಸಲ್ಲಿಸಬಹುದು. ಮೂಲ ಅಂಕಪಟ್ಟಿಯ ಜೆರಾಕ್ಸ್, ವಿದ್ಯಾರ್ಥಿ ಮತ್ತು ಪೋಷಕರ ಆಧಾರ್ ಕಾರ್ಡ್ ಜೆರಾಕ್ಸ್, ಒಂದು ಭಾವಚಿತ್ರ ಲಗತ್ತಿಸಿ ಅರ್ಜಿ ಸಲ್ಲಿಸಬೇಕು. ಸಂಪರ್ಕಕ್ಕಾಗಿ ಮೊಬೈಲ್ ಸಂಖ್ಯೆ ನಮೂದಿಸಬೇಕು. ಪ್ರತಿಭಾ ಪುರಸ್ಕಾರ ನಗದು ಒಳಗೊಂಡಿರಲಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 99026 58188, 99642 25410 ಸಂಪರ್ಕಿಸಬಹುದು ಎಂದು ತಿಳಿಸಿದರು.

ಟ್ರಸ್ಟ್ ಅಧ್ಯಕ್ಷ ಪುಟ್ಟಸ್ವಾಮಾಚಾರ್, ಗೌರವಾಧ್ಯಕ್ಷೆ ಶಾಂತಮ್ಮ, ಖಜಾಂಚಿ ನಿಂಗರಾಜ್, ಮುಖಂಡ ಸಿದ್ದರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.



ಬಾಪುಲಿಂಗರಾಜೇ ಅರಸ್

ಮೈಸೂರಲ್ಲಿ ಬೆಳೆಯಿತು ಸೇಬು

"ಯಾವುದೇ ರಾಸಾಯನಿಕ ಗೊಬ್ಬರ ಬಳಸದೆ ನಾನೇ ತಯಾರಿಸುವ ನೈಸರ್ಗಿಕ ಗೊಬ್ಬರದ ಮಿಶ್ರಣದಿಂದ ಇದನ್ನು ಬೆಳೆದಿದ್ದೇನೆ. ಇದರಿಂದ ಮನೆಯಲ್ಲಿ ಶುದ್ಧ ಗಾಳಿ ಕೂಡ ಸಿಗುತ್ತದೆ. ಬೆಳಿಗ್ಗೆ ಒಂದು ಗಂಟೆ ಹಾಗೂ ಸಂಜೆ ಮೂರು ಗಂಟೆಗಳ ಕಾಲ ಗಿಡಗಳನ್ನು ಪೋಷಣೆಗೆ ಸಮಯ ಮೀಸಲಿಟ್ಟಿದ್ದೇನೆ. ಇದರಿಂದ ನನಗೆ ತೃಪ್ತಿ ಇದೆ. ಜೊತೆಗೆ ಇದರಿಂದ ಆದಾಯ ಕೂಡ ಬರುತ್ತಿದೆ.

–ಶಾರೋನ್ ಪ್ರಸಾದ್

ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ಹಿಮಾಲಯದ ಪರ್ವತ ಶ್ರೇಣಿಗಳಲ್ಲಿ ಹೆಚ್ಚಾಗಿ ಸೇಬು ಬೆಳೆಯುತ್ತದೆ. ಹೆಚ್ಚು ಮಳೆ ಹಾಗೂ ಶೀತ ವಾತಾವರಣ ಸೇಬಿಗೆ ಅನುಕೂಲಕಾರಿ ಪ್ರದೇಶ. ಆದರೆ, ವ್ಯತಿರಿಕ್ತ ವಾತಾವರಣದ ನಡುವೆಯೂ ಮೈಸೂರಿನಲ್ಲಿ ಕೂಡ ಸೇಬು ಬೆಳೆಯಲಾಗುತ್ತಿದೆ. ಅದೂ ತಾರಸಿ ತೋಟಗಾರಿಕೆಯಲ್ಲಿ ಗೃಹಿಣಿಯೊಬ್ಬರು ಮನುಷ್ಯನ ಆರೋಗ್ಯದ ಬಲವಾದ ಈ ಫಲ ಬೆಳೆದು ಸೈ ಎನಿಸಿಕೊಂಡಿದ್ದಾರೆ.

ಸೇಬು ಬೆಳೆಯಲು ಸಮುದ್ರ ಮಟ್ಟದಿಂದ 1500 ರಿಂದ 2700 ಮೀಟರ್ ಎತ್ತರದ ಪ್ರದೇಶವಿರಬೇಕು. ಸೇಬಿನ ಮರಗಳ ಬೆಳವಣಿಗೆ ಫಲವತತ್ತೆ ಜೊತೆಗೆ ಹವಾಗುಣವಿರಬೇಕು. ಅದರಲ್ಲೂ 1000 ರಿಂದ 1250 ಮಿಲಿ ಮೀಟರ್ ಮಳೆ ಬೀಳಬೇಕು. ಆಗ ಮಾತ್ರ ಉತ್ಕೃಷ್ಟ ಸೇಬು ಬೆಳೆಯಲು ಸಾಧ್ಯ. ಆದರೆ ಮೈಸೂರಿನಲ್ಲಿ ಅಷ್ಟು ಪ್ರಮಾಣದ ಮಳೆ ಅಸಾಧ್ಯ. ಸಮುದ್ರ ಮಟ್ಟದಿಂದ ಮೈಸೂರು ಅಷ್ಟೊಂದು ಎತ್ತರ ಪ್ರದೇಶದಲ್ಲೂ ಇಲ್ಲ. ಆದರೂ ಮೈಸೂರಿನ ಹವಾಗುಣದಲ್ಲೇ ಇವರು ಸೇಬು ಬೆಳೆದು, ಪ್ರಯತ್ನದಲ್ಲಿ ಯಶಸ್ಸು ಸಾಧಿಸಿದ್ದಾರೆ.

ಇವರ ಹೆಸರು ಶಾರೋನ್ ಪ್ರಸಾದ್. ಮೈಸೂರಿನ ಬನ್ನಿಮಂಟಪದ ಶ್ರೀ ಶಿವರಾತ್ರೀಶ್ವರ ನಗರದ ನಿವಾಸಿ. ಮೂಲತಃ ಹುಬ್ಬಳ್ಳಿಯವರು. ಮೈಸೂರಿಗೆ ಮದುವೆಯಾಗಿ ಬಂದ ಮೇಲೆ ಕಳೆದ 25 ವರ್ಷಗಳಿಂದ ಇಲ್ಲೆ ನೆಲೆಸಿದ್ದಾರೆ. ಹುಬ್ಬಳ್ಳಿಯಲ್ಲಿದ್ದಾಗ ಅವರ ತಾಯಿ ವೈಲೆಟ್, ತಾರಸಿ ಗಾರ್ಡನ್ ಮಾಡುತ್ತಿದ್ದರು. ತರೇವಾರಿ ಹಣ್ಣು, ಹೂವು, ತರಕಾರಿ ಬೆಳೆಯುತ್ತಿದ್ದರು. ತಾಯಿಯ ಹವ್ಯಾಸವನ್ನು ಇವರು ಮೈಗೂಡಿಸಿಕೊಂಡರು. ಮನೆಯ ಕಾಂಪೌಂಡ್ ಹಾಗೂ ತಾರಸಿಯಲ್ಲಿ ತೋಟ ಮಾಡಿ ಹಲವು ಬಗೆಯ ಹೂವು, ಹಣ್ಣು, ತರಕಾರಿ, ಸೊಪ್ಪು ಬೆಳೆಯುವುದು ಇವರ ಹವ್ಯಾಸ. ಮೈಸೂರಿನಲ್ಲಿ ಸೇಬು ಬೆಳೆಯಲು ಸಾಧ್ಯವೇ ಇಲ್ಲ ಎಂದು ಕೆಲವರು ಹೇಳುತ್ತಿದ್ದನ್ನು ಕೇಳಿ, ಇದನ್ನು ಸವಾಲಾಗಿ ಸ್ವೀಕರಿಸಿದ ಶಾರೋನ್ ಪ್ರಸಾದ್ ಅವರು ಸೇಬು ಬೆಳೆಯಲೇಬೇಕು ಎಂದು ನಿರ್ಧರಿಸಿದರು. ಹಿಮಾಚಲ ಪ್ರದೇಶದಿಂದ 'ಹರಿಮನ್ 1999' ಸೇಬಿನ ತಳಿಯನ್ನು ತರಿಸಿದರು. ಸೇಬು ಬೆಳೆಯುವುದು ಹೇಗೆ ಎಂಬ ಮಾಹಿತಿಯನ್ನು ಪಡೆದರು.



ಒಂದು ಸೇಬಿನ ಗಿಡಕ್ಕೆ 550 ರೂಪಾಯಿ ವೆಚ್ಚವಾಯಿತು. ಜೊತೆಗೆ ಹಿಮಾಚಲ ಪ್ರದೇಶದಿಂದ ತರಿಸಲು ಸಾಗಾಣಿಕೆ ವೆಚ್ಚವನ್ನೂ ಭರಿಸಿದರು. ಗಿಡಕ್ಕೆ ಯಾವುದೇ ರೀತಿಯಲ್ಲೂ ಹಾನಿಯಾಗದಂತೆ 'ರೂಟ್ ಸ್ಟಾಕ್' ಮೂಲಕ ಪ್ಯಾಕ್ ಮಾಡಿ ಕಳುಹಿಸಲಾಗಿತ್ತು. ನಾಲ್ಕು ಬಾರಿ ನೂರಕ್ಕೂ ಹೆಚ್ಚು ಸೇಬಿನ ಗಿಡಗಳನ್ನು ಶಾರೋನ್ ಪ್ರಸಾದ್ ತರಿಸಿಕೊಂಡಿದ್ದರು. ಅವುಗಳಲ್ಲಿ ಕೆಲವನ್ನು ತಾವು ಬೆಳೆಸಿದರೆ, ಮತ್ತೆ ಕೆಲವು ಗಿಡಗಳನ್ನು ಸ್ನೇಹಿತರಿಗೆ ಕೊಟ್ಟು, ಬೆಳೆಸುವ ಸಂಬಂಧ ಸಲಹೆ ನೀಡಿದರು.

ಪರ್ಲ್ ಲೈಟ್, ಕೊಕೊಪಿಟ್ ಮಣ್ಣು ಬಳಸಿ, ಮನೆಯಲ್ಲಿ ತಾವೇ ತಯಾರಿಸಿದ ನೈಸರ್ಗಿಕ ಗೊಬ್ಬರದ ಮಿಶ್ರಣವನ್ನು ಹಾಕಿ ಪೇಂಟ್‌ನ ದೊಡ್ಡದಾದ ಡಬ್ಬಗಳಲ್ಲಿ ಸೇಬು ಗಿಡ ಬೆಳೆಯಲು ಆರಂಭಿಸಿದರು. ವರ್ಷದ ಹಿಂದೆ ಇವರು ನೆಟ್ಟ ಸೇಬಿನ ಗಿಡದಲ್ಲಿ ಈಗ ಹತ್ತಾರು ಸೇಬುಗಳು ಬಿಟ್ಟಿವೆ.

ಈ ತನಕ ಮೂರು ಬಾರಿ ಪ್ರಯತ್ನ ಮಾಡಿದೆ. ಈಗ ನಾಲ್ಕನೇ ಪ್ರಯತ್ನದಲ್ಲಿ ಹಸನಾಗಿ ಬೆಳೆದಿದೆ. ಆದರೆ ತಮ್ಮ ಸ್ನೇಹಿತರಿಗೆ ನೀಡಿದ ಗಿಡಗಳು ಒಣಗಿದ್ದವು. ಮುತುವರ್ಜಿ ವಹಿಸಿ ನಾನು ಬೆಳೆಸಿದ ಗಿಡಗಳಲ್ಲಿ ಹತ್ತಾರು ಸೇಬುಗಳು ಬಿಟ್ಟಿವೆ ಎಂದು ಹರ್ಷಚಿತ್ತರಾಗಿದ್ದಾರೆ ಶಾರೋನ್.

ತುಮಕೂರು ಬಳಿಯ ತಮ್ಮ ನಾಲ್ಕು ಎಕರೆ ಫಾರಂನಲ್ಲಿ ಕೂಡ ಶಾರೋನ್ ಪ್ರಸಾದ್ ಅವರು ಸೇಬಿನ ಗಿಡ ನೆಟ್ಟಿದ್ದರಂತೆ. ಅದರಲ್ಲಿ ಗ್ರೀನ್ ಹಾಗೂ ರೆಡ್ ಆಪಲ್ ತುಂಬಾ ಚೆನ್ನಾಗಿ ಬೆಳೆದಿದೆಯಂತೆ.

ಸೇಬು ಮಾತ್ರವಲ್ಲದೆ ತಮ್ಮ ಮನೆ ತಾರಸಿ ತೋಟದಲ್ಲಿ ಡ್ರ್ಯಾಗನ್ ಫ್ರೂಟ್, ಫ್ಯಾಷನ್ ಫ್ರೂಟ್, ದ್ರಾಕ್ಷಿ, ಕಿತ್ತಳೆ, ದಾಳಂಬಿ ಸೇರಿದಂತೆ ನಾನಾ ರೀತಿಯ ಹಣ್ಣು ಬೆಳೆದಿದ್ದಾರೆ. ಜೊತೆಗೆ ಹೀರೆಕಾಯಿ, ಸೊರೆಕಾಯಿ, ತೊಂಡೆಕಾಯಿ, ಬದನೆಕಾಯಿ, ದಪ್ಪ ಮೆಣಸಿನ ಕಾಯಿ ಸೇರಿದಂತೆ ಹಲವು ತರಕಾರಿ ಬೆಳೆದಿದ್ದಾರೆ. ಜೊತೆಗೆ ಮೆಂತ್ಯಾ, ಸಬ್ಸಿಗೆ, ಪಾಲಕ್, ಕೀರೆ, ಪುದೀನ, ಕೊತ್ತುಂಬರಿ ಸೇರಿದಂತೆ ವಿಧದ ಸೊಪ್ಪುಗಳನ್ನು ಕೂಡ ಹಸನಾಗಿ ಬೆಳೆದಿದ್ದಾರೆ.

ಮನೆಯ ತಾರಸಿ ಮಾತ್ರವಲ್ಲದೆ ಮನೆಯ ಸುತ್ತಲ ಆವರಣದಲ್ಲಿ ಪಾಟ್‌ಗಳಲ್ಲಿ ಹಲವು ಹೂವು ಮತ್ತು ಗಿಡಗಳನ್ನು ಸಮೃದ್ಧವಾಗಿ ಬೆಳೆದಿದ್ದಾರೆ. ಇವರ ಮನೆಗೆ ಕಾಲಿಡುತ್ತಿದ್ದಂತೆ ಗಿಡಗಳು ಸ್ವಾಗತಿಸುತ್ತವೆ. ಜೊತೆಗೆ ಮನಸಿಗೆ ಮುದ ನೀಡುತ್ತವೆ. ಮನೆಯ ಒಳ ಹಾಗೂ ಹೊರಗೆ ನೋಡಿದರೂ ಹಸಿರು ಕಂಗೊಳಿಸುತ್ತದೆ. ಪ್ರತಿದಿನ ಮನೆಯಲ್ಲಿ ಊಟ-ತಿಂಡಿಗೆ ಬೇಕಾಗುವ ಸೊಪ್ಪು, ತರಕಾರಿ ಹಾಗೂ ಹಣ್ಣುಗಳನ್ನು ಮಾರುಕಟ್ಟೆಯಿಂದ ಖರೀದಿಸದೆ ತಾವೇ ಬೆಳೆದು ಅದನ್ನು ಸೇವಿಸುತ್ತೇವೆ ಎಂದು ಹೆಮ್ಮೆಯಿಂದ ನುಡಿಯುವ ಶಾರೋನ್ ಪ್ರಸಾದ್ ಅವರ ಈ ಕಾರ್ಯಕ್ಕೆ ಮಕ್ಕಳಾದ ಕೆವಿನ್ ಹಾಗೂ ಕ್ಲಿಫರ್ಡ್ ಸಾಥ್ ನೀಡುತ್ತಾರೆ. ಒಟ್ಟಾರೆ ತಾರಸಿ ತೋಟ ಹಾಗೂ ನೈಸರ್ಗಿಕ ಕೃಷಿಗೆ ಶಾರೋನ್ ಪ್ರಸಾದ್ ಮಾದರಿಯಾಗಿದ್ದಾರೆ. ಮನೆಯಲ್ಲಿ ಗಿಡ, ಮರಗಳನ್ನು ಬೆಳೆಸಿದರೆ ಶುದ್ಧ ಗಾಳಿ ಜೊತೆಗೆ ಮನೆಗೆ ಬೇಕಾಗುವ ನೈಸರ್ಗಿಕ ಕೃಷಿಯ ಹಣ್ಣು, ತರಕಾರಿ, ಸೊಪ್ಪು ಕೂಡ ಸಿಗುತ್ತದೆ. ಈ ನಿಟ್ಟಿನಲ್ಲಿ ಶಾರೋನ್ ಇನ್ನಿತರರಿಗೆ ಮಾದರಿಯಾಗಿದ್ದಾರೆ.



ವಾರಭವಿಷ್ಯ

25.6.2023 ರಿಂದ 1.7.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಿಥುನ, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ-ಕಟಕ, ಬುಧ-ಮಿಥುನ, ಗುರು-ಮೇಷ, ಶುಕ್ರ-ಕಟಕ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಹೆಚ್ಚಿನ ಗ್ರಹಗಳು ನಿಮ್ಮ ಅನುಕೂಲಕ್ಕಿಲ್ಲ. ಕೆಲ ಸಮಯ ತಾಳ್ಮೆಯಿಂದಿರುವುದೇ ಲೇಸು. ವೃತ್ತಿ ಕ್ಷೇತ್ರದಲ್ಲೂ, ಸಾಂಸಾರಿಕವಾಗಿಯೂ ಅಗ್ನಿ ಪರೀಕ್ಷೆಗಳು ಎದುರಾಗಲಿದೆ. ತೀರಾ ದುಡುಕದಿರಿ, ರಾಹು ಶುಭನಿಲ್ಲ, ಯಾವುದಕ್ಕೂ ರಾಜೀ ಮಾರ್ಗ ಉತ್ತಮ. ಸರ್ಕಾರಿ ಕೆಲಸಗಳು ಅಲ್ಪ ಪ್ರಗತಿಯನ್ನು ಹೊಂದುವುದು. ಖರ್ಚುಗಳು ಹೆಚ್ಚಾಗುವುದರಿಂದ ಸಾಲ ಮಾಡಬೇಕಾದ ಪರಿಸ್ಥಿತಿ ಬರುವುದು.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ-5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹೊಸ ಆರ್ಥಿಕ ಯೋಜನೆಗಳಿದ್ದರೆ ಮುಂದೂಡುವುದು ಉತ್ತಮ. ಆದರೂ ವೃತ್ತಿಪರ ಒತ್ತಡಗಳು ಹೆಚ್ಚಾಗುವುದರಿಂದ ನಿಮ್ಮನ್ನು ಪರೀಕ್ಷಿಸಲಿದೆ. ವಾರ ಮಧ್ಯಾನಂತರ ನಿರೀಕ್ಷಿತ ಹಣ ಕೈ ಸೇರುವುದು. ವ್ಯಾಪಾರ ನಿಮಿತ್ತ ಪ್ರವಾಸಗಳನ್ನು ಕೈಗೊಳ್ಳುವಿರಿ. ರಾಜಕಾರಣಿಗಳಿಗೆ ಅವರ ವಿರೋಧಿಗಳು ಪ್ರಬಲರೆನಿಸುತ್ತಾರೆ. ಆರೋಗ್ಯ ಹದಗೆಡುವುದು. ಟೈಂ ಟೈಂಗೆ ಊಟ ಮಾಡಿ. ಸಟ್ಟಾ, ಜೂಜಿನಿಂದ ನಷ್ಟ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಶ್ರೀ ಗುರುವಿನ ಅನುಗ್ರಹದಿಂದ ಹಾಗೂ ಚಂದ್ರಬಲ ಶುಭವಿದ್ದು ಹೊಸ ಸವಾಲುಗಳನ್ನು ದಕ್ಷತೆಯಿಂದ ಎದುರಿಸುವಿರಿ. ನೂತನ ಗೃಹ, ನಿವೇಶನ, ವಾಹನಾದಿ ಖರೀದಿಗೆ ಪ್ರೇರಣೆಯಾಗುವುದು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿ ದೊರೆಯುವುದು. ನಿಮ್ಮ ನಡವಳಿಕೆಯಲ್ಲಿ ಹೊಸ ಉತ್ಸಾಹ, ಹುಮ್ಮಸ್ಸುಗಳು ತೋರಿ ಬರುವುದು. ನವದಂಪತಿಗಳಿಗೆ ಸಂತಾನದ ಶುಭ ಸುದ್ದಿ ದೊರೆಯುವ ಸಾಧ್ಯತೆ ಇದೆ.

ಶ್ರೀ ಸತ್ಯನಾರಾಯಣ ವ್ರತಕಥೆ ಓದಿ. ಶುಭ ಸಂಖ್ಯೆ-1.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಮಹತ್ವದ ಕೆಲಸ ಕಾರ್ಯಗಳನ್ನು ಸ್ವಲ್ಪ ಕಾಲ ಮುಂದೂಡಬೇಕು. ಯಾಕೆಂದರೆ ಯಾವುದೇ ವಿಷಯ ನೀವಂದುಕೊಂಡಂತೆ ಸಾಗುತ್ತಿಲ್ಲ. ಕೆಲ ಸಮಯ ಕುಟುಂಬದಲ್ಲಿ ಆತಂಕದ ವಾತಾವರಣ ಉಂಟಾಗುವ ಸಾಧ್ಯತೆ ಇದೆ. ವಾರ ಮಧ್ಯೆ ನಿರೀಕ್ಷಿತ ಧನಾಗಮ, ಗೆಳೆಯರ ನೆರವು, ಸದ್ವಾರ್ತೆ, ಸ್ಥಿರಾಸ್ತಿ ಸಂಬಂಧ ವಿಷಯಗಳಲ್ಲಿ ಹಿರಿಯರ ಮಾರ್ಗದರ್ಶನ. ನಿಧಾನವಾಗಿ ವಾಹನ ಚಲಿಸಿ ಕ್ಷೇಮವಾಗಿ ಮನೆ ತಲುಪಿ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿಮ್ಮ ರಾಶಿಗೆ ಬರುವ ಚಂದ್ರನಿಂದ ಸದಾ ಕ್ರಿಯಾಶೀಲರಾಗಿರುವಿರಿ. ಹಣಕಾಸಿನ ವಿಚಾರದಲ್ಲಿ ಸುಧಾರಣೆ ಕಂಡು ಬರುವುದು. ನವಮ ಸ್ಥಿತ ಗುರುವಿನಿಂದ ಭಾಗ್ಯೋದಯ, ಸಮಯಪ್ರಜ್ಞೆ ತೋರಿ ಕಷ್ಟ ಕಾರ್ಯಗಳು ಸರಾಗವೆನಿಸುವುದು. ಆಪ್ತ ಬಂಧುಗಳ ಭೇಟಿಯಿಂದ ಪುಳಕಿತರಾಗುತ್ತೀರಾ. ಸಪ್ತಾಹದ ಕಡೆಗೆ ಆಧ್ಯಾತ್ಮ ಗುರುಗಳ ಭೇಟಿ ಹಾಗೂ ಆಶೀರ್ವಾದ ದೊರೆಯುವುದು.

ಶ್ರೀಗುರು ಧ್ಯಾನ. ಶುಭ ಸಂಖ್ಯೆ-8.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಯಶಸ್ಸಿನ ಗುಟ್ಟು ನಿರಂತರ ಪ್ರಯತ್ನ, ಫಲವನ್ನು ದೇವರಿಗೆ ಬಿಡಿ. 'ಕರ್ಮಣ್ಯೆವಾದಿಕಾರಸ್ತೇ' ಎಂಬ ಗೀತಾವಾಣಿಯಂತೆ ಹಣಕಾಸಿನ ಪರಿಸ್ಥಿತಿ ಬಿಗಡಾಯಿಸಿದರೂ ಚಂದ್ರ ಬಲದಿಂದ ಗಟ್ ಆನ್ ಆಗುವಿರಿ. ದವಾಖಾನೆ ಖರ್ಚುಗಳು ಎದುರಾಗಬಹುದು. ವ್ಯಾಪಾರ ನಿಮಿತ್ತ ಪ್ರವಾಸಗಳು ಉಂಟಾಗುವುದು. ವಾಹನ ಡ್ರೈವಿಂಗ್‌ನಲ್ಲಿ ಸಿಗ್ನಲ್ ದಾಟಬೇಡಿ, ಆತುರ ಗಂಡಾಂತರವಾದೀತು.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ಮನಸ್ಸಿಗೆ ಸಂತಸ ನೀಡುವ ಹಲವು ಘಟನೆಗಳಿಂದ ಹರ್ಷಿತರಾಗಿರುವಿರಿ. ಯುವಕರಿಗೆ ಪ್ರೀತಿ-ಪ್ರಣಯ ವಿಷಯಗಳು ಮುದ ನೀಡುವ ಸಂಗತಿ ಆಗಲಿದೆ. ಧನಾದಾಯ ಚೆನ್ನಾಗಿದೆ, ಆದರೆ ಮಿತವ್ಯಯ ಸಾಧಿಸಲಾರಿರಿ. ಪೂರ್ವಯೋಜಿತ ಕೆಲಸಗಳು ಗುರುಕೃಪೆಯಿಂದ ದಡ ಮುಟ್ಟುತ್ತವೆ. ಸರ್ಕಾರಿ ಹಾಗೂ ಖಾಸಗಿ ನೌಕರರಿಗೆ ಹೆಚ್ಚಿನ ಜವಾಬ್ದಾರಿಯ ಸ್ಥಾನ ದೊರೆಯುವುದು. ಕಳ್ಳಕಾಕರಿಂದ ಎಚ್ಚರವಿರಿ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಈಗ ನೀವು ಯಾವ ಕೆಲಸ ಮಾಡಿದರೂ ಈಗದು ಬೆಟ್ಟಕ್ಕೆ ಕಲ್ಲು ಹೊತ್ತಂತೆ ಆಗುವುದು. ಗ್ರಹ ಸಂಯೋಗ ನಿಮಗೆ ಪೂರಕವಾಗಿಲ್ಲ. ಖರ್ಚು-ವೆಚ್ಚಗಳು ಜಾಸ್ತಿ. ಸಾಲ ಮಾಡಬೇಕಾದ ಪರಿಸ್ಥಿತಿ. ಸ್ವಲ್ಪ ಅಸ್ವಸ್ಥತೆಯೂ ಕಾಡುತ್ತದೆ. ವಾರದ ಕಡೆಗೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ತತ್ಕಾಲದ ಕಷ್ಟಗಳಿಂದ ಪಾರಾಗುವಿರಿ. ಮನೆಗೆ ಬೇಕಾಗುವ ಸುಖ-ಸಾಧನಗಳ ಖರೀದಿ, ಭಾರ್ಯಾ ಸುಖಾದಿಗಳು ಉಂಟಾಗಲಿದೆ.

ಶ್ರೀ ಸುಬ್ರಹ್ಮಣ್ಯ ಉಪಾಸನೆ. ಶುಭ ಸಂಖ್ಯೆ-9.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಮನೆಯಲ್ಲಿ ನಲಿವಿನ ವಾತಾವರಣದೊಂದಿಗೆ ಸಪ್ತಾಹಕ್ಕೆ ಸ್ವಾಗತ. ಹಲವು ಮೂಲಗಳಿಂದ ಧನ ಸಂಚಯ, ಆಸ್ತಿ-ಪಾಸ್ತಿ ಹೊಂದಲು ನಿಮ್ಮ ರಾಶ್ಯಾಧಿಪತಿ ಗುರುವಿನ ಕೃಪೆ ಇದೆ. ನ್ಯಾಯಪಾಲಿಕಾ ವಿಚಾರಗಳು ನಿಮ್ಮ ಪರವಾಗುವ ಸಾಧ್ಯತೆ ಇದೆ. ಹಲವರಿಗೆ ದೀರ್ಘ ಕಾಲದ ಅನಾರೋಗ್ಯದಿಂದ ಬಿಡುಗಡೆ. ಕೃಷಿಕರಿಗೆ, ಕೃಷಿ ಸಂಬಂಧಿ ವಸ್ತು ವ್ಯಾಪಾರಿಗಳಿಗೆ ಉತ್ತಮ ಧನಲಾಭವಾಗುವುದು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ದರ್ಶನ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆರಂಭಕ್ಕೆ ತುಸು ಆಶಾದಾಯಕ ವಾತಾವರಣದಿಂದ ಮನಸ್ಸಿಗೆ ಹರ್ಷ. ಹಣಕಾಸಿನ ವಿಷಯದಲ್ಲಿ ಅಲ್ಪ ಪ್ರಗತಿ. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ದುಪ್ಪಟ್ಟು ವ್ಯಾಪಾರ. ಗುರುಬಲದ ಕೊರತೆಯಿಂದಾಗಿ ಇತರರ ದೂಷಣೆಗೆ ಗುರಿಯಾಗುವಿರಿ. ಯತ್ನ ಕೆಲಸಗಳು ಕಠಿಣವಾಗುವುದು. 'ಕೈಗೆ ಬಂದ ತುತ್ತು ಬಾಯಿಗೆ ಇಲ್ಲ' ಎಂಬಂತೆ ಪರಿಸ್ಥಿತಿ ಉಂಟಾಗುವುದು. ಡ್ರೈವಿಂಗ್‌ನಲ್ಲಿ ಎಚ್ಚರ ತಪ್ಪದಿರಿ.

ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಕೆಲವೊಂದು ಗ್ರಹಗಳ ಅಡ್ಡ ಪರಿಣಾಮಗಳ ನಡುವೆಯೂ ನಿಮ್ಮ ಮುಂದೆ ಉತ್ಸವ ಅವಕಾಶಗಳು ಇವೆ. ನೀವು ಪ್ರಯತ್ನಶೀಲರಾದರೆ ಗುರಿಯನ್ನು ಮುಟ್ಟುವಿರಿ. ವಾರ ಮಧ್ಯೆ ಧನ-ಧಾನ್ಯ, ಲಾಭ, ನೂತನ ವಸ್ತ್ರಾಭರಣ ಪ್ರಾಪ್ತಿ, ಪ್ರಿಯಜನರ ಮಿಲನ, ಮನೋಲ್ಲಾಸಗಳೂ ಉಂಟು. ದೂರ ಪ್ರಯಾಣಗಳು ಎದುರಾಗಬಹುದು. ಆದರೆ ವಾಹನ ಚಾಲನೆಯಲ್ಲಿ ಸಂಯಮ ಇರಲಿ.

ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-5.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಸಪ್ತಾಹದ ಆದಿಗೆ ಹಲವು ಮೂಲಗಳಿಂದ ಹಣ ಸಂಪಾದನೆ ಆಗುವುದು. ಮನೆ ಮಂದಿಯೊಂದಿಗೆ ನಲಿವಿನ ವಾತಾವರಣ. ಕಚೇರಿ ಕೆಲಸಗಳಲ್ಲಿ ಶ್ರದ್ಧೆ ವಹಿಸುವುದರಿಂದ ಒತ್ತಡಗಳಿಂದ ಬಿಡುಗಡೆ. ಕೃಷಿ, ಹೈನುಗಾರಿಕೆಯಿಂದ ಆದಾಯದಲ್ಲಿ ಹೆಚ್ಚಳ. ನೂತನ ಗೃಹ, ವಾಹನಾದಿ ಖರೀದಿಗೆ ಪ್ರೇರಣೆ ಆಗುವುದು. ಸರ್ಕಾರಿ ಕೆಲಸ ಕಾರ್ಯಗಳು ನಿಮ್ಮ ಅನುಕೂಲದಂತೆ ನಡೆಯದೆ ಮಾನಸಿಕ ಕಿರಿಕಿರಿ.

ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ-9.

ಮಕ್ಕಳ ಚಿತ್ರಕಥೆ: ನನಗೆ ನಿನ್ನ ಪರಿಚಯ ಹೇಳು

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ನೀತಿ:– ವಿದ್ಯೆಗೆ ವಿನಯವೇ ಭೂಷಣ.

ಲೋಕಸಭೆಯಲ್ಲಿ ಬಿಜೆಪಿ ಸೋಲಿಸದಿದ್ದರೆ ಸಂವಿಧಾನಕ್ಕೆ ಗಂಡಾಂತರ

ನಂಜನಗೂಡು ಕೃತಜ್ಞತಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಕಳವಳ

ನಂಜನಗೂಡು, ಜೂ.24– ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡಿದ್ದೇವೆ ಅಷ್ಟೇ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಸೋಲಿಸದೇ ಹೋದಲ್ಲಿ ಸಂವಿಧಾನಕ್ಕೆ ಗಂಡಾಂತರ ತಪ್ಪಿದ್ದಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕಳವಳ ವ್ಯಕ್ತಪಡಿಸಿದರು.

ನಗರದ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷದಿಂದ ಆಯೋಜಿಸಲಾಗಿದ್ದ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಮತ್ತು ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರದಲ್ಲಿ ವಾಕ್ ಸ್ವತಂತ್ರವನ್ನು ಕಸಿದುಕೊಂಡು ಅಘೋಷಿತ ತುರ್ತು ಪರಿಸ್ಥಿತಿಯ ವಾತಾವರಣ ಎದುರಾಗಿತ್ತು. ಜೊತೆಗೆ ಕೊರೊನಾದಂತಹ ಸಂದಿಗ್ಧ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಬೇಕಾಗಿದ್ದ ಬಿಜೆಪಿ ಸರ್ಕಾರಗಳು, ಜಾಗಟೆ ಬಾರಿಸಿ, ದೀಪ ಹಚ್ಚಿ ಎಂದು ಮೂಢನಂಬಿಕೆಯನ್ನು ಬಿತ್ತರಿಸುವ ಮೂಲಕ ನಮ್ಮನ್ನು ಬಲವಂತವಾಗಿ ಸನಾತನ ಧರ್ಮಕ್ಕೆ ದೂಡಲು ಯತ್ನಿಸಿದ್ದವು. ಅಲ್ಲದೆ ಜನಾದೇಶವಿಲ್ಲದೆ ಅಕ್ರಮವಾಗಿ ಅಧಿಕಾರಕ್ಕೆ ಬಂದ ರಾಜ್ಯ ಬಿಜೆಪಿ ಸರ್ಕಾರದ ವ್ಯಾಪಕ ಭ್ರಷ್ಟಾಚಾರ, ಆಡಳಿತ ವಿರೋಧಿ ನಿಲುವುಗಳಿಂದ, ಬೆಲೆ ಏರಿಕೆಯಿಂದ ಜನ ಬೇಸತ್ತಿದ್ದರು ಎಂದು ಅವರು ತಿಳಿಸಿದರು.

ಇಲ್ಲಿ ಗೆಲುವು ಸಾಧಿಸಲು ಬರಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಪ್ರಮುಖವಾಗಿರಲಿಲ್ಲ, ಅಲ್ಲದೆ ಧ್ರುವನಾರಾಯಣ್ ಸಾವಿನ ಅನುಕಂಪವು ಕಾರಣವಾಗಿಲ್ಲ, ಬಿಜೆಪಿ ಪಕ್ಷದ ದುರಾಡಳಿತವೇ ಪ್ರಮುಖ ಕಾರಣವಾಗಿದೆ. ನಂಜನಗೂಡು ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕು ಎಂಬುದು ನಮ್ಮೆಲ್ಲರ ಕನಸು. ಅಲ್ಲದೆ ಮಾಜಿ ಸಂಸದ ಧ್ರುವನಾರಾಯಣ್ ಅವರ ಕನಸು. ಆ ಕನಸನ್ನು ಈಡೇರಿಸಲು ಮತ್ತು ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಾನು ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಸಂಪೂರ್ಣ ಬೆಂಬಲ, ಸಹಕಾರ ನೀಡಲಿದ್ದೇನೆ ಎಂದರು.



ಸಂಸದ ಡಿ.ಕೆ.ಸುರೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳ ಬಗ್ಗೆ ಬಿಜೆಪಿ ಪಕ್ಷದ ಶಾಸಕರು ಆತುರಾತರವಾಗಿ ಅನ್ನಭಾಗ್ಯ ಯೋಜನೆ ಅಡಿ ಅಕ್ಕಿ ಕೊಡಲು ಆಗಿಲ್ಲ ಎಂದು ತೀಕ್ಷ್ಣವಾಗಿ ವಿರೋಧ ಹೇಳಿಕೆಯನ್ನು ನೀಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಕೊಟ್ಟಿರುವ 5 ಗ್ಯಾರಂಟಿಗಳನ್ನು ಈಡೇರಿಸುವುದು ಖಚಿತ. ಸುಖಾಸುಮ್ಮನೆ ಆರೋಪ ಮಾಡುವ ಬಿಜೆಪಿ ಶಾಸಕರು ತಾಳ್ಮೆ ವಹಿಸಬೇಕು. ಜೊತೆಗೆ ವಿರೋಧಿ ಹೇಳಿಕೆ ನೀಡುವ ಬದಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ನಿಮ್ಮ ಗೋಡನ್ನಲ್ಲಿರುವ ಅಕ್ಕಿಯನ್ನು ಕೊಟ್ಟರೆ ಬಡವರಿಗೆ ಅನುಕೂಲವಾಗುತ್ತದೆ ಎಂದು ಮನವೊಲಿಸಲು ಮುಂದಾಗಬೇಕು ಎಂದು ಕುಟುಕಿದರು.

ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ನನ್ನ ತಂದೆ ಧ್ರುವನಾರಾಯಣ್ ಅವರು ಎರಡು ಬಾರಿ ಸಂಸದರಾಗಿ ಈ ಭಾಗದಲ್ಲಿ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಲೋಕಸಭೆ ಚುನಾವಣೆಯ ಸೋಲಿನ ನಂತರ ನಂಜನಗೂಡು ಕ್ಷೇತ್ರದಲ್ಲಿ ಅತಿ ಹೆಚ್ಚಾಗಿ ಕೆಲಸ ಮಾಡುವ ಮೂಲಕ ಕ್ಷೇತ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಿ ಬಡವರಿಗೆ ರೈತರಿಗೆ ನೆರವಾಗಬೇಕೆಂದು ಕನಸು ಕಂಡಿದ್ದರು. ಆದರೆ ಅವರು ವಿಧಿಯಾಟದಿಂದ ನಮ್ಮೆಲ್ಲರನ್ನು ಬಿಟ್ಟು ಅಗಲಿದರು. ಅಂತಹ ಸನ್ನಿವೇಶದಲ್ಲಿ ಇಡೀ ಕಾಂಗ್ರೆಸ್ ಸಮೂಹ ಮತ್ತು ಪಕ್ಷದ ಹಿರಿಯ ನಾಯಕರು ನನಗೆ ಧೈರ್ಯ ಸಾಂತ್ವನ ಹೇಳಿ ಶಕ್ತಿ ತುಂಬಿದರು. ಅಲ್ಲದೆ ಎಲ್ಲಾ ಪಕ್ಷದ ನಾಯಕರು ಪಕ್ಷಾತೀತವಾಗಿ ನನ್ನ ಬೆಂಬಲಕ್ಕೆ ನಿಂತು ಸಾಂತ್ವನ ಹೇಳಿದ್ದರು ಎಂದರು.

ಹೆಚ್ಚಾಗಿ ಕ್ಷೇತ್ರದ ಜನತೆ ನನಗೆ ಮಾನಸಿಕ ಸ್ಥೈರ್ಯ ಶಕ್ತಿ ತುಂಬಿದ್ದರು. ಜೊತೆಗೆ ಚುನಾವಣೆ ಹೇಗೆ ನಡೆಸಬೇಕೆಂಬ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಂದೆಯ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ಮಾಡಿ ಶಕ್ತಿ ತುಂಬಿದ್ದಾರೆ. ಜೊತೆಗೆ ಕ್ಷೇತ್ರದ ಜನತೆ ಅಭೂತಪೂರ್ವ ಬೆಂಬಲ ನೀಡುವ ಮೂಲಕ ನನ್ನನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಿ ಶಾಸಕನಾಗಿ ಆಯ್ಕೆ ಮಾಡಿದ್ದಾರೆ. ನಿಮ್ಮೆಲ್ಲರ ವಿಶ್ವಾಸ ನಂಬಿಕೆ ಉಳಿಸಿಕೊಳ್ಳಲು ನನ್ನ ತಂದೆಯ ಕಾರ್ಯವೈಖರಿಯನ್ನು ಅಳವಡಿಸಿಕೊಂಡು, ಬುದ್ಧ ಬಸವ ಅಂಬೇಡ್ಕರ್ ಅವರ ತತ್ವದ ಅಡಿಯಲ್ಲಿ ನಿಮ್ಮ ಮನೆ ಮಗನಾಗಿ ದುಡಿಯುತ್ತೇನೆ. ನನ್ನ ಕೊನೆಯ ಉಸಿರಿರುವರೆಗೂ ಸಹ ನಿಮ್ಮ ಸಹಕಾರವನ್ನು ಮರೆಯುವುದಿಲ್ಲ. ನಿಮ್ಮ ಸೇವೆ ಮಾಡಲು ಸದಾ ಸಿದ್ಧನಿದ್ದೇನೆ. ನಿಮ್ಮ ಸಹಕಾರಕ್ಕೆ ನಾನು ಕೈಮುಗಿದು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಸಮಾರಂಭದಲ್ಲಿ ಶಾಸಕರಾದ ಪುಟ್ಟರಂಗಶೆಟ್ಟಿ, ಅನಿಲ್ ಚಿಕ್ಕಮಾದು, ರವಿಶಂಕರ್, ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಶ್ರೀಕಂಠ ನಾಯಕ, ಸಿಎಂ ಶಂಕರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಮುಖಂಡರಾದ ಕೆ.ಮಾರುತಿ, ನಂದಕುಮಾರ್, ಅಕ್ಬರ್ ಅಲಿಂ, ಕಳಲೆ ರಾಜೇಶ್, ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯ ಲತಾ ಸಿದ್ಧಶೆಟ್ಟಿ ಇತರರಿದ್ದರು.

ಎರಡು ಬೈಕ್‌ಗೆ ಲಾರಿ ಡಿಕ್ಕಿ: ಇಬ್ಬರು ಸಾವು

• ಮತ್ತಿಬ್ಬರಿಗೆ ಗಾಯ • ಚಾಲಕನಿಗೆ ಬಿತ್ತು ಗೂಸಾ





ನಂಜನಗೂಡು, ಜೂ.24– ನಿಯಂತ್ರಣ ತಪ್ಪಿದ ಲಾರಿಯೊಂದು ಎರಡು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟು, ಮತ್ತಿಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಕಳಲೆ ಗೇಟ್ ಬಳಿ ಶನಿವಾರ ಸಂಭವಿಸಿದೆ.

ಕಳಲೆ ಗ್ರಾಮದ ಶಿವರಾಜು(50) ಹಾಗೂ ಟಿ.ಮಹೇಶ್(33) ಮೃತರು. ಇದೇ ಗ್ರಾಮದ ಮಹದೇವು ಹಾಗೂ ಇವರ ತಾಯಿ ಚಿಕ್ಕದೇವಮ್ಮ ಗಾಯಗೊಂಡಿದ್ದು ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೇರಳ ಕಡೆಗೆ ತೆರಳುತ್ತಿದ್ದ ಸರಕು ಸಾಗಾಣೆ ಲಾರಿಯು ಮುಂದೆ ತೆರಳುತ್ತಿದ್ದ ವಾಹನ ನಿಧಾನ ಮಾಡಿದ ಪರಿಣಾಮ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಸಲುವಾಗಿ ಸಂಪೂರ್ಣವಾಗಿ ಬಲಭಾಗಕ್ಕೆ ಅತಿ ವೇಗವಾಗಿ ಬಂದಿದ್ದರಿಂದ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಒಂದು ಬೈಕ್‌ನಲ್ಲಿದ್ದ ಶಿವರಾಜು ಹಾಗೂ ಟಿ.ಮಹೇಶ್ ತಲೆ ಮೇಲೆ ಲಾರಿ ಹಿಂಬದಿ ಚಕ್ರಗಳು ಹರಿದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಂದು ಬೈಕ್‌ನಲ್ಲಿದ್ದ ಮಹದೇವು ಹಾಗೂ ಅವರ ತಾಯಿ ಚಿಕ್ಕದೇವಮ್ಮ ಗಂಭೀರವಾಗಿ ಗಾಯಗೊಂಡಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೃತ ಶಿವರಾಜು ಹಾಗೂ ಟಿ.ಮಹೇಶ್ ಇಬ್ಬರು ನಂಜನಗೂಡಿನಿಂದ ಕಳಲೆ ಗ್ರಾಮದತ್ತ ಹೋಗಲು ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಕ್ರಾಸ್ ಮಾಡುವಾಗ ಈ ಘಟನೆ ಸಂಭವಿಸಿದೆ. ಇನ್ನು ನಂಜನಗೂಡಿನತ್ತ ತನ್ನ ತಾಯಿ ಚಿಕ್ಕ ದೇವಮ್ಮ ಅವರನ್ನು ಮಹದೇವ್ ಕೆಲಸ ನಿಮಿತ್ತ ಕರೆದುಕೊಂಡು ಬರುತ್ತಿದ್ದರು ಎನ್ನಲಾಗಿದೆ.

ಚಾಲಕನಿಗೆ ಥಳಿತ: ಘಟನೆ ಬಳಿಕ ಪರಾರಿಯಾಗುತ್ತಿದ್ದ ಲಾರಿ ಚಾಲಕನನ್ನು ಸ್ಥಳೀಯರು ಹಿಡಿದು ಥಳಿಸಿದ್ದಾರೆ. ಸ್ಥಳಕ್ಕೆ ಸಂಚಾರ ಪೊಲೀಸರು ಭೇಟಿ ನೀಡಿ ಮಹಜರು ನಡೆಸಿದರು. ಅಪಘಾತಕ್ಕೆ ಕಾರಣವಾದ ಲಾರಿಯನ್ನು ಪೊಲೀಸರು ವಶಕ್ಕೆ ಪಡೆದರು. ಎರಡು ಮೃತದೇಹಗಳನ್ನು ತಾಲೂಕು ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬದುಕು ರೂಪಿಸಿಕೊಳ್ಳಲು ವಿದ್ಯೆ ಅತಿ ಮುಖ್ಯ

ಹೆಚ್.ಡಿ.ಕೋಟೆಯಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿಯ ವಾರ್ಷಿಕೋತ್ಸವ

ಹೆಚ್.ಡಿ.ಕೋಟೆ, ಜೂ.24– ವಿದ್ಯಾರ್ಥಿಗಳು ತಮ್ಮ ಬದುಕನ್ನು ರೂಪಿಸಿಕೊಳ್ಳಲು ತಮ್ಮನ್ನು ತಾವು ಸಮರ್ಪಕವಾಗಿ ಓದಿನಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮೈಸೂರು ವಕೀಲರ ಸಂಘದ ಜಿಲ್ಲಾ ಉಪಾಧ್ಯಕ್ಷ ಉಮೇಶ್ ತಿಳಿಸಿದರು.

ಪಟ್ಟಣದ ವಿಶ್ವ ಭಾರತಿ ಶಿಕ್ಷಣ ಸಂಸ್ಥೆಯಲ್ಲಿ ಶನಿವಾರ ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿಯ ಪ್ರಥಮ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನಾತ್ಮಕವಾದಂತಹ ಕಾನೂನುಗಳನ್ನು ಪಡೆಯಲು ಜ್ಞಾನ ಅತಿ ಮುಖ್ಯ. ಅಭಿವ್ಯಕ್ತಿ ಸ್ವಾತಂತ್ರ್ಯ ಮಕ್ಕಳಿಗೆ ಕಡಿಮೆ ಇದ್ದರೂ, ಮಕ್ಕಳಿಗೆ ತಮ್ಮದೇ ಆದ ಜ್ಞಾನವಿದೆ. ಆದರೆ ಮಕ್ಕಳನ್ನು ಸರಿದಾರಿಯಲ್ಲಿ ತರಲು ಸಮಾಜ ಮುಂದಾಗಬೇಕು ಎಂದರು.

ರಾಷ್ಟ್ರೀಯ ಮಾನವ ಹಕ್ಕುಗಳ ರಾಷ್ಟ್ರೀಯ ಕಾರ್ಯಾಧ್ಯಕ್ಷ ಇಬ್ರಾಹಿಂ ಮಾತನಾಡಿ, ಗರ್ಭದಲ್ಲಿ ಹುಟ್ಟುವ ಮಗುವಿನಿಂದ ಹಿಡಿದು ವಯೋ ವೃದ್ಧರವರೆಗೂ ಮಾನವ ಹಕ್ಕುಗಳ ರಕ್ಷಣೆ ಅತಿ ಮುಖ್ಯ ಎಂದರು.

ಹಿರಿಯ ವಕೀಲೆ ಸರಸ್ವತಿ ಮಾತನಾಡಿ, ವಿದ್ಯಾರ್ಥಿಗಳು ವಾಹನ ಪರವಾನಗಿಯನ್ನು ಪಡೆಯಬೇಕು. ಹೆಲ್ಮೆಟ್ ಧರಿಸಬೇಕು, ಮೋಟಾರ್ ಕಾಯಿದೆ ವಾಹನದ ನಿಯಮವನ್ನು ತಿಳಿದಿರಬೇಕು. ವಿದ್ಯಾರ್ಥಿಗಳು ಎಂದರೆ ತಮ್ಮ ಆಸು–ಪಾಸಿನಲ್ಲಿ ನಡೆಯುವ ಎಲ್ಲಾ ಮಾಹಿತಿಗಳನ್ನು ಜೀವಂತವಾಗಿ ಸೆರೆ ಹಿಡಿಯುವ ಜೀವಂತ ಸಿಸಿ ಕ್ಯಾಮರಾಗಳು. ಇಂತಹ ಮಕ್ಕಳು ದೇವರಿಗೆ ಸಮ. 18 ವರ್ಷದ ಒಳಗಿನ ಎಲ್ಲರೂ ಸಹ ಮಕ್ಕಳೇ. ಮಕ್ಕಳೆಂದರೆ ದೇವರು. ಸ್ಫಟಿಕದಂತಹ ಮಕ್ಕಳ ಮನಸ್ಸನ್ನು ಒಳ್ಳೆಯ ರೀತಿಯಲ್ಲಿ ಅವರ ತಪ್ಪು ಸರಿಗಳನ್ನು ಪೋಷಕರು ಮತ್ತು ಗುರುಗಳು ತಿದ್ದಬೇಕು ಎಂದರು.



ಹೆಣ್ಣು ಮಕ್ಕಳಿಗೆ ಬುದ್ಧಿವಾದ ಹೇಳಿದಷ್ಟೇ ಗಂಡು ಮಕ್ಕಳಿಗೂ ಸಹ ಬುದ್ಧಿವಾದ ಹೇಳಬೇಕು. ರ್‍ಯಾಗಿಂಗ್ ಮಾಡಬಾರದು, ಚುಡಾಯಿಸಬಾರದು, ಕಾಲೇಜಿಗೆ ಬಂಕ್ ಹಾಕಬಾರದು, ಮಕ್ಕಳ ಲೈಂಗಿಕ ದೌರ್ಜನ್ಯದಂತಹ ಪೋಕ್ಸೋ ಕಾಯ್ದೆಯ ಬಗ್ಗೆ ಹೆಚ್ಚಿನ ಅರಿವನ್ನು ಹೊಂದಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ರವಿಕುಮಾರ್, ವಕೀಲ ವೆಂಕಟೇಶ್, ಆಪ್ತ ಸಮಾಲೋಚಕಿ ಸರಸ್ವತಿ, ವಿಶ್ವ ಭಾರತಿ ಕಾಲೇಜು ಪ್ರಾಂಶುಪಾಲ ಕುಮಾರಸ್ವಾಮಿ, ಮಾನವ ಹಕ್ಕುಗಳ ಸಮಿತಿಯ ಜಿಲ್ಲಾಧ್ಯಕ್ಷ ಕುಮಾರ್, ಲಕ್ಷ್ಮಿಕಾಂತ್, ರಾಘವೇಂದ್ರ ಜವರನಾಯಕ, ಸತೀಶ್ ಕುಮಾರ್, ಮನೋಜ್, ಅನು, ಸಾಗರ ನಾಗರಾಜು, ಬಸವರಾಜು, ಆಗತ್ತೂರು ಜವರನಾಯಕ, ತೋಪನಯ್ಯ, ಪ್ರಕಾಶ್, ಮಹದೇವ, ಸುರೇಶ್, ಮೃತ್ಯುಂಜಯ ಸಮಿತಿಯ ಸದಸ್ಯರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ನಂ.ಗೂಡಲ್ಲಿ ಆಕರ್ಷಕ ಹನುಮ ಜಯಂತಿ ಮೆರವಣಿಗೆ

• ಭಕ್ತರನ್ನು ಸೆಳೆದ ಓಂಕಾರಾಕೃತಿಯ ಬೃಹತ್ ಹನುಮ ಮೂರ್ತಿ • ಸಾವಿರಾರು ಮಂದಿ ಭಾಗಿ



ನಂಜನಗೂಡು, ಜೂ.24– ನಗರದಲ್ಲಿ ಶ್ರೀ ವೀರಾಂಜನೇಯ ಧರ್ಮ ಜಾಗೃತಿ ಬಳಗದ ವತಿಯಿಂದ ಶನಿವಾರ ಆಯೋಜಿಸಿದ್ದ ಹನುಮ ಜಯಂತಿ ಅಂಗವಾಗಿ ನಡೆದ ಆಕರ್ಷಕ ಮೆರವಣಿಗೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಹನುಮ ಭಕ್ತರ ಹರ್ಷೋದ್ಗಾರ ಮೊಳಗಿತು.

ಶ್ರೀಕಂಠೇಶ್ವರಸ್ವಾಮಿ ದೇಗುಲದ ಮುಂಭಾಗದಲ್ಲಿ ಬೃಹದಾಕಾರದ ಆಂಜನೇಯ ಸ್ವಾಮಿಯ ವಿಗ್ರಹಕ್ಕೆ ಮಲ್ಲನಮೂಲೆ ಮಠಾಧ್ಯಕ್ಷ ಚನ್ನಬಸವಸ್ವಾಮೀಜಿ, ಹಿರೇಹಡಗಲಿ ಶ್ರೀಹಾಲ ಸ್ವಾಮೀಜಿ ಮಹಾಸಂಸ್ಥಾನ ಮಠದ ಅಭಿನವ ಹಾಲ ಸ್ವಾಮೀಜಿ, ಶಾಸಕ ದರ್ಶನ್ ಧ್ರುವನಾರಾಯಣ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡಿದರು.

ಓಂಕಾರಾಕೃತಿಯೊಂದಿಗಿನ 8 ಅಡಿ ಎತ್ತರದ ಹನುಮ, ಮೂವ್‌ಮೆಂಟ್ ಹನುಮಾನ್, ಕಂಚಿನ ಹನುಮ ವಿಗ್ರಹಗಳು ಮಂಗಳವಾದ್ಯಗೋಷ್ಠಿಯೊಂದಿಗೆ ಸಾಗಿದರೆ, ಇತ್ತ ಕೇರಳದಿಂದ ಆಗಮಿಸಿದ್ದ ಸಿಂಗಾರಿ ಮೇಳ ತಂಡದ ದೈವನಾಚಿಂ ಕಲಾವಿದರ ಚಂಡೆವಾದ್ಯ ಮೆರವಣಿಗೆಯ ರಂಗು ತಂದಿತು. 10 ಅಡಿ ಎತ್ತರದ ಹನುಮ, ಶಿವ, ಪಾರ್ವತಿ, ದುರ್ಗೆ ವೇಷಧಾರಿಗಳಾಗಿ ಮೆರವಣಿಗೆ ಕಳೆಗಟ್ಟುವಂತೆ ಮಾಡಿದರು.

ಇನ್ನು ದೇಸಿ ತಂಡಗಳಾದ ವೀರಗಾಸೆ, ಪೂಜಾ ಕುಣಿತ, ಕಂಸಾಳೆ, ನಂದಿಧ್ವಜ, ಗಾರುಡಿ ಗೊಂಬೆ ಕಲಾತಂಡಗಳ ಪ್ರದರ್ಶನ ಮೆರಗು ನೀಡಿತು. ಇನ್ನು ನಗಾರಿ ಸದ್ದಿಗೆ ಯುವಕರು ಕುಣಿದು ಸಂಭ್ರಮಪಟ್ಟರು. ಅಲ್ಲಲ್ಲಿ ಬೃಹದಾಕಾರದ ಹನುಮ ಹಾಗೂ ಶ್ರೀರಾಮನ ಪರದೆಗಳನ್ನು ರಸ್ತೆಗಳಲ್ಲಿ ಪ್ರದರ್ಶಿಸುತ್ತಿದ್ದರೆ ಹನುಮ ಭಕ್ತರಿಂದ ಜಯಘೋಷ ಮೊಳಗಿತು.

ಮೆರವಣಿಗೆಯನ್ನು ಕಣ್ತುಂಬಿಕೊಳ್ಳಲು ರಸ್ತೆಯ ಇಕ್ಕೆಲಗಳಲ್ಲಿ ಜನರು ಕಿಕ್ಕಿರಿದು ನಿಂತಿದ್ದರು. ಅಲ್ಲಲ್ಲಿ ಮಜ್ಜಿಗೆ, ಪಾನಕ, ನೀರು, ಪ್ರಸಾದ ವಿತರಣೆ ಮಾಡುವ ಮೂಲಕ ಭಕ್ತರಿಗೆ ದಾಹ, ಹಸಿವು ನೀಗಿಸಿದರು. ಎಸ್ಪಿ ಸೀಮ ಲಾಟ್ಕರ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು.

ಮಾರುತಿ ಗುಡ್ಡದಲ್ಲಿ ಹೋಮ: ಮೆರವಣಿಗೆಗೂ ಮುನ್ನ ಮಾರುತಿ ಗುಡ್ಡದಲ್ಲಿರುವ ಆಂಜನೇಯಸ್ವಾಮಿ ದೇಗುಲದಲ್ಲಿ ಹೋಮ ನೆರವೇರಿತು. ಪುರೋಹಿತ ಕೃಷ್ಣ ಜೋಯಿಸ್ ನೇತೃತ್ವದಲ್ಲಿ ಸಕಲ ಧಾರ್ಮಿಕ ಪೂಜಾ ಕೈಂಕರ್ಯ ನೆರವೇರಿತು. ವಿಶೇಷ ಅಭಿಷೇಕ, ಅಲಂಕಾರ ನಡೆದ ನಂತರ ಮಹಾಮಂಗಳಾರತಿ ನೆರವೇರಿಸಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಸುತ್ತಮುತ್ತಲಿನ ಗ್ರಾಮಗಳಿಂದ ಅಲ್ಲಿಗೂ ಭಕ್ತರು ಸಾಗರೋಪಾದಿಯಲ್ಲಿ ಜಮಾಯಿಸಿದ್ದರು.

ರೋಟರಿ ಕ್ಲಬ್ ಅಧ್ಯಕ್ಷರಾಗಿ ರೋ. ಗಂಗಾಧರ ಆಯ್ಕೆ

ಹೆಚ್.ಡಿ.ಕೋಟೆ, ಜೂ.24– ತಾಲೂಕಿನ ರೋಟರಿ ಕ್ಲಬ್ 2023–24 ಅವಧಿಗೆ ಅಧ್ಯಕ್ಷರಾಗಿ ಕೃಷಿ ಇಲಾಖೆಯಲ್ಲಿ ಕೃಷಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ರೋ. ಬಿ.ಜಿ. ಗಂಗಾಧರ ಆಯ್ಕೆಗೊಂಡಿದ್ದಾರೆ.

ಕಾರ್ಯದರ್ಶಿಯಾಗಿ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ರೋ.ಸ್ವಾಮಿ ಆಯ್ಕೆ ಆಗಿದ್ದಾರೆ. ಪದಗ್ರಹಣ ಸಮಾರಂಭವು ಜು.2 ರಂದು ನಡೆಯಲಿದೆ ಎಂದು ರೋಟರಿ ಸಂಸ್ಥೆ ಕಾರ್ಯದರ್ಶಿ ನಿರಂಜನ್ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಹುಣಸೂರು, ಜೂ.24– ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 2022–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯ ಕನ್ನಡ ವಿಷಯದಲ್ಲಿ 125ಕ್ಕೆ 125 ಮತ್ತು ಪಿಯುಸಿ ವಿಭಾಗದಲ್ಲಿ ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿಯ ನಕಲು ಪ್ರತಿ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಜೂ.26ರ ಒಳಗಾಗಿ ಅರ್ಜಿಯನ್ನು ಕಸಾಪ ಕಚೇರಿಗೆ ಸಲ್ಲಿಸುವಂತೆ ತಾಲೂಕು ಅಧ್ಯಕ್ಷ ಹರವೆ ಮಹದೇವು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ನಂಬರ್ 9945650754, 9980750100 ಅನ್ನು ಸಂಪರ್ಕಿಸಲು ಕೋರಿದೆ.

ಕುಪಲಾಪುರ ಹಾಲಿನ ಡೇರಿ ಬಿ.ಎಂ.ಸಿ ಕೇಂದ್ರದಲ್ಲಿ ನೂತನವಾಗಿ ಅಳವಡಿಸಿರುವ 5000 ಲೀ.ಸಾಮರ್ಥ್ಯದ ಟ್ಯಾಂಕ್ ಅನ್ನು ಅಧ್ಯಕ್ಷ ನಜೀಬ್ ಉದ್ಘಾಟಿಸಿದರು. ಉಪಾಧ್ಯಕ್ಷ ಶಿವಣ್ಣ, ಸಿಇಓ ಕಿಶೋರ್, ಕೊಪ್ಪಲು ಡೇರಿ ಅಧ್ಯಕ್ಷ ಲಕ್ಷ್ಮಣ್, ಮಾಜಿ ಅಧ್ಯಕ್ಷ ಜಯಣ್ಣ, ನಾರಾಯಣ್, ನಿರ್ದೇಶಕರಾದ ಸ್ವಾಮಿಗೌಡ, ಕೃಷ್ಣೇಗೌಡ, ಸ್ವಾಮಿ, ಕೃಷ್ಣ, ಮೇಲ್ವಿಚಾರಕಿ ನಂದಿನಿ, ಸಿಬ್ಬಂದಿ ಮಂಜು, ರೇವಣ್ಣ ಇತರರು ಹಾಜರಿದ್ದರು.



ಡಾ.ಅಂಬೇಡ್ಕರ್ ಪ್ರತಿಮೆ ಪೂಜಾ ವಸ್ತುವಲ್ಲ, ಪ್ರೇರಣಾ ಶಕ್ತಿ: ಸಚಿವ ಮಹದೇವಪ್ಪ

ತಿ.ನರಸೀಪುರ, ಜೂ.24– ಜನತೆಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವವನ್ನು ಹೇಳಿಕೊಡುವ ಧರ್ಮವನ್ನು ಪ್ರೀತಿಸುತ್ತೇನೆಂದು ಹೇಳಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಪೂಜಾ ವಸ್ತುವಲ್ಲ, ಅಂಬೇಡ್ಕರ್ ನಮಗೆಲ್ಲರಿಗೂ ಪ್ರೇರಣಾ ಶಕ್ತಿಯಾಗಿದ್ದಾರೆ ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಕೊಳತ್ತೂರು ಗ್ರಾಮದಲ್ಲಿ ಶನಿವಾರ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಯನ್ನು ಅನಾವರಣಗೊಳಿಸಿ, ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಮೆಯನ್ನು ಪೂಜಾ ವಸ್ತುವಾಗಿಸಬೇಡಿ. ಸಂವಿಧಾನದ ಅವಕಾಶಗಳನ್ನು ಬಳಸಿಕೊಂಡು ನಾವೆಲ್ಲರೂ ಸಮ ಸಮಾಜದ ನಿರ್ಮಾಣಕ್ಕೆ ಹೆಜ್ಜೆಯನ್ನಿಡಬೇಕು. ಪ್ರತಿಯೊಬ್ಬರೂ ಸ್ವಾಭಿಮಾನ, ಘನತೆ–ಗೌರವ, ಸಮಾನತೆ ಹಾಗೂ ಭ್ರಾತೃತ್ವದಿಂದ ಬದುಕಲಿಕ್ಕೆ ಅಂಬೇಡ್ಕರ್ ಅವರೇ ಪ್ರೇರಣೆಯಾಗಿದ್ದಾರೆ ಎಂದರು.



ಸಿಎಂ ಸಿದ್ದರಾಮಯ್ಯ ಅವರು ಮೊದಲ ಸರ್ಕಾರದಲ್ಲೇ ನಾನು ಕೂಡ ಸಚಿವರಾಗಿ ಸಂವಿಧಾನದ ಸೌಲಭ್ಯಗಳಿಗೆ ಕಾಯ್ದೆಯ ರೂಪವನ್ನು ನೀಡಿದ್ದರಿಂದ ಎಸ್ಸಿಪಿ, ಟಿಎಸ್ಪಿ ಯೋಜನೆಯಡಿ ಹರಿಜನ ಮತ್ತು ಗಿರಿಜನರ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ನಿಗದಿ ಮಾಡಿ, ಅಷ್ಟು ಹಣವನ್ನು ಸಮುದಾಯಗಳ ಜನರ ಅಭಿವೃದ್ಧಿಗೆ ಬಳಸಲು ಕಟ್ಟುನಿಟ್ಟಿನ ಆದೇಶವನ್ನು ನೀಡಲಾಯಿತು. ಸಮಾಜ ಕಲ್ಯಾಣ ಇಲಾಖೆ ಸಚಿವನಾಗುತ್ತಿದ್ದಂತೆ ಶೇ.24ರಷ್ಟು ಜನರಿಗೆ ಬಜೆಟ್‌ನಲ್ಲಿ ನೀಡುವ 30,000 ಕೋಟಿ ಹಣ ಬಳಕೆಯಾಗುವಂತೆಯೂ 30 ಇಲಾಖೆಗಳ ಅಧಿಕಾರಿಗಳ ಸಭೆಯನ್ನು ನಡೆಸಿದ್ದೇನೆ. ರಾಜ್ಯದಲ್ಲಿ ಸಂವಿಧಾನದ ಪೀಠಿಕೆಯನ್ನು ಓದುವಂತೆ ಕಡ್ಡಾಯಗೊಳಿಸಿದ್ದೇನೆ. ಇದಕ್ಕೆಲ್ಲ ಬಾಬಾ ಸಾಹೇಬರೇ ಪ್ರೇರಣೆ ಎಂದು ತಿಳಿಸಿದರು.

ದೇಶದ ಎಲ್ಲಾ ಪ್ರಜೆಗಳ ಹಕ್ಕು ಅಡಕವಾಗಿರುವ, 140 ಕೋಟಿ ಜನರನ್ನ ಒಟ್ಟುಗೂಡಿಸಿದ ಸಂವಿಧಾನವನ್ನು ನೀಡಿದಂತಹ ಅಂಬೇಡ್ಕರ್ ಯಾವುದೇ ಜಾತಿಗೆ ಸೀಮಿತವಾದವರಲ್ಲ. ಜಾತೀಯತೆ ವಿನಾಶವಾಗಲು ಹೋರಾಟವನ್ನು ಮಾಡಿದ್ದರು. ರೈತರ ವ್ಯವಸಾಯ ಪದ್ಧತಿ ಅಭಿವೃದ್ಧಿಗೊಂಡು, ನೀರಾವರಿ ಸೌಲಭ್ಯ ವಿಸ್ತರಣೆಯಾಗಬೇಕು. ಶಿಕ್ಷಣ ನೀತಿ ಸಮರ್ಪಕವಾಗಿರಬೇಕು. ರೂಪಾಯಿ ಸಮಸ್ಯೆಗಳು ಸರಿಪಡಿಸುವಂತಿರಬೇಕು ಎಂದು ಆರ್‌ಬಿಐ ಆರಂಭಿಸಿದರು. ದೇಶವನ್ನು ಸದೃಢವಾಗಿ ಮುನ್ನಡೆಸಲು ಸ್ಪಷ್ಟವಾದ ನಿಲುವುಗಳನ್ನು ಅಡಿಪಾಯವಾಗಿ ಹಾಕಿಕೊಟ್ಟರು ಎಂದು ಬಣ್ಣಿಸಿದರು.

ಪುತ್ಥಳಿ ಅನಾವರಣ ಸಮಾರಂಭದ ಸಾನ್ನಿಧ್ಯವನ್ನು ನಳಂದ ಬುದ್ಧ ವಿಹಾರದ ಬೋಧಿರತ್ನ ಭಂತೇಜಿ, ಸುಗತಪಾಲ್ ಭಂತೇಜಿ ವಹಿಸಿದ್ದರು. ಮೈಸೂರು ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿಯವರು ಮುಖ್ಯ ಭಾಷಣಕಾರರಾಗಿ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ವಿಸ್ತಾರವಾಗಿ ತಿಳಿಸಿಕೊಟ್ಟರು. ಮಾಜಿ ಶಾಸಕ ಡಾ.ಎನ್.ಎಲ್. ಭಾರತಿಶಂಕರ್ ಮಾತನಾಡಿದರು. ಕಾರ್ಯಕ್ರಮದ ಬಳಿಕ ಸಂಜೆ ವೇಳೆಗೆ ಗ್ರಾಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರದ ಬೆಳ್ಳಿ ಪಲ್ಲಕ್ಕಿಯ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ಕೆಇಬಿ ಮುಖ್ಯ ಇಂಜಿನಿಯರ್ ಮಹದೇವಸ್ವಾಮಿ ಪ್ರಸನ್ನ, ಹಿರಿಯ ಭೂ ವಿಜ್ಞಾನಿ ನಂಜುಂಡಸ್ವಾಮಿ, ನಿವೃತ್ತ ಮುಖ್ಯ ಇಂಜಿನಿಯರ್ ಎನ್. ರವಿಕುಮಾರ್, ನಿವೃತ್ತ ಕಾರ್ಯಪಾಲಕ ಇಂಜಿನಿಯರ್ ಆರ್.ಕೆ.ರಾಜು, ತಾಪಂ ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನಸ್ವಾಮಿ, ಎಸ್ಸಿ, ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ(ರವಿ), ಪಿಎಸಿಸಿಎಸ್ ಅಧ್ಯಕ್ಷ ಎಂ.ಪರಶಿವಮೂರ್ತಿ, ದರ್ಶನ್ ಸಂಘಟನೆಗಳ ಒಕ್ಕೂಟದ ಸಂಚಾಲಕ ಎಸ್.ಆರ್. ಶಶಿಕಾಂತ್ ಸೋಸ್ಲೆ, ಗ್ರಾಪಂ ಮಾಜಿ ಅಧ್ಯಕ್ಷ ಆರ್.ಸೋಮಣ್ಣ, ಮಾಜಿ ಉಪಾಧ್ಯಕ್ಷ ಕೆ.ಶಂಕರ, ಹಾಲಿ ಉಪಾಧ್ಯಕ್ಷ ಕೆ.ಪಿ. ರವಿಪ್ರಸಾದ್, ಪಿಡಿಒ ನಾಗರಾಜು, ಸದಸ್ಯರಾದ ಕೆ.ಟಿ.ನಂಜುಂಡಸ್ವಾಮಿ, ಕುಮಾರಸ್ವಾಮಿ, ನಾಗೇಶ್, ಮಹೇಶ್, ನಂಜುಂಡೇಗೌಡ, ಶಾಂತರಾಜು, ಮಾಜಿ ಸದಸ್ಯ ಕೆ.ಎನ್. ಕುಮಾರ್, ಮುಖಂಡರಾದ ನಾಗೇಶ್, ಮರಿಸ್ವಾಮಿ, ಸಿದ್ದರಾಜು, ಪುಟ್ಟಮಾದಯ್ಯ, ಎಸ್.ನಂಜುಂಡಯ್ಯ, ಕೆಬ್ಬೇಹುಂಡಿ ನಿಂಗರಾಜು, ದೊಡ್ಡೇಬಾಗಿಲು ಮಹದೇವಯ್ಯ, ಚಿದರವಳ್ಳಿ ಚಂದ್ರಶೇಖರ್, ಪೊಲೀಸ್ ಇನ್‌ಸ್ಪೆಕ್ಟರ್ ಆನಂದ್ ಕುಮಾರ್, ವೈದ್ಯ ಡಾ.ದೇವರಾಜು, ಶಿಕ್ಷಕ ಕೆ.ರುದ್ರಸ್ವಾಮಿ, ಚಿನ್ನಕುಟ್ಟಿ ಮಹದೇವಸ್ವಾಮಿ, ರಾಜಮಣಿ, ಕರಗಯ್ಯ, ಅಂಗಡಿ ಮೂರ್ತಿ, ಅಂಬೇಡ್ಕರ್ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಸಂಘದ ಅಧ್ಯಕ್ಷ ಎನ್. ರವಿ, ಉಪಾಧ್ಯಕ್ಷ ನಾಗಣ್ಣ, ಗೌರವಾಧ್ಯಕ್ಷ ಕೆ.ಎಸ್. ಮಧು, ಖಜಾಂಚಿ ಎಂ.ರಮೇಶ್, ರವಿಶಂಕರ್, ಕಿರಣ್, ಕೆ.ಪಿ.ಪ್ರಭುಸ್ವಾಮಿ, ಕೆ.ಆರ್.ಪ್ರದೀಪ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಚುನಾವಣೆ ಸಾಕು ಎನಿಸಿತ್ತು...

ಮಾಜಿ ಕೇಂದ್ರ ಸಚಿವ ಎಂ.ರಾಜಶೇಖರಮೂರ್ತಿ ಅವರಂತೆ ಸುದೀರ್ಘ ಅವಧಿಗೆ ನರಸೀಪುರ ಕ್ಷೇತ್ರವನ್ನು ಪ್ರತಿನಿಧಿಸಿ, ಸಚಿವನಾಗಿದ್ದ ನನಗೆ ಚುನಾವಣೆ ಸಾಕು ಎನಿಸಿತ್ತು. ಜನ ನೀವೇ ಬೇಕು, ನಿಲ್ಲಲೇ ಬೇಕು ಎಂದು ಬಯಸಿ ಗೆಲ್ಲಿಸಿಬಿಟ್ಟರು. ನಮ್ಮ ರಾಜಕೀಯ ವಿರೋಧಿಗಳು ಮಹದೇವಪ್ಪ ಸಾಕು ಅಂದು ಬಿಟ್ಟರೆ ಗೆದ್ದುಬಿಡುವ ಅಂದುಕೊಂಡಿದ್ದರು. ಅದರಲ್ಲಿ ನಮ್ಮ ಅಪ್ಪ ಬೇಡ ಅಂದ್ರೆ ಎಂಎಲ್‌ಎ ಸ್ಥಾನ ಹೊಡ್ಕಂಡು ಬಿಡುವಾ ಅಂತಾನೂ ಸುನೀಲ್ ಕಾಯ್ಕಂಡಿದ್ದ. ಅವರೆಲ್ಲರಿಗೂ ನಿರಾಶೆಯಾಯಿತು. ಮಹತ್ತರವಾದ ಸಮಾಜ ಕಲ್ಯಾಣ ಇಲಾಖೆಯನ್ನು ಸಿಎಂ ಸಿದ್ದರಾಮಯ್ಯ ಹಾಗೂ ಪಕ್ಷ ನೀಡಿದ್ದಕ್ಕೆ ಹೆಮ್ಮೆಯಿದೆ. ಸಚಿವನಾಗಿ ಸಂವಿಧಾನ ಆಶಯಗಳ ಜಾರಿಗೆ ಪ್ರಾಮಾಣಿಕ ಪ್ರಯತ್ನ ಆರಂಭಿಸಿದ್ದೇನೆ.

– ಡಾ.ಹೆಚ್.ಸಿ.ಮಹದೇವಪ್ಪ, ಸಚಿವ

2025 ಏಪ್ರಿಲ್‌ನಿಂದ ದೇಶಾದ್ಯಂತ ಪೀಕ್ ಅವರ್‌ನಲ್ಲಿ ವಿದ್ಯುತ್ ದರ ಶೇ.20ರಷ್ಟು ಹೆಚ್ಚಳ



ನವದೆಹಲಿ, ಜೂ.24–ವಿದ್ಯುಚ್ಛಕ್ತಿ (ಗ್ರಾಹಕರ ಹಕ್ಕುಗಳು) ನಿಯಮಗಳಲ್ಲಿ ಮಾಡಲಾದ ತಿದ್ದುಪಡಿಗಳ ಪ್ರಕಾರ, ಏಪ್ರಿಲ್ 1, 2025ರಿಂದ ಪೀಕ್ ಅವರ್‌ಗಳಲ್ಲಿ ವಿದ್ಯುತ್ ಬಳಕೆಯ ಶೇ.10ರಿಂದ 20 ರಷ್ಟು ಹೆಚ್ಚು ಪಾವತಿಸಬೇಕಾಗುತ್ತದೆ. ಆದರೆ ಹಗಲಿನ ಸಮಯ ದಲ್ಲಿ ಸಾಮಾನ್ಯ ದರಕ್ಕಿಂತ ಶೇಕಡಾ 10ರಿಂದ 20ರಷ್ಟು ಕಡಿಮೆಯಾಗಲಿದೆ.

ಶುಕ್ರವಾರ ವಿದ್ಯುತ್ ಸಚಿವಾಲಯವು ವಿದ್ಯುತ್ (ಗ್ರಾಹಕರ ಹಕ್ಕುಗಳು) ನಿಯಮಗಳಲ್ಲಿ ಎರಡು ಬದಲಾವಣೆಗಳನ್ನು ಪ್ರಕಟಿಸಿದೆ. ದಿನದ ಸಮಯ ದರ ತೆರಿಗೆ ಮತ್ತು ಸ್ಮಾರ್ಟ್ ಮೀಟರಿಂಗ್ ನಿಬಂಧನೆಗಳ ತರ್ಕಬದ್ಧಗೊಳಿಸುವಿಕೆ ಎಂಬ ವಿಧಾನ ಪ್ರಕಟಿಸಿದೆ. ToD ಕಾರ್ಯವಿಧಾನದ ಪ್ರಕಾರ ಹಗಲಿನಲ್ಲಿ ವಿದ್ಯುತ್ ದರ ಸಾಮಾನ್ಯ ದರಕ್ಕಿಂತ ಶೇ.10ರಿಂದ 20ರಷ್ಟು ಕಡಿಮೆಯಿರುತ್ತದೆ. ಆದರೆ ಬೆಳಗ್ಗೆ ಮತ್ತು ರಾತ್ರಿ ಸಮಯದಲ್ಲಿ ದರವು ಶೇ.10ರಿಂದ 20ರಷ್ಟು ಹೆಚ್ಚಾಗಲಿದೆ.

10 KW ಮತ್ತು ಅದಕ್ಕಿಂತ ಹೆಚ್ಚಿನ ಬಳಕೆಯನ್ನು ಹೊಂದಿರುವ ವಾಣಿಜ್ಯ ಮತ್ತು ಕೈಗಾರಿಕಾ ಉದ್ದೇಶಗಳ ಬಳಕೆ ಗ್ರಾಹಕರಿಗೆ 1 ಏಪ್ರಿಲ್ 2024 ರಿಂದ ಹೊಸ ದರ ಅನ್ವಯವಾಗುತ್ತದೆ. ರೈತರನ್ನು ಹೊರತುಪಡಿಸಿ ಉಳಿದ ಎಲ್ಲಾ ಗ್ರಾಹಕರಿಗೆ, ಈ ನಿಯಮವು 1ನೇ ಏಪ್ರಿಲ್ 2025 ರಿಂದ ಅನ್ವಯಿಸುತ್ತದೆ.


ರಾತ್ರಿ ಮತ್ತು ಮುಂಜಾನೆ ಉಷ್ಣ, ಜಲವಿದ್ಯುತ್ ಮತ್ತು ಅನಿಲ ಆಧಾರಿತ ಸಾಮರ್ಥ್ಯವನ್ನು ಬಳಸಲಾಗುತ್ತದೆ. ಅವು ಸೌರ ಶಕ್ತಿಗಿಂತ ಹೆಚ್ಚಿನ ವೆಚ್ಚವನ್ನು ಹೊಂದಿವೆ. ಗ್ರಾಹಕರು ತಮ್ಮ ವಿದ್ಯುತ್ ವೆಚ್ಚವನ್ನು ಕಡಿಮೆ ಮಾಡಲು ಸೌರ ಸಮಯದಲ್ಲಿ ಹೆಚ್ಚಿನ ಚಟುವಟಿಕೆಗಳನ್ನು ಯೋಜಿಸಬಹುದು.

ಹೆಚ್ಚಿನ ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಗಳು ಈಗಾಗಲೇ ದೊಡ್ಡ ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ದಿನದ ಸಮಯ ದರಗಳನ್ನು ToD ಜಾರಿಗೆ ತಂದಿವೆ. ಸ್ಮಾರ್ಟ್ ಮೀಟರ್‌ಗಳ ಸ್ಥಾಪನೆಯೊಂದಿಗೆ, ದರ ನೀತಿಯ ಆದೇಶದಂತೆ ದೇಶೀಯ ಗ್ರಾಹಕರ ಮಟ್ಟದಲ್ಲಿ ಮೀಟರಿಂಗ್ ಟಿಒಡಿಯನ್ನು ಪರಿಚಯಿಸಲಾಗುತ್ತದೆ.

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

2ನೇ ವರ್ಷದ ಸವಿನೆನಪು



ಗೋವಿಂದ ರಾಜು
ನಿವೃತ್ತ ಎಪಿಎಂಸಿ, ಅಸಿಸ್ಟೆಂಟ್ ಡೈರೆಕ್ಟರ್, ಮೈಸೂರು
ಜನನ: 25.03.1952, ಮರಣ: 16.07.2021
ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಮಂಗಳಮ್ಮ ಮತ್ತು ಕುಟುಂಬವರ್ಗದವರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರವರು [illegible] ಸ್ವತ್ತನ್ನು ಇದರ ಮಾಲೀಕರಾದ ಮೈಸೂರು [illegible] ಮನೆ ನಂ. 68ರಲ್ಲಿ ವಾಸವಾಗಿರುವ [illegible] 71 ವರ್ಷ ವಯಸ್ಸಿನ ಶ್ರೀ [illegible] ಸುರೇಶ್ ಬಾಬುರವರಿಂದ, ಆಧಾರ್ ಸಂಖ್ಯೆಯ : 480516163077 [illegible]
ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ, ಬೇರೆ ಯಾವುದೇ ವ್ಯಕ್ತಿ(ಗಳು)/ ಸಂಘ ಸಂಸ್ಥೆಗಳಿಗೆ, ಯಾವುದೇ [illegible] ಸ್ವಾಧೀನ, ಮಾಲೀಕತ್ವ [illegible] ಕ್ಲೇಮ್, [illegible] ಕ್ಲೇಮ್, [illegible] ಈ ಪ್ರಕಟಣೆ ಪ್ರಕಟವಾದ ದಿನದಿಂದ 14 ದಿನಗಳ ಒಳಗಾಗಿ ಈ ಕೆಳಗೆ ನಮೂದಿಸಿರುವ ಕಚೇರಿಗೆ ದಾಖಲೆಗಳ ಸಮೇತ [illegible] ನಮ್ಮ ಕಕ್ಷಿದಾರರು [illegible] ಸದ್ಭಾವಿಕ ವ್ಯಕ್ತಿಗಳೆಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, [illegible] ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 191 [illegible] 4 ಎಕರೆ 35 ಗುಂಟೆಗಳ [illegible] 35 ಗುಂಟೆಗಳ ಕೃಷಿ ಜಮೀನಿಗೆ ಚಕ್ಕುಬಂದಿ.
ಪೂರ್ವ : ಸರ್ವೆ ನಂಬರ್ 191ರ [illegible], ಪಶ್ಚಿಮ : [illegible] ಸೇರಿದ ಸ್ವತ್ತು, ಉತ್ತರ : [illegible] ಸೇರಿದ ಸ್ವತ್ತು, ದಕ್ಷಿಣ: ರಸ್ತೆ.

ಸಹಿ/– ಶ್ರೀನಿಧಿ ಪಿ.
ವಕೀಲರು ಮತ್ತು ಕಾನೂನು ಸಲಹೆಗಾರರು
ನಂ.1037, [illegible] 5/1,
[illegible] ರಸ್ತೆ, [illegible],
ಮೈಸೂರು. ಮೊ: 9482584824
ದಿನಾಂಕ: 24–06–23. ಸ್ಥಳ: ಮೈಸೂರು

AFFIDAVIT

Manjunath Das, S/o. Narasimha Das, aged about 51 years, residing at Door No. 213, 11th Cross, 4th Main, Bank Employees Colony. Bogadi, Mysuru-570026, do hereby solemnly affirm and state on oath that, Manjunath Das & Manjunatha, both the names belongs to me only and there is no difference between the persons except the names. In future I will use my name as Manjunath Das in all the records and also I put my signature in the same name, vide affidavit sworn in before Notary Venkatesha Patawardhana, Mysore dated 22.6.2023.

Sd/- Manjunath Das

6ನೇ ವರ್ಷದ ಸವಿನೆನಪು



ವಿ.ಚಿಕ್ಕತಾಯಮ್ಮ
ಆರೋಗ್ಯ ಇಲಾಖೆ (ನಿವೃತ್ತ)
ಮರಣ: 25.06.2017

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ತಂಗಿ ಸುಭದ್ರ, ಮೊಮ್ಮಗಳು ರಚನಾ ಹಾಗೂ ಕುಟುಂಬ ವರ್ಗದವರು ನೀಲಕಂಠನಗರ ನಂಜನಗೂಡು

ನಾಲ್ಕನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನೀವು ನಮ್ಮ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ
ದುಃಖತಪ್ತರು: ಪತ್ನಿ ರತ್ನಮ್ಮ, ಮಕ್ಕಳು, ಸೊಸೆ ಮತ್ತು ಅಳಿಯಂದಿರು ಹಾಗೂ ಮೊಮ್ಮಕ್ಕಳು, ಗಿರಿದರ್ಶಿನಿ ಬಡಾವಣೆ, ಮೈಸೂರು.
ಬಸವರಾಜು

5ನೇ ವರ್ಷದ ಸವಿನೆನಪು



ಶ್ರೀಮಾನ್ ಪುಟ್ಟಯ್ಯ
KSTRC
(ಲೇಟ್ ದಾಸಶೆಟ್ಟಿ ಕುಟುಂಬ)
ಕಲ್ಲಂಬಳ್ಳಿ ಗ್ರಾಮ, ಚಾ.ನಗರ, ತಾ||

ನೀವು ತೋರಿಸಿದ ದಾರಿಯಲ್ಲಿ ನಡೆಯುತ್ತಿರುವ ದುಃಖತಪ್ತರು: ಪತ್ನಿ ನಾಗಮ್ಮ, ಮಗ, ಪಿ.ದುಹೇಶ, ಸೊಸೆ, ಮಗಳು ಭಾಗ್ಯ, ರೇಖಾ ಮತ್ತು ಮೊಮ್ಮಕ್ಕಳು ವಿದ್ಯಾನಗರ, ಮೈಸೂರು